ಜಿಲ್ಲಾ ಪಂಚಾಯತ, ಬೆಳಗಾವಿ

ಸನ್ 2019-20 ನೇ ಸಾಲಿನ
ಆಡಳಿತ ವರದಿ

ಜಿಲ್ಲಾ ಪಂಚಾಯತ, ಬೆಳಗಾವಿ

ಶ್ರೀ ರಾಮಕೃಷ್ಣ ಮಿಷನ್ ಆಶ್ರಮ, ಬೆಳಗಾವಿ

ಬೈಲಹೊಂಗಲ ತಾಲೂಕಿನ ನೇಸರಗಿ ಗ್ರಾಮದ ಮೇಟ್ರಿಕ್ ಪೂರ್ವ ಬಾಲಕರ ನಿಲಯ ಹೊಸ ಉಟದ ಕೋಣೆ (ಅಂದಾಜು ವೆಚ್ಚ ರೂ.4.79 ಲಕ್ಷ)

ಮಾನ್ಯ ಸಚಿವರಾದ ಶ್ರೀಮತಿ ಶಶಿಕಲಾ ಅ ಜೊಲ್ಲೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪೋಷಣ ಅಭಿಯಾನ ಯೋಜನೆಯ ಕಾರ್ಯಕ್ರಮದಲ್ಲಿ ಭಾಗ್ಯಲಕ್ಷ್ಮೀ ಯೋಜನೆಯ ಫಲಾನುಭವಿಗಳಿಗೆ ಬಾಂಡ್ ವಿತರಿಸಿದರು.

ಮಾತೃಪೂರ್ಣ ಯೋಜನೆಯಡಿ ಗರ್ಭಿಣಿ/ಬಾಣಂತಿಯರಿಗೆ ಅಂಗನವಾಡಿ ಕೇಂದ್ರಗಳಲ್ಲಿ ಮಧ್ಯಾಹ್ನದ ಪೌಷ್ಠಿಕ ಬಿಸಿಯೂಟವನ್ನು ನೀಡಲಾಗುತ್ತಿದೆ.

ಸನ್ 2018–19 ಸಾಲಿನ ಎಂ.ಜಿ.ಎನ್. ಆರ್. ಇ.ಜಿ.ಎ ಯೋಜನೆಯಡಿಯಲ್ಲಿ ಚಿಕ್ಕೋಡಿ ತಾಲೂಕಿನ ಖಡಕಲಾಟ ಗ್ರಾಮದ ಸುರೇಶ ಹಳಿಜಾಳೆ ಇವರ ರಿ.ಸ. ನಂ. 39 ರ ಹಳ್ಳಕ್ಕೆ ಮಲ್ಟಿ ಆರ್ಚ ಚಕ್ ಡ್ಯಾಂ ನಿರ್ಮಾಣ ಮಾಡುವುದು.
ಅಂದಾಜು ಮೊತ್ತ : ರೂ. 55.00 ಲಕ್ಷ

ವೀರರಾಣಿ ಕಿತ್ತೂರ ಚನ್ನಮ್ಮಾ

ಸನ್ 2019-20

ಜಿಲ್ಲಾ ಪಂಚಾಯತ, ಬೆಳಗಾವಿ

ಶ್ರೀಮತಿ ಆಶಾ ಪ್ರ. ಐಹೊಳೆ
ಅಧ್ಯಕ್ಷರು, ಜಿಲ್ಲಾ ಪಂಚಾಯತ, ಬೆಳಗಾವಿ
ಮೋ: 9663397777

ಶ್ರೀ ಅರುಣ ಅ. ಕಟಾಂಬಳೆ
ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ, ಬೆಳಗಾವಿ
ಮೋ: 9845256373



ಶ್ರೀ ಫಕೀರಪ್ಪ ದೊಡ್ಡಯಲ್ಲಪ್ಪ ಹದ್ದನ್ನವರ
ಅಧ್ಯಕ್ಷರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಜಿಲ್ಲಾ ಪಂಚಾಯತ, ಬೆಳಗಾವಿ
ಮೋ: 9902851243

ಶ್ರೀ ಸಿದ್ದಪ್ಪಾ ಅಪ್ಪಣ್ಣ ಮುದಕಣ್ಣವರ
ಅಧ್ಯಕ್ಷರು, ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ
ಜಿಲ್ಲಾ ಪಂಚಾಯತ, ಬೆಳಗಾವಿ
ಮೋ: 9448357440

ಶ್ರೀ ನಿಂಗಪ್ಪ ರಾಮಪ್ಪ ಪಕಾಂಡಿ
ಅಧ್ಯಕ್ಷರು, ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ
ಜಿಲ್ಲಾ ಪಂಚಾಯತ, ಬೆಳಗಾವಿ
ಮೋ: 9900457785

ಸನ್ 2019-20
ಜಿಲ್ಲಾ ಪಂಚಾಯತ, ಬೆಳಗಾವಿ

ಡಾ. ರಾಜೇಂದ್ರ ಕೆ.ವಿ. ಭಾ.ಆ.ಸೇ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಶ್ರೀ ದರ್ಶನ ಹೆಚ್. ವಿ. (ಪ್ರಸ್ತುತ) ಭಾ.ಆ.ಸೇ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಶ್ರೀ ಡಿ. ಎಂ. ಜಕ್ಕಪ್ಪಗೋಳ
ಉಪ ಕಾರ್ಯದರ್ಶಿಗಳು (ಆಡಳಿತ)
ಯೋಜನೆ ನಿರ್ದೇಶಕರು (ಡಿ.ಆರ್.ಡಿ.ಎ) (ಪ್ರಭಾರ)

ಶ್ರೀ ಎಸ್. ಬಿ. ಮುಳ್ಳಳಿ
ಉಪಕಾರ್ಯದರ್ಶಿಗಳು (ಅಭಿವೃದ್ಧಿ)

ಶ್ರೀ ವಿನೋದ ಅನ್ವೇಕರ (ಪ್ರಸ್ತುತ)
ಮುಖ್ಯ ಯೋಜನಾಧಿಕಾರಿಗಳು

ಶ್ರೀ ಪರಶುರಾಮ ಬಿ. ದುಡಗುಂಟಿ
ಮುಖ್ಯ ಲೆಕ್ಕಾಧಿಕಾರಿಗಳು

ಶ್ರೀಮತಿ ಜಿ.ಪಿ. ಸುಂಕದ (ಪ್ರಭಾರ)
ಮುಖ್ಯ ಯೋಜನಾಧಿಕಾರಿಗಳು

ಶ್ರೀ ರಾಹುಲ್ ಅ. ಕಾಂಬಳೆ
ಸಹಾಯಕ ಕಾರ್ಯದರ್ಶಿಗಳು (ಆಡಳಿತ)

ಶ್ರೀ ಬಸವರಾಜ ಆರ್. ಗಂಗಾಧರ
ಸಹಾಯಕ ಯೋಜನಾಧಿಕಾರಿಗಳು
(ಎಸ್.ಜಿ. ಎಸ್. ವಾಯ್)

ಜಿಲ್ಲಾ ಪಂಚಾಯತ, ಸದಸ್ಯರು

ಶ್ರೀಮತಿ ಮಾಧುರಿ ಬಾಬಾಸಾಹೇಬ ಶಿಂಧೆ
ಮತಕ್ಷೇತ್ರ : ಅನಂತಪೂರ ತಾ: ಅಥಣಿ
ಮೋ: 9620688696

ಶ್ರೀಮತಿ ದಿವಾನಮಳ ಶಕುಂತಲಾ ಶಿವಾನಂದ
ಮತಕ್ಷೇತ್ರ : ಅಥಣಿ (ಗ್ರಾಮೀಣ)
ತಾ : ಅಥಣಿ ಮೋ:9449608680

ಶ್ರೀಮತಿ ನಾಯಿಕ ಸುರೇಖಾ ಅಮುಲ
ಮತಕ್ಷೇತ್ರ : ದರೂರ
ತಾ : ಅಥಣಿ ಮೋ:9448014061

ಶ್ರೀ ಅಜೀತ ಭರಮು ಚೌಗಲೆ
ಮತಕ್ಷೇತ್ರ : ಕಾಗವಾಡ
ತಾ : ಅಥಣಿ ಮೋ: 9448364683

ಶ್ರೀಮತಿ ಉಮಾ ರೇ ಪಾಟೀಲ
ಮತಕ್ಷೇತ್ರ : ಮದಭಾವಿ
ತಾ : ಅಥಣಿ ಮೋ: 9341571694

ಶ್ರೀ ಶ್ರೀಶೈಲ ಅಣ್ಣಪ್ಪಾ ಗಸ್ತಿ
ಮತಕ್ಷೇತ್ರ : ಸತ್ತಿ ತಾ: ಅಥಣಿ
ಮೋ: 9986272492

ಶ್ರೀ ಗುರಪ್ಪ ಶಿವನಿಂಗ ದಾಶ್ಯಾಳ
ಮತಕ್ಷೇತ್ರ : ತೇಲಸಂಗ ತಾ: ಅಥಣಿ
ಮೋ: 9886078280

ಶ್ರೀಮತಿ ಪುಟ್ಟರಾಜಮ್ಮ ಶ್ರೀಶೈಲ ತುಗಶೆಟ್ಟಿ (ಶೆಟ್ಟಿ)
ಮತಕ್ಷೇತ್ರ : ಮೋಳೆ
ತಾ : ಅಥಣಿ ಮೋ:8970591999

ಶ್ರೀಮತಿ ಬೂಟಾಳಿ ಭಾರತಿ ಬಸಪ್ಪ
ಮತಕ್ಷೇತ್ರ : ಐಗಳಿ ತಾ: ಅಥಣಿ
ಮೋ: 9902743647

ಶ್ರೀ ಈರಣ್ಣ ಮಹಾರುದ್ರಪ್ಪ ಕರೀಕಟ್ಟಿ
ಮತಕ್ಷೇತ್ರ : ಬೆಳವಡಿ
ತಾ : ಬೈಲಹೊಂಗಲ ಮೋ: 9611309069

ಶ್ರೀ ಶಂಕರ ಭ. ಮಾಡಲಗಿ
ಮತಕ್ಷೇತ್ರ : ಬುಡರಕಟ್ಟಿ ತಾ: ಬೈಲಹೊಂಗಲ
ಮೋ: 9980823492

ಶ್ರೀಮತಿ ಲಾವಣ್ಯ ಶ್ಯಾಮಸುಂದರ ಶಿಲೆದಾರ
ಮತಕ್ಷೇತ್ರ : ನಾಗನೂರ ತಾ: ಬೈಲಹೊಂಗಲ
ಮೋ: 8050357921

ಶ್ರೀ ಅರಕೇರಿ ನಿಂಗಪ್ಪ ರಾಮಪ್ಪ
ಮತಕ್ಷೇತ್ರ : ನೇಸರಗಿ
ತಾ : ಬೈಲಹೊಂಗಲ ಮೋ: 7026780123

ಶ್ರೀಮತಿ ಪಾಟೀಲ ರೋಹಿಣಿ ಬಾಬಾಸಾಹೇಬ
ಮತಕ್ಷೇತ್ರ : ಸಂಪಗಾಂಗ ತಾ: ಬೈಲಹೊಂಗಲ
ಮೋ: 8861117677

ಶ್ರೀಮತಿ ಕಾದ್ರೋಳ್ಳಿ ರಾಧಾ ಶಾಮ
ಮತಕ್ಷೇತ್ರ : ಅಂಬಡಗಟ್ಟಿ
ತಾ : ಬೈಲಹೊಂಗಲ ಮೋ: 8494862806

ಶ್ರೀಮತಿ ಕೋಲಕಾರ ಬಸವ್ವ ಬಸಪ್ಪ
ಮತಕ್ಷೇತ್ರ : ಕಾದ್ರೋಳ್ಳಿ ತಾ: ಬೈಲಹೊಂಗಲ
ಮೋ: 9844455663

ಶ್ರೀ ಅನೀಲ ಪಾರೀಸಪ್ಪ ಮ್ಯಾಕಲಮರ್ಡಿ
ಮತಕ್ಷೇತ್ರ : ಸಂಗೊಳ್ಳಿ ತಾ: ಬೈಲಹೊಂಗಲ
ಮೋ: 9902690185

ಶ್ರೀ ಶಂಕರಗೌಡ ಶಿವನಗೌಡ ಪಾಟೀಲ
ಮತಕ್ಷೇತ್ರ : ಬಾಗೇವಾಡಿ ತಾ: ಬೆಳಗಾವಿ
ಮೋ: 9901498987

ಶ್ರೀ ಮೋಹನ ಯ. ಮೋರೆ
ಮತಕ್ಷೇತ್ರ : ಬೆಳಗುಂದಿ ತಾ: ಬೆಳಗಾವಿ
ಮೋ: 9686195264

ಶ್ರೀಮತಿ ಸುಮನ ಮಡಿವಾಳಪ್ಪಾ ಪಾಟೀಲ
ಮತಕ್ಷೇತ್ರ : ಹಲಗಾ ತಾ: ಬೆಳಗಾವಿ
ಮೋ: 9481743432

ಶ್ರೀಮತಿ ಬುಡರಿ ಮಲ್ಲವ್ವಾ ಯಲ್ಲಪ್ಪ
ಮತಕ್ಷೇತ್ರ : ಹುದಲಿ ತಾ: ಬೆಳಗಾವಿ
ಮೋ: 9480498271

ಶ್ರೀ ಸಿದ್ದಗೌಡಾ ಬಾಬುರಾವ ಸುಣಗಾರ
ಮತಕ್ಷೇತ್ರ : ಕಾಕತಿ ತಾ: ಬೆಳಗಾವಿ
ಮೋ: 9986095794

ಶ್ರೀ ಅನಗೋಳಕರ ಕೃಷ್ಣಾ ರಾಮನಿಂಗ
ಮತಕ್ಷೇತ್ರ : ಸಾಂಬ್ರಾ ತಾ: ಬೆಳಗಾವಿ
ಮೋ: 7259999294

ಶ್ರೀಮತಿ ಲಕ್ಷೀ ವಿಠ್ಠಲ ಪಾರ್ವತಿ
ಮತಕ್ಷೇತ್ರ : ಸುಳೇಭಾವಿ ತಾ: ಬೆಳಗಾವಿ
ಮೋ: 9739436769

ಶ್ರೀಮತಿ ಸರಸ್ವತಿ ರಾಮಚಂದ್ರ ಪಾಟೀಲ
ಮತಕ್ಷೇತ್ರ : ಉಚಗಾಂವ ತಾ: ಬೆಳಗಾವಿ
ಮೋ: 9480990333

ಶ್ರೀ ರಮೇಶ ಪರಶುರಾಮ ಗೋರಲ
ಮತಕ್ಷೇತ್ರ : ಯಳ್ಳೂರು ತಾ: ಬೆಳಗಾವಿ
ಮೋ: 9880608211

ಶ್ರೀಮತಿ ಮಾಧುರಿ ಅನೀಲ ಹೆಗಡೆ
ಮತಕ್ಷೇತ್ರ : ಹಿಂಡಲಗಾ ತಾ: ಬೆಳಗಾವಿ
ಮೋ: 9164315984

ಶ್ರೀಮತಿ ಜೈನೋಜಿ ಶಾಂತಾ ಮಾರುತಿ
ಮತಕ್ಷೇತ್ರ : ಮಚ್ಚೆ ತಾ: ಬೆಳಗಾವಿ
ಮೋ: 9986790058

ಜಿಲ್ಲಾ ಪಂಚಾಯತ, ಸದಸ್ಯರು

ಶ್ರೀ ಸಿದ್ದು ನಾಗಪ್ಪಾ ನರಾಟೆ
ಮತಕ್ಷೇತ್ರ : ಅಕ್ಕೋಳ ತಾ: ಚಿಕ್ಕೋಡಿ
ಮೋ: 9972293530

ಶ್ರೀ ಪವಾರ ರಾಜೇಂದ್ರ ರಾಮಪ್ಪಾ
ಮತಕ್ಷೇತ್ರ : ಭೋಜ ತಾ: ಚಿಕ್ಕೋಡಿ
ಮೋ: 9731946922

ಶ್ರೀಮತಿ ಕುರುಬರ ಲಕ್ಷ್ಮೀ ನಿಂಗಪ್ಪಾ
ಮತಕ್ಷೇತ್ರ : ಕರೋಶಿ ತಾ: ಚಿಕ್ಕೋಡಿ
ಮೋ: 9739328169

ಶ್ರೀಮತಿ ಕೋರೆ ಸ್ಮೀತಾ ಸುರೇಶ
ಮತಕ್ಷೇತ್ರ : ಕೇರೂರ ತಾ: ಚಿಕ್ಕೋಡಿ
ಮೋ: 9448081007

ಶ್ರೀಮತಿ ಪಾಟೀಲ ಸ್ನೇಹಲತಾ ಸತೀಶ
ಮತಕ್ಷೇತ್ರ : ಖಡಕಲಾಟ ತಾ: ಚಿಕ್ಕೋಡಿ
ಮೋ: 9343863030

ಶ್ರೀ ಜಯವಂತ ಮಸು ಕಾಂಬಳೆ
ಮತಕ್ಷೇತ್ರ : ಕೊಗನೋಳಿ ತಾ: ಚಿಕ್ಕೋಡಿ
ಮೋ: 9481208340

ಶ್ರೀಮತಿ ಭಾರತಿ ಅಣ್ಣಾಸಹೇಬ ಪವಾರ
ಮತಕ್ಷೇತ್ರ : ಮಾಂಜರಿ ತಾ: ಚಿಕ್ಕೋಡಿ
ಮೋ: 9448594450

ಶ್ರೀ ಕತ್ತಿ ಕುಶ ರಮೇಶ
ಮತಕ್ಷೇತ್ರ : ನಾಗರಮುನ್ನೋಳ್ಳಿ ತಾ: ಹುಕ್ಕೇರಿ
ಮೋ: 9448990826

ಶ್ರೀ ಖೋತ ಸುದರ್ಶನ ಅಣ್ಣಾಸಾಹೇಬ
ಮತಕ್ಷೇತ್ರ : ನೇಜ ತಾ: ಚಿಕ್ಕೋಡಿ
ಮೋ: 7204882909

ಶ್ರೀಮತಿ ಶೈಲಜಾ ವಿದ್ಯಾಧರ ಕಾಗೆ
ಮತಕ್ಷೇತ್ರ : ಪಟ್ಟಣಕಡಿ ತಾ: ಚಿಕ್ಕೋಡಿ
ಮೋ: 9916847908

ಶ್ರೀಮತಿ ಉಗಳೆ ಸುಮಿತ್ರಾ ದಿಲೀಪಕುಮಾರ
ಮತಕ್ಷೇತ್ರ : ಕಾರದಗಾ ತಾ: ಚಿಕ್ಕೋಡಿ
ಮೋ: 9731979289

ಶ್ರೀಮತಿ ಸುಜಾತ ಸೂರ್ಯಕಾಂತ ಚೌಗುಲೆ
ಮತಕ್ಷೇತ್ರ : ಹಿರೇಕುಡಿ ತಾ: ಚಿಕ್ಕೋಡಿ
ಮೋ: 9008119778

ಶ್ರೀಮತಿ ನಾಯಕ ಶೋಭಾ ಮಲ್ಲಿಕಾರ್ಜುನ
ಮತಕ್ಷೇತ್ರ : ಅಕ್ಕತಂಗೇರಹಾಳ ತಾ: ಗೋಕಾಕ
ಮೋ: 9611380759

ಶ್ರೀ ರಾಮಪ್ಪ ಬಸವಣ್ಣೆ ಸುಂಬಳಿ
ಮತಕ್ಷೇತ್ರ : ಅಂಕಲಗಿ ತಾ: ಗೋಕಾಕ
ಮೋ: 9731419514

ಶ್ರೀಮತಿ ವಾಸಂತಿ ಹಣವಂತ ತೇರದಾಳ
ಮತಕ್ಷೇತ್ರ : ಹಳ್ಳೂರ ತಾ: ಗೋಕಾಕ
ಮೋ: 9886567358

ಶ್ರೀಮತಿ ಪರುಶೆಟ್ಟಿ ಶಕುಂತಲಾ ಅಶೋಕ
ಮತಕ್ಷೇತ್ರ : ಕೌಜಲಗಿ ತಾ: ಗೋಕಾಕ
ಮೋ: 9980178276

ಶ್ರೀ ಮಡ್ಡೆಪ್ಪ ಲಕ್ಷ್ಮಣ ತೋಳಿನವರ
ಮತಕ್ಷೇತ್ರ : ಮಮದಾಪುರ ತಾ: ಗೋಕಾಕ
ಮೋ: 9448194214

ಶ್ರೀಮತಿ ಶಶಿಕಲಾ ರಾಜೇಂದ್ರ ಸಣ್ಣಕ್ಕಿ
ಮತಕ್ಷೇತ್ರ : ಮೆಳವಂಕಿ ತಾ: ಗೋಕಾಕ
ಮೋ: 9448148208

ಶ್ರೀ ಕೊಪ್ಪದ ಗೋವಿಂದ ಭೀಮಪ್ಪ
ಮತಕ್ಷೇತ್ರ : ಯಾದವಾಡ ತಾ: ಗೋಕಾಕ
ಮೋ: 9449854364

ಶ್ರೀಮತಿ ಜೋಡಟ್ಟಿ ಮೀನಾಕ್ಷಿ ಸುಧೀರ
ಮತಕ್ಷೇತ್ರ : ಶಿಂಧಿಕುರಬೇಟ ತಾ: ಗೋಕಾಕ
ಮೋ: 9448809065

ಶ್ರೀಮತಿ ಕಸ್ತೂರಿ ಬಸವಂತ ಕಮತಿ
ಮತಕ್ಷೇತ್ರ : ತುಕ್ಕಾನಟ್ಟಿ ತಾ: ಗೋಕಾಕ
ಮೋ: 8105056402

ಶ್ರೀಮತಿ ಬಸವ್ವ ಕಾಮಪ್ಪ ಕುಳ್ಳೂರ
ಮತಕ್ಷೇತ್ರ : ವಡೇರಹಟ್ಟಿ ತಾ: ಗೋಕಾಕ
ಮೋ: 9880970118

ಶ್ರೀ ಕಾಗಲ ತುಕಾರಾಮ ರಾಮಜ್ಜಪ್ಪ
ಮತಕ್ಷೇತ್ರ : ಮಕ್ಕಳಗೇರಿ ತಾ: ಗೋಕಾಕ
ಮೋ: 9448470637

ಶ್ರೀ ಕತ್ತಿ ನಿಖಿಲ ಉಮೇಶ
ಮತಕ್ಷೇತ್ರ : ಅಮ್ಮಣಗಿ ತಾ: ಹುಕ್ಕೇರಿ
ಮೋ: 9686698921

ಶ್ರೀಮತಿ ಅನ್ನಪೂರ್ಣಾ ಸದಾಶಿವ ಮಾಳಗೆ
ಮತಕ್ಷೇತ್ರ : ಬೆಲ್ಲದಬಾಗೇವಾಡಿ ತಾ: ಹುಕ್ಕೇರಿ
ಮೋ: 9901521167

ಶ್ರೀಮತಿ ಪಾಟೀಲ ಮನಿಶಾ ರಮೇಶ
ಮತಕ್ಷೇತ್ರ : ದಡ್ಡಿ ತಾ: ಹುಕ್ಕೇರಿ
ಮೋ: 9632717117

ಶ್ರೀ ಅರ್ಜುನ ಯಲ್ಲನಾಯ್ಕ ಪಾಟೀಲ
ಮತಕ್ಷೇತ್ರ : ಘೋಡಗೇರಿ ತಾ: ಹುಕ್ಕೇರಿ
ಮೋ: 8762108179

ಶ್ರೀ ಮಾಹಾಂತೇಶ ಮಲ್ಲಪ್ಪ ಮಗದುಮ್ಮ
ಮತಕ್ಷೇತ್ರ : ಹೆಬ್ಬಾಳ ತಾ: ಹುಕ್ಕೇರಿ
ಮೋ: 8105633527

ಶ್ರೀ ಕುಂಬಾರ ಮಹೇಶ ದಶರಥ
ಮತಕ್ಷೇತ್ರ : ಕಣಗಲಾ ತಾ: ಹುಕ್ಕೇರಿ
ಮೋ: 7795769570

ಶ್ರೀ ಮಂಜುನಾಥ ಕಾಡಪ್ಪ ಪಾಟೀಲ
ಮತಕ್ಷೇತ್ರ : ಪಾಶ್ಚಾಪೂರ ತಾ: ಹುಕ್ಕೇರಿ
ಮೋ: 99445585551

ಜಿಲ್ಲಾ ಪಂಚಾಯತ, ಸದಸ್ಯರು

ಶ್ರೀಮತಿ ಅನುಸೂಯಾ ಪರಗೌಡಾ ಪಾಟೀಲ
ಮತಕ್ಷೇತ್ರ : ಎಲಿಮುನ್ನೋಳ್ಳಿ ತಾ: ಹುಕ್ಕೇರಿ
ಮೋ: 9448814907

ಶ್ರೀಮತಿ ಫಕೀರವ್ವ ಕೋಂ. ಯಲ್ಲಪ್ಪ ಹಂಚಿನಮನಿ
ಮತಕ್ಷೇತ್ರ : ಠಾಣಾ ಹತ್ತರಗಿ ತಾ: ಹುಕ್ಕೇರಿ
ಮೋ: 97416335039

ಶ್ರೀ ನಾರಾಯಣ ಲಕ್ಷಣ ಕಾರ್ವೇಕರ
ಮತಕ್ಷೇತ್ರ : ಗುರ್ಲಗುಂಜಿ ತಾ: ಹುಕ್ಕೇರಿ
ಮೋ: 9164103842

ಶ್ರೀ ದೇಸಾಯಿ ಜಯರಾಮ ಕೃಷ್ಣಾ
ಮತಕ್ಷೇತ್ರ :ಜಾಂಬೋಟಿ ತಾ: ಖಾನಾಪೂರ
ಮೋ: 9901685048

ಶ್ರೀ ಮ್ಯಾಗೇರಿ ಸುರೇಶ ಫಕಿರಪ್ಪ
ಮತಕ್ಷೇತ್ರ : ಕಕ್ಕೇರಿ ತಾ: ಖಾನಾಪೂರ
ಮೋ: 9972711191

ಶ್ರೀಮತಿ ಅಂಜನಾ ಬಾಬುರಾವ ದೇಸಾಯಿ
ಮತಕ್ಷೇತ್ರ : ಲೋಂಡಾ ತಾ: ಖಾನಾಪೂರ
ಮೋ: 9448194610

ಶ್ರೀಮತಿ ಸುಪ್ರೀಯಾ ಗೋಪಾಲ ಕುಟ್ರೆ
ಮತಕ್ಷೇತ್ರ : ನಂದಗಡ ತಾ: ಖಾನಾಪೂರ
ಮೋ: 9900496207

ಶ್ರೀ ಜೀತೇಂದ್ರ ಟೋಪಣ್ಣಾ ಮಾದಾರ
ಮತಕ್ಷೇತ್ರ : ಪಾರಿಶ್ವಾಡ ತಾ: ಖಾನಾಪೂರ
ಮೋ: 97430924178

ಶ್ರೀಮತಿ ಗಾರ್ಗಿ ಪ್ರಣಯ ಪಾಟೀಲ
ಮತಕ್ಷೇತ್ರ : ಅಳಗವಾಡಿ ತಾ: ರಾಯಭಾಗ
ಮೋ: 9986900342

ಶ್ರೀ ಅಕ್ಷರಅಲಿ ಬಾ. ಮಾರೂಫ್
ಮತಕ್ಷೇತ್ರ : ಕುಡಚಿ ತಾ: ರಾಯಭಾಗ
ಮೋ: 9741261826

ಶ್ರೀಮತಿ ಪಾಟೀಲ ವಿಲಾಸಮತಿ ಈರಗೌಡ
ಮತಕ್ಷೇತ್ರ : ನಸಲಾಪೂರ ತಾ: ರಾಯಭಾಗ
ಮೋ: 9686960435

ಶ್ರೀ ಪ್ರಯಣ ವಿವೇಕ ಪಾಟೀಲ
ಮತಕ್ಷೇತ್ರ : ರಾಯಭಾಗ (ಗ್ರಾಮೀಣ) ತಾ: ರಾಯಭಾಗ
ಮೋ: 9986900342

ಶ್ರೀಮತಿ ಜಯಶ್ರೀ ಆನಂತ ಮೋಹಿತೆ
ಮತಕ್ಷೇತ್ರ : ಸವದತ್ತಿ ತಾ: ರಾಯಬಾಗ
ಮೋ: 9481107899

ಶ್ರೀಮತಿ ತೇಲಿ ಶೈಲಶ್ರೀ ಮಲ್ಲಿಕಾರ್ಜುನ
ಮತಕ್ಷೇತ್ರ : ಹಿಡಕಲ್ ತಾ: ರಾಯಭಾಗ
ಮೋ: 8884237604

ಶ್ರೀ ಕೃಷ್ಣಪ್ಪ ಬಾಲಪ್ಪ ಲಮಾಣಿ
ಮತಕ್ಷೇತ್ರ : ಬಟಕುರ್ಕಿ ತಾ: ರಾಮದುರ್ಗ
ಮೋ: 9740671136

ಶ್ರೀ ರೇಣಪ್ಪ ಫಕೀರಪ್ಪ ಸೋಮನಗೊಂಡ
ಮತಕ್ಷೇತ್ರ : ಹಲಗತ್ತಿ ತಾ: ರಾಮದುರ್ಗ
ಮೋ: 9902906267

ಶ್ರೀ ದೇಶಪಾಂಡೆ ರಮೇಶ ಬಿ.
ಮತಕ್ಷೇತ್ರ : ಹುಲಕುಂದ ತಾ: ರಾಮದುರ್ಗ
ಮೋ: 944231252

ಶ್ರೀ ಮಾರುತಿ ಗಾಂಧೆಪ್ಪ ತುಪ್ಪದ
ಮತಕ್ಷೇತ್ರ : ಕಟಕೋಳ : ತಾ: ರಾಮದುರ್ಗ
ಮೋ: 8197964099

ಶ್ರೀಮತಿ ಬೆಳವಡಿ ಶಿವಕ್ಕ ದೇವಪ್ಪ
ಮತಕ್ಷೇತ್ರ : ಸುರೇಬಾನ : ತಾ: ರಾಮದುರ್ಗ
ಮೋ: 9448153864

ಶ್ರೀ ಜಹೂರ ರಷೀದಸಾಬ ಹಾಜಿ
ಮತಕ್ಷೇತ್ರ : ಗೊಡಚಿ : ತಾ: ರಾಮದುರ್ಗ
ಮೋ: 9449272786

ಶ್ರೀ ಹಿರೇಕುಂಬಿ ಮಲ್ಲಪ್ಪ ಸಿದ್ದಪ್ಪ
ಮತಕ್ಷೇತ್ರ : ಹೂಲಿ ತಾ: ಸವದತ್ತಿ
ಮೋ: 9741579739

ಶ್ರೀಮತಿ ಬೈರಣ್ಣವರ ಮಂಜುಳಾ ವಿಠ್ಠಲ
ಮತಕ್ಷೇತ್ರ : ಹೊಸುರ ತಾ: ಸವದತ್ತಿ
ಮೋ: 9972504503

ಶ್ರೀಮತಿ ಶಿವಗಂಗಾ ಕೋಂ. ಉಮೇಶ ಗೋರವನಕೊಳ್ಳ
ಮತಕ್ಷೇತ್ರ : ಕರಿಕಟ್ಟಿ : ತಾ: ಸವದತ್ತಿ
ಮೋ: 9945565743

ಶ್ರೀ ಬಂಡಿವಡ್ಡರ ಬಸವರಾಜ ದೇಮಪ್ಪ
ಮತಕ್ಷೇತ್ರ : ಮುರಗೋಡ ತಾ: ಸವದತ್ತಿ
ಮೋ: 9591665569

ಶ್ರೀ ಗುರುನಾಥ ಶಂಕ್ರೆಪ್ಪ ಗಂಗಲ
ಮತಕ್ಷೇತ್ರ : ಉಗರಗೋಳ ತಾ: ಸವದತ್ತಿ
ಮೋ: 9901434428

ಶ್ರೀ ಅಜಿತ ಕೃಷ್ಣರಾವ ದೇಸಾಯಿ
ಮತಕ್ಷೇತ್ರ : ಯರಗಟ್ಟಿ ತಾ: ಸವದತ್ತಿ
ಮೋ: 9448423494

ಶ್ರೀಮತಿ ವಿದ್ಯಾರಾಣಿ ಸೋಮಪ್ಪ ಸೊನ್ನದ
ಮತಕ್ಷೇತ್ರ : ಯರಝರ್ವಿ ತಾ: ಸವದತ್ತಿ
ಮೋ: 9620347802

ಜಿಲ್ಲಾ ಪಂಚಾಯತ ಬೆಳಗಾವಿ
ವಾರ್ಷಿಕ ಆಡಳಿತ ವರದಿ 2019–20

2019–20ನೇ ಸಾಲಿನ
ಆಡಳಿತ ವರದಿ

ಜಿಲ್ಲಾ ಪಂಚಾಯತ ಬೆಳಗಾವಿ

ವಿಷಯ ಸೂಚಿ

ಕ್ರ. ಸಂ	ವಿವರ	ಪುಟ ಸಂಖ್ಯೆ
1	ಬೆಳಗಾವಿ ಜಿಲ್ಲೆಯ ಸಾಮಾನ್ಯ ಮಾಹಿತಿ	3
2	ಮುನ್ನುಡಿ	5
3	ಜಿಲ್ಲಾ ಪಂಚಾಯತ ಅನುಬಂಧ ಪಂಚಾಯತ ರಾಜ್ ಕಾರ್ಯಕ್ರಮ	6
4	ತೋಟಗಾರಿಕೆ ಇಲಾಖೆ	13
5	ಪಶು ಸಂಗೋಪನಾ ಇಲಾಖೆ	17
6	ಮೀನುಗಾರಿಕೆ ಇಲಾಖೆ	21
7	ಸಾಮಾಜಿಕ ಅರಣ್ಯ ಇಲಾಖೆ	22
8	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ	23
9	ರೇಷ್ಮೆ ಇಲಾಖೆ	25
10	ಸಹಕಾರ ಇಲಾಖೆ	26
11	ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ	29
12	ಹಿಂದುಳದ ವರ್ಗಗಳ ಕಲ್ಯಾಣ ಇಲಾಖೆ	29
13	ಪರಿಶಿಷ್ಠ ವರ್ಗಗಳ ಕಲ್ಯಾಣ ಇಲಾಖೆ	30
14	ಸಮಾಜ ಕಲ್ಯಾಣ ಇಲಾಖೆ	31
15	ಡಿ. ದೆವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ	32
16	ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ	32
17	ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ	32
18	ನಿಜಶರಣ ಅಂಬಿಗರ ಚೌಡಯ್ಯಾ ಅಭಿವೃದ್ಧಿ ನಗಮ	32
19	ಕನಾರ್ಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ	33
20	ಕೈಮಗ್ಗ ಮತ್ತು ಜವಳಿ ಇಲಾಖೆ	34
21	ಗ್ರಾಮೀಣ ಮತ್ತು ಸಣ್ಣ ಉದ್ಯಮ ಇಲಾಖೆ	36
22	ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ	37
23	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ	38
24	ಕೃಷಿ ಇಲಾಖೆ	43
25	ಕಾರ್ಯ ನಿರ್ವಾಹಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್, ಬೆಳಗಾವಿ	45
26	ಕಾರ್ಯ ನಿರ್ವಾಹಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್, ಚಿಕ್ಕೋಡಿ	47
27	ಜಿಲ್ಲಾ ಅಕ್ಷರ ದಾಸೋಹ ಇಲಾಖೆ	49
28	ಜಿಲ್ಲಾ ಆಯುಷ್ ಇಲಾಖೆ	52
29	ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಳಗಾವಿ	52
30	ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕೋಡಿ	54
31	ವಿವಿಧ ಇಲಾಖೆಗಳ 1 ರಿಂದ 10 ರ ವರೆಗಿನ ನಮೂನೆಗಳು	55

ಬೆಳಗಾವಿ ಜಿಲ್ಲೆಯ ಸಾಮಾನ್ಯ ಮಾಹಿತಿ

1.1 ಬೆಳಗಾವಿ ಜಿಲ್ಲೆಯ ಕರ್ನಾಟಕ ರಾಜ್ಯದ ವಾಯವ್ಯ ಭಾಗದಲ್ಲಿದ್ದು 15^0–23 ರಿಂದ 16^0–58 ಉತ್ತರ ಅಕ್ಷಾಂಶ ಮತ್ತು 74^0–05 ರಿಂದ 75^0–28 ಪೂರ್ವ ರೇಖಾಂಶಗಳ ಮಧ್ಯದಲ್ಲಿ ಇರುತ್ತದೆ. ಈ ಜಿಲ್ಲೆಯ ಪೂರ್ವ ದಿಕ್ಕಿನಲ್ಲಿ ವಿಜಯಪೂರ, ಬಾಗಲಕೋಟ ಹಾಗೂ ದಕ್ಷಿಣದಲ್ಲಿ ಧಾರವಾಡ, ಉತ್ತರ ಕನ್ನಡ ಮತ್ತು ಗದಗ, ಪಶ್ಚಿಮದಲ್ಲಿ ಮತ್ತು ಗೋವಾ ರಾಜ್ಯಗಳು, ಉತ್ತರದಲ್ಲಿ ಮಹಾರಾಷ್ಟ್ರ ರಾಜ್ಯದ ಕೊಲ್ಲಾಪೂರ ಹಾಗೂ ರತ್ನಾಗಿರಿ ಜಿಲ್ಲೆಗಳು ಇರುತ್ತವೆ.

1.2 ಜಿಲ್ಲೆಯ ವಿಸ್ತೀರ್ಣ 13415 ಚ.ಕೀ.ಮಿ. ಇದ್ದು ರಾಜ್ಯದಲ್ಲಿ 5ನೇ ಸ್ಥಾನವನ್ನು ಪಡೆದಿರುತ್ತದೆ. ಜಿಲ್ಲೆಯಲ್ಲಿ 14 ತಾಲೂಕುಗಳು 38 ಕಂದಾಯ ಹೋಬಳಿಗಳು, 1263 ಜನವಸತಿ ಗ್ರಾಮಗಳು, 12 ಜನವಸತಿ ಇಲ್ಲದ ಗ್ರಾಮಗಳು ಮತ್ತು 34 ಪಟ್ಟಣ ಪ್ರದೇಶಗಳನ್ನು ಒಳಗೊಂಡಿದೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಿಲ್ಲಾ ಪಂಚಾಯತ, 10 ತಾಲೂಕ ಪಂಚಾಯತಗಳು ಹಾಗೂ 506 ಗ್ರಾಮ ಪಂಚಾಯತಗಳ ಸಹಕಾರದೊಂದಿಗೆ ಕಾರ್ಯಗತಗೊಳಿಸುತ್ತಿವೆ.

1.3 ಭೌಗೋಳಿಕವಾಗಿ ಈ ಜಿಲ್ಲೆಯನ್ನು 3 ಭಾಗಗಳನ್ನಾಗಿ ವಿಂಗಡಿಸಬಹುದಾಗಿದೆ. 1) ಗುಡ್ಡಗಾಡು ವಲಯ 2) ಉತ್ತರ ಆರೆಮಲೆನಾಡು 3) ಉತ್ತರ ಶುಷ್ಕ ವಲಯ. ಗುಡ್ಡುಗಾಡು ವಲಯದಲ್ಲಿ ಖಾನಾಪೂರ ತಾಲೂಕ, ಉತ್ತರ ಅರೆಮಲೆನಾಡು ವಲಯದಲ್ಲಿ ಚಿಕ್ಕೋಡಿ, ಹುಕ್ಕೇರಿ, ಬೈಲಹೊಂಗಲ ಮತ್ತು ಬೆಳಗಾವಿ ತಾಲೂಕುಗಳು ಹಾಗೂ ಉತ್ತರ ಶುಷ್ಕ ವಲಯದಲ್ಲಿ ಅಥಣಿ, ರಾಯಬಾಗ, ಗೋಕಾಕ, ರಾಮದುರ್ಗ ಮತ್ತು ಸವದತ್ತಿ ತಾಲೂಕುಗಳು ಬರುತ್ತವೆ.

1.4 ಹೆಚ್ಚಿನ ಪ್ರದೇಶದಲ್ಲಿ ಮಣ್ಣು ಮಧ್ಯಮದಿಂದ ಆಳವಾದ ಎರೆಯಿಂದ ಕೂಡಿದ್ದು, ಕೆಲವಡೆ ಸಾಧಾರಣ ಕಪ್ಪು ಮಿಶ್ರಿತ ಎರೆ ಭೂಮಿಯಿದೆ. ರಸಸಾರ ಹೆಚ್ಚಾಗಿದ್ದು ಕರಗುವ ಲವಣಾಂಶಗಳ ಪ್ರಮಾಣವು ರಾಯಬಾಗ ತಾಲೂಕಿನಲ್ಲಿ ತೀವ್ರವಾಗಿದೆ. ರಾಮದುರ್ಗ ಮತ್ತು ಸವದತ್ತಿಯಲ್ಲಿ ಸಾರಜನಕ ಅಂಶವು ಸಾಧಾರಣವಾಗಿದ್ದು ಇತರೆ ಕಡೆ ಹೆಚ್ಚಾಗಿದೆ. ಪೋಟ್ಯಾಶಿಯಂ ಅಂಶವು ಗೋಕಾಕ ತಾಲೂಕಿನಲ್ಲಿ ಕಡಿಮೆಯಿದ್ದು ಇತರೆ ಕಡೆ ಹೆಚ್ಚಾಗಿದೆ. ನೀರಾವರಿಯಾಗುತ್ತಿರುವ ಪ್ರದೇಶದಲ್ಲಿ ಭೂಮಿ ಸವಕಳಿ ಕಡೆ ತಿರುಗುತ್ತಿದೆ.

1.5 ಜಿಲ್ಲೆಯಲ್ಲಿ ಕೃಷ್ಣಾ, ಮಲಪ್ರಭಾ ನದಿಗೆ ಸವದತ್ತಿ ತಾಲೂಕಿನ ನವೀಲತೀರ್ಥದ ಹತ್ತಿರ ಹಾಗೂ ಘಟಪ್ರಭಾ ನದಿಗೆ ಹುಕ್ಕೇರಿ ತಾಲೂಕಿನ ಹಿಡಕಲ್ ಹತ್ತಿರ ಬೃಹತ್ ಆಣೆಕಟ್ಟುಗಳನ್ನು ಕಟ್ಟಲಾಗಿದೆ. ಅಲ್ಲದೆ ಮಾರ್ಕಂಡೇಯ ನದಿಗೆ ಹುಕ್ಕೇರಿ ತಾಲೂಕಿನ ಶಿರೂರ ಹತ್ತಿರ ಆಣೆಕಟ್ಟು ಕಟ್ಟಲಾಗಿದೆ. ಈ ಬೃಹತ್ ನೀರಾವರಿ ಯೋಜನೆಗಳಿಂದ ಜಿಲ್ಲೆಯ 8 ತಾಲೂಕುಗಳಿಗೆ ಭಾಗಶಃ ನೀರಾವರಿ ಸೌಲಭ್ಯಗಳನ್ನು ಒದಗಿಸಲಾಗಿದೆ.

1.6 ಜಿಲ್ಲೆಯ ವಾರ್ಷಿಕ ಸರಾಸರಿ ವಾಡಿಕೆ ಮಳೆ 823.0 ಮಿ.ಮೀ. ಇದ್ದು ಪ್ರಸ್ತತ 2019 ನೇ ಸಾಲಿನಲ್ಲಿ ಸರಾಸರಿ 1314.5 ಮಿ.ಮೀ ಮಳೆಯಾಗಿದೆ. 2019 ನೇ ಸಾಲಿನಲ್ಲಿ ವಾಡಿಕೆಗಿಂತ 60 ಪ್ರತಿಶತ ಹೆಚ್ಚು ಮಳೆ ದಾಖಲಾಗಿರುತ್ತದೆ.

1.7 2011 ನೇಯ ಜನಗಣತಿಯ ಅಂಕಿ–ಅಂಶಗಳ ಪ್ರಕಾರ ಜಿಲ್ಲೆಯ ಒಟ್ಟು ಜನಸಂಖ್ಯೆ 47.79 ಲಕ್ಷ ಇದ್ದು ಇದು ರಾಜ್ಯದಲ್ಲಿ 2 ನೇ ಸ್ಥಾನವನ್ನು ಪಡೆದಿದೆ. ಲೈಂಗಿಕ ಪ್ರಮಾಣವು ಪ್ರತಿ ಸಾವಿರ ಜನ ಗಂಡಸರಿಗೆ 973 ಮಹಿಳೆಯರಿದ್ದಾರೆ.

1.8 2011 ರ ಜನಗಣತಿ ಪ್ರಕಾರ ಒಟ್ಟು 5.77 ಲಕ್ಷ ಪರಿಶಿಷ್ಟ ಜಾತಿಯವರು ಅಂದರೆ ಶೇಕಡಾ 12.08 ಮತ್ತು 2.97 ಲಕ್ಷ ಪರಿಶಿಷ್ಟ ಪಂಗಡದವರು ಅಂದರೆ ಶೇಕಡಾ 6.62 ಇರುತ್ತಾರೆ.

1.9 2001 ರ ಜನಗಣತಿ ಪ್ರಕಾರ ಕೆಲಸಗಾರರು 15.18 ಲಕ್ಷ ಇದ್ದರೆ 2011 ರಲ್ಲಿ 21.05 ಲಕ್ಷ ಇರುತ್ತಾರೆ. ಅಂದರೆ ಶೇಕಡಾ 27.88 ರಷ್ಟು ಹೆಚ್ಚಳವಾಗಿದೆ. ಅದರಲ್ಲಿಯೇ 17.34 ಲಕ್ಷ ಮುಖ್ಯ ಕೆಲಸಗಾರರು ಹಾಗೂ 3.71 ಲಕ್ಷ ಅಲ್ಪಾವದಿ ಕೆಲಸಗಾರರು ಸೇರಿದ್ದಾರೆ.

1.10 ಜಿಲ್ಲೆಯ ಒಟ್ಟು 13.44 ಲಕ್ಷ ಹೇಕ್ಟರಗಳ ಭೌಗೋಳಿಕ ವಿಸ್ತೀರ್ಣದಲ್ಲಿ 2018–19 ರ ಸಾಲಿನಲ್ಲಿ ನಿವ್ವಳ ಬಿತ್ತನೆಯ ವಿಸ್ತೀರ್ಣ 8.90 ಲಕ್ಷ ಹೇಕ್ಟರುಗಳು ಇದ್ದು ಅಂದರೆ ಶೇಕಡಾ 66.29 ರಷ್ಟು ಆಗುವುದು, ನೀರಾವರಿಯಾದ ಭೂಮಿಯ ನಿವ್ವಳ ವೀಸ್ತಿರ್ಣ 5.33 ಲಕ್ಷ ಹೇಕ್ಟರದಷ್ಟು ಇದ್ದು ಒಟ್ಟು ಬಿತ್ತನೆಯಾದ ನಿವ್ವಳ ಭೂ ವಿಸ್ತೀರ್ಣದ ಶೇಕಡಾ 60 ರಷ್ಟು ಇರುವುದು.

ಈ ಜಿಲ್ಲೆಯಲ್ಲಿ ಜೋಳ, ಸಜ್ಜೆ, ಮುಸುಕಿನಜೋಳ, ಭತ್ತ ಮತ್ತು ಗೋದಿ ಮುಖ್ಯ ಆಹಾರ ಬೆಳೆಗಳಿವೆ. ಕಬ್ಬು, ಹತ್ತಿ ಮತ್ತು ತಂಬಾಕು ಆರ್ಥಿಕ ಬೆಳೆಗಳಾಗಿವೆ ಹಾಗೂ ತೋಟಗಾರಿಕೆ ಮತ್ತು ತರಕಾರಿ ಬೆಳೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ.

1.11 2012 ರ ಜಾನುವಾರು ಗಣತಿಯ ಪ್ರಕಾರ ಜಿಲ್ಲೆಯಲ್ಲಿ 28.09 ಲಕ್ಷ ಜಾನುವಾರುಗಳು ಮತ್ತು 27.38 ಲಕ್ಷ ಕುಕ್ಕಟಗಳು ಇರುವುದು ಹಾಗೂ 271 ಪಶುವೈದ್ಯ ಸಂಸ್ಥೆಗಳು ಸೇವೆ ಸಲ್ಲಿಸುತ್ತಿವೆ.

1.12 2011 ನೇ ಜನಗಣತಿಯ ಪ್ರಕಾರ ಜಿಲ್ಲೆಯ 30.52 ಲಕ್ಷ ಜನರು ಸಾಕ್ಷರಸ್ಥರಿದ್ದಾರೆ ಹಾಗೂ ಸಾಕ್ಷರತಾ ಪ್ರಮಾಣ 73.48 ಇರುತ್ತದೆ. ಜಿಲ್ಲೆಯಲ್ಲಿ 4359 ಪ್ರಾಥಮಿಕ ಶಾಲೆಗಳು, 132 ಪ್ರೌಢ ಶಾಲೆಗಳು, 340 ಪದವಿ ಪೂರ್ವ ಕಾಲೇಜುಗಳು, 12 ಇಂಜನೀಯರಿಂಗ್ ಕಾಲೇಜುಗಳು, 19 ಪಾಲಿಟೆಕ್ನಿಕ್ ಮತ್ತು 17 ವೈದ್ಯಕೀಯ ಶಿಕ್ಷಣ ಕಾಲೇಜುಗಳು ಇರುತ್ತವೆ.

1.13 ಪ್ರಾಥಮಿಕ ಆರೋಗ್ಯ ಘಟಕಗಳು 140 ಮತ್ತು ನಗರ ಕುಟುಂಬ ಕಲ್ಯಾಣ ಕೇಂದ್ರಗಳು 09 ಹಾಗೂ 16 ಸಮುದಾಯ ಆರೋಗ್ಯ ಕೇಂದ್ರಗಳಿದ್ದು, ಜನರಿಗೆ ಆರೋಗ್ಯ ಮತ್ತು ವೈದ್ಯಕೀಯ ಸೇವೆಯನ್ನು ಒದಗಿಸುತ್ತಿವೆ.

ಮುನ್ನುಡಿ

ಬೆಳಗಾವಿ ಜಿಲ್ಲಾ ಪಂಚಾಯತಿಯ 32 ನೇ ವಾರ್ಷಿಕ ಆಡಳಿತ ವರದಿಯನ್ನು ತಮ್ಮ ಮುಂದಿಡಲು ಹರ್ಷಿಸುತ್ತೇವೆ. ಜಿಲ್ಲೆಯಲ್ಲಿ 2019–20 ನೇ ಸಾಲಿನಲ್ಲಿ ಹಮ್ಮಿಕೊಂಡಿದ್ದ ವಿವಿಧ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ ಗಣನೀಯ ಪ್ರಗತಿ ಸಾಧಿಸಿದ್ದು ಹೆಮ್ಮೆಯ ಸಂಗತಿ. ಈ ಶ್ರೇಯಸ್ಸು ಜಿಲ್ಲಾ ಪಂಚಾಯತಿಯ ವ್ಯಾಪ್ತಿಗೊಳಿಸಲ್ಪಟ್ಟ ವಿವಿಧ ಇಲಾಖಾ ಜಿಲ್ಲಾ ಮುಖ್ಯಸ್ಥರಿಗೆ, ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ಈ ಆಡಳಿತ ವರದಿಯ ಮಾಹಿತಿಯನ್ನು ಸಕಾಲದಲ್ಲಿ ಪೂರೈಸಿದ್ದು ಸಕಲರನ್ನು ಅಭಿನಂದಿಸುತ್ತೇವೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯ 1993 ರ ಪ್ರಕರಣ 300(4) ನೇದ್ದರ ಪ್ರಕಾರ ನಿಗಧಿತ ನಮೂಎಯಲ್ಲಿ 2019–20 ನೇ ಸಾಲಿನ ಆಡಳಿತ ವರದಿಯನ್ನು ತಯಾರಿಸಿ ಜಿಲ್ಲಾ ಪಂಚಾಯತ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ. ಜಿಲ್ಲಾ ಪಂಚಾಯತ ಮುಖ್ಯ ಯೋಜನಾಧಿಕಾರಿಗಳು ಹಾಗೂ ಪರಿಷತ್ ಘಟಕದ ಸಿಬ್ಬಂದಿಯ ಪರಿಶ್ರಮದಿಂದ ಈ ಪ್ರಕಟಣೆಯನ್ನು ಸಕಾಲದಲ್ಲಿ ಹೊರತರಲು ಸಾಧ್ಯವಾಗಿದೆ ಎಂದು ತಿಳಿಸಲು ಹರ್ಷವೆನಿಸುತ್ತದೆ ಮತ್ತು ಅವರನ್ನು ಅಭಿನಂದಿಸುತ್ತೇವೆ.

ಭಾರತ ದೇಶದ ಬಹುಭಾಗ ಗ್ರಾಮೀಣ ಪ್ರದೇಶಗಳಿಂದ ಕೂಡಿದೆ. ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯೇ ದೇಶದ ಪ್ರಗತಿಯಾಗಿದೆ. ಆ ನಿಟ್ಟಿನಲ್ಲಿ ಬೆಳಗಾವಿ ಜಿಲ್ಲೆಯ ಗ್ರಾಮೀಣ ಭಾಗದ ಸರ್ವತೋಮುಖ ಅಭಿವೃದ್ಧಿಯೇ ಜಿಲ್ಲಾ ಪಂಚಾಯತಿಯ ಪ್ರಮುಖ ಆದ್ಯತೆಯಾಗಿದೆ. ಪ್ರಗತಿ ಪರ ಚಿಂತನೆಯ ಮೂಲಕ ನಾವು ಆ ಮಾರ್ಗದಲ್ಲಿ ಮುನ್ನಡೆಯುತ್ತಿದ್ದೇವೆ. ಜನ ಪ್ರತಿನಿಧಿಗಳು ಅಧಿಕಾರಿ ವರ್ಗದವರು ಒಟ್ಟುಗೂಡಿ ಸುಖ, ಶಾಂತಿ ಹಾಗೂ ಸಮೃದ್ಧಿಯ ಪಥದಲ್ಲಿ ಸಾಗುತ್ತ ಉದ್ದೇಶಿತ ಗುರಿ ಮುಟ್ಟುವತ್ತ ಹೆಜ್ಜೆ ಹಾಕೋಣ.

ಭಾರತವು ನಮ್ಮ ನಗರಗಳಲ್ಲಿ ಇಲ್ಲ, ಭಾರತವು ತನ್ನ ಲಕ್ಷೋಪಲಕ್ಷ ಹಳ್ಳಿಗಳಲ್ಲಿ ಜೀವಿಸಿದೆ ಮತ್ತು ನಗರಗಳು ಹಳ್ಳಿಗಳ ಮೇಲೆ ಜೀವಿಸುತ್ತಿವೆ. ಆದ್ದರಿಂದ, ಗ್ರಾಮೀಣ ಅಭಿವೃದ್ಧಿಯೇ ನಮ್ಮ ಉಸಿರಾಗಲಿ, ನಮ್ಮ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಇನ್ನಷ್ಟು ಶ್ರಮಿಸೋಣ. ಸುಖ, ಸಮೃದ್ಧಿ, ಶಾಂತಿ, ಪಥದಲ್ಲಿ ಸಾಗುತ್ತ ನಿಶ್ಚಿತ ಗುರಿ ಮುಟ್ಟೋಣ.

ಶ್ರೀ ದರ್ಶನ ಹೆಚ್. ವಿ. ಭಾ.ಆ.ಸೇ.
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ, ಬೆಳಗಾವಿ.

ಶ್ರೀಮತಿ ಆಶಾ ಪ್ರ. ಐಹೋಳೆ
ಅಧ್ಯಕ್ಷರು
ಜಿಲ್ಲಾ ಪಂಚಾಯತ, ಬೆಳಗಾವಿ.

ಸರಕಾರದ ಸುತ್ತೋಲೆ ಸಂಖ್ಯೆ (ಗ್ರಾಅಪ/73/ಗ್ರಾಪಸ/2008 ದಿ:28–1–2010)
ಅನುಬಂಧ
ಜಿಲ್ಲಾ ಪಂಚಾಯತ ಬೆಳಗಾವಿ 2019–20ನೇ ಸಾಲಿನ ವಾರ್ಷಿಕ ವರದಿ

1. ಜಿಲ್ಲಾ ಪಂಚಾಯತಿಯ ವ್ಯಾಪ್ತಿ (ಪ್ರ.158)

ಅ)	ಪ್ರದೇಶ	: 13415 ಚ.ಕಿ.ಮೀ.
ಆ)	ಜನಸಂಖ್ಯೆ	47.79 (2011 ರ ಜನಗಣತಿ ಪ್ರಕಾರ)
ಇ)	**ಒಟ್ಟು ಸ್ಥಾನಗಳ ಸಂಖ್ಯೆ (ಪ್ರಕರಣ 159)**	:
ಅ)	ಚುನಾಯಿತ ಸದಸ್ಯರ ಸಂಖ್ಯೆ	: 90
ಆ)	ರಾಜ್ಯಸಭಾ ಸದಸ್ಯರ ಸಂಖ್ಯೆ	: 01
ಇ)	ಲೋಕಸಭಾ ಸದಸ್ಯರ ಸಂಖ್ಯೆ	: 03
ಈ)	ವಿಧಾನಸಭಾ ಸದಸ್ಯರ ಸಂಖ್ಯೆ	: 18
ಉ)	ವಿಧಾನ ಪರಿಷತ್ ಸದಸ್ಯರ ಸಂಖ್ಯೆ	: 04

2) ಪ್ರಕರಣ 177, 178 ಮತ್ತು 186 ರನ್ವಯ ಮಾಹಿತಿ

1)	ಅಧ್ಯಕ್ಷರು ಹೆಸರು	: 1) ಶ್ರೀಮತಿ ಆಶಾ ಪ್ರ. ಐಹೊಳೆ ದಿ.: 11–05–2016 ರಿಂದ ಇಲ್ಲಿಯವರೆಗೆ
2)	ಉಪಾಧ್ಯಕ್ಷರು ಹೆಸರು	: 1) ಶ್ರೀ ಅರುಣ ಅ. ಕಟಾಂಬಳೆ ದಿ.: 11–05–2016 ರಿಂದ ಇಲ್ಲಿಯವರೆಗೆ
3)	**ಉಪಾಧ್ಯಕ್ಷರಿಗೆ ನಿಯೋಜಿಸಲಾದ ಯಾವುದೇ ಕರ್ತವ್ಯ**	ಸಾಮಾನ್ಯ ಸ್ಥಾಯಿ ಸಮಿತಿ ಅಧ್ಯಕ್ಷತೆ
4)	ಅವಿಶ್ವಾಸ ನಿರ್ಣಯ ಏನಾದರೂ ಇದ್ದಲ್ಲಿ	
ಅ)	ಅಧ್ಯಕ್ಷರ ವಿರುದ್ಧ	: ಇಲ್ಲ
ಆ)	ಉಪಾಧ್ಯಕ್ಷರ ವಿರುದ್ಧ	: ಇಲ್ಲ
5)	ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಗೆ ಸ್ಪರ್ಧಿಸಿದ್ದರೇ ಅಥವಾ ವ್ಯಾಜ್ಯಗಳಿವೆಯೇ	: ಇಲ್ಲ
6)	ಹೆಸರು ಮತ್ತು ನೇಮಕವಾದ ದಿನಾಂಕ	
ಅ)	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು	: ಡಾ: ರಾಜೇಂದ್ರ ಕೆ. ವಿ. ದಿ.: 21–01–2019 ರಿಂದ ಇಲ್ಲಿಯವರೆಗೆ

ಆ) ಉಪಕಾರ್ಯದರ್ಶಿ (ಆಡಳಿತ)	:	1) ಶ್ರೀ ಎಸ್.ಜಿ. ಕೊರವರ ದಿ.: 29–02–2019 ರಿಂದ 11–06–2019 2) ಶ್ರೀ ಡಿ.ಎಂ. ಜಕ್ಕಪ್ಪಗೋಳ ದಿ.: 12–07–2019 ರಿಂದ ಇಲ್ಲಿಯವರೆಗೆ
ಇ) ಉಪಕಾರ್ಯದರ್ಶಿ (ಅಭಿವೃದ್ಧಿ)	:	1) ಶ್ರೀ ಎನ್.ಕೆ. ತೊರವಿ ದಿ.: 03–03–2019 ರಿಂದ 10–06–2019 ರವರೆಗೆ 2) ಶ್ರೀ ಎಸ್.ಬಿ. ಮುಳ್ಳಳ್ಳಿ ದಿ.: 11–06–2019 ರಿಂದ ಇಲ್ಲಿಯವರೆಗೆ
ಈ) ಯೋಜನಾ ನಿರ್ದೇಶಕರು (ಡಿ.ಆರ್.ಡಿ.ಎ.)	:	1) ಶ್ರೀ ರಾಜಗೋಪಾಲ ದಿ.: 26–02–2019 ರಿಂದ 04–06–2019 ರವರೆಗೆ 2) ಶ್ರೀ ಸಿ.ಬಿ. ದೇವರಮನಿ ದಿ.: 18–07–2019 ರಿಂದ 21–08–2019 ರವರೆಗೆ 3) ಶ್ರೀ ಎ.ಎಂ. ಪಾಟೀಲ ದಿ.: 21–08–2019 ರಿಂದ ಇಲ್ಲಿಯವರೆಗೆ
ಉ) ಮುಖ್ಯ ಯೋಜನಾಧಿಕಾರಿ	:	1) ಶ್ರೀಮತಿ ಗೌರಮ್ಮ ಪಿ. ಸುಂಕದ (ಪ್ರಭಾರ) ದಿ.: 16–08–2018 ರಿಂದ 12–12–2019 ರವರೆಗೆ 2) ಶ್ರೀ ವಿನೋದ ಅಣ್ವೇಕರ ದಿ.: 13–12–2019 ರಿಂದ ಇಲ್ಲಿಯವರೆಗೆ
ಊ) ಮುಖ್ಯ ಲೆಕ್ಕಾಧಿಕಾರಿ	:	1) ಶ್ರೀ ಪರಶುರಾಮ ದುಡಗುಂಟಿ ದಿ.: 29–01–2019 ರಿಂದ ಇಲ್ಲಿಯವರೆಗೆ

3) ಚುನಾವಣೆಗಳು (ಪ್ರಕರಣ 160)

1) ಸಾಮಾನ್ಯ ಚುನಾವಣೆಯ ದಿನಾಂಕ	:	–
2) ಉಪಚುನಾವಣೆಗಳೇನಾದರೂ ಆಗಿದ್ದಲ್ಲಿ ದಿನಾಂಕ, ಕಾರಣ ಮತ್ತು ಫಲಿತಾಂಶಗಳು	:	ಇಲ್ಲ
3) ಜಿಲ್ಲಾ ಪಂಚಾಯತಿಯ ಅವಧಿ ವಿಸ್ತರಣೆಗೊಂಡಿದ್ದಲ್ಲಿ	:	ಇಲ್ಲ
4) ಚುನಾವಣಾ ವೆಚ್ಚ	:	–
5) ಚುನಾವಣಾ ವ್ಯಾಜ್ಯಗಳು, ಇದ್ದಲ್ಲಿ	:	ಇಲ್ಲ

4) ಜಿಲ್ಲಾ ಪಂಚಾಯತಿ ಸಭೆಗಳು ಮತ್ತು ಹಾಜರಾತಿ (ಪ್ರಕರಣ 180)

1) ಸಾಮಾನ್ಯ ಸಭೆಗಳ ಸಂಖ್ಯೆ	:	03
2) ವಿಶೇಷ ಸಭೆಗಳ ಸಂಖ್ಯೆ	:	01
3) ಮುಂದೂಡಲಾದ ಸಭೆಗಳ ಸಂಖ್ಯೆ	:	0

4)	ಸಭೆಗಳನ್ನು ನಿಯಮಿತವಾಗಿ ನಡೆಸುವುದು	: ನಿಯಮಿತವಾಗಿ ನಡೆಸಲಾಗಿದೆ.
5)	ಸಭೆಯಲ್ಲಿ ಸದಸ್ಯರು ಹಾಜರಾತಿ	: 76.11%
6)	ಕೋರಂಗಾಗಿ ಮುಂದೂಡಲಾದ ಸಭೆಗಳು	: –
7)	ಕಾರ್ಯನಿರ್ವಹಣೆ ನಿಯಮಗಳ ಕ್ರಮ	: ನಿಯಮಗಳ ಪ್ರಕಾರ ಜರುಗಿಸಲಾಗಿದೆ
ಬಿ)	ನಿರ್ಣಯಗಳ ಸಂಖ್ಯೆ	:
1)	ಮಂಡಿಸಿದ್ದು	: 210
2)	ಅಂಗೀಕರಿಸಿದ್ದು	: 210
3)	ಚರ್ಚಿಸಿದ್ದು	: 210
4)	ಹಿಂಪಡೆದಿದ್ದು	: ಇಲ್ಲ
5)	ಕೈಬಿಟ್ಟದ್ದು	: ಇಲ್ಲ

5) ಸ್ಥಾಯಿ ಸಮಿತಿಗಳು ಮತ್ತು ಇತರ ಸಮಿತಿಗಳು
(ಪ್ರಕರಣ 186, 187 ಮತ್ತು 188)

1)	ರಚಿಸಲಾದ ಸ್ಥಾಯಿ ಸಮಿತಿ ಹಾಗೂ ಇತರ ಸಮಿತಿಗಳ ಸಂಖ್ಯೆ	: 5
2)	ಸಮಿತಿಗಳಿಗೆ ಚುನಾವಣೆ ನಡೆದ ದಿನಾಂಕ	: –
3)	ಸ್ಥಾಯಿ ಸಮಿತಿಗಳ ಸದಸ್ಯರುಗಳ ಸಂಖ್ಯೆ	: 35
4)	ಪ್ರತಿ ಸಮಿತಿಯ ಕಾರ್ಯಗಳ ಬಗ್ಗೆ ಸಂಕ್ಷಿಪ್ತ ವರದಿ	: ಈ ಕೆಳಗಿನಂತಿದೆ ವರದಿ

ಸ್ಥಾಯಿ ಸಮಿತಿಗಳ ಬಗ್ಗೆ

1) **ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ :** ಸದರೀ ಸ್ಥಾಯಿ ಸಮಿತಿ ಸಭೆಯಲ್ಲಿ ವಿಶೇಷ ಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿ ವಿವಿಧ ಇಲಾಖೆಗಳಿಂದ ನೀಡುವ ಸವಲತ್ತುಗಳಿಗಾಗಿ ಆಯ್ಕೆ ಮಾಡಿದ ಫಲಾನುಭವಿಗಳ ಪಟ್ಟಿಗೆ ಅನುಮೋದನೆ ನೀಡಲಾಯಿತು ಹಾಗೂ ಪ್ರತಿಯೊಂದು ಇಲಾಖಾ ಪ್ರಗತಿ ಪರಿಶೀಲನೆ ಮಾಡಲಾಯಿತು. ಅನುಸೂಚಿತ ಜಾತಿಗಳ, ಅನುಸೂಚಿತ ಪಂಗಡಗಳ, ಮಹಿಳೆಯರಿಗಾಗಿ ಮತ್ತು ಸಮಾಜದ ಇತರ ದುರ್ಬಲ ವರ್ಗಗಳಿಗೆ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ.

2) **ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ :** ಸದರೀ ಸಮಿತಿಯ ಸಭೆಯಲ್ಲಿ ಕೃಷಿ, ಕೈಗಾರಿಕೆ, ಪಶು ಸಂಗೋಪನೆ, ತೋಟಗಾರಿಕೆ, ರೇಷ್ಮೆ, ಅರಣ್ಯ ಹಾಗೂ ಮೀನುಗಾರಿಕೆ ಇಲಾಖೆಯ ವಿವಿಧ ಕಾರ್ಯಕ್ರಮಗಳ ಪಟ್ಟಿಗೆ ಅನುಮೊದನೆ ನೀಡಲಾಯಿತು ಹಾಗೂ ಸಹಕಾರಿ ಇಲಾಖೆಯಿಂದ ನೀಡುವ ಶೇರು ಬಂಡವಾಳ, ಸಾಲ ಸಹಾಯಧನ, ಮಂಜೂರಾತಿಗಾಗಿ ಆಯ್ಕೆ ಮಾಡಿದ ಗ್ರಾಮಾಂತರ ಪ್ರದೇಶಗಳ ಸಹಕಾರಿ ಸಂಘಗಳಿಗೆ ಅನುಮೋದನೆ ನೀಡಲಾಯಿತು.

3) **ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ :** ಸದರೀ ಸಮಿತಿಯ ಸಭೆಯಲ್ಲಿ ಆರೋಗ್ಯ ಇಲಾಖೆಯ ವಾರ್ಷಿಕ ಕ್ರಿಯಾ ಯೋಜನೆಗೆ ಅನುಮೋದನೆ ಮತ್ತು ಅನುದಾನ ಪ್ರಗತಿ ಪರಿಶೀಲನೆ ಹಾಗೂ ಜಿಲ್ಲೆಯಲ್ಲಿ ಅವಶ್ಯವಿರುವ ಮತ್ತು ಅರ್ಹ ಗ್ರಾಮಗಳನ್ನು ಆಯ್ಕೆ ಮಾಡಿದ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರ, ಆಯುರ್ವೇದ ಆಸ್ಪತ್ರೆ, ಮಂಜೂರು ಮಾಡಲು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಕಳಿಸುವ, ಶಾಲಾ ಕಟ್ಟಡಗಳಿಗೆ ದಾನಿಗಳ ಹೆಸರು ನಾಮಕರಣ ಮತ್ತು ಅನುದಾನಕ್ಕೆ ಒಳಪಡುವ ಖಾಸಗಿ ಶಿಕ್ಷಣ ಸಂಸ್ಥೆಗಳ ಕುರಿತು ಅನುಮೋದನೆ ನೀಡಲಾಯಿತು.

4) **ಜಿಲ್ಲಾ ಯೋಜನಾ ಹಣಕಾಸು ಮತ್ತು ಲೆಕ್ಕ ಪರಿಶೋಧನಾ ಸ್ಥಾಯಿ ಸಮಿತಿ ಕಾರ್ಯಗಳು :** ಜಿಲ್ಲಾ ಪಂಚಾಯತದ ಯೋಜನಾ ಕಾರ್ಯಕ್ರಮಗಳ ವಾರ್ಷಿಕ ಕರಡು ಯೋಜನೆ ತಯಾರಿಸಿ ಅನುಮೋದಿಸಿ ಸರಕಾರಕ್ಕೆ

ಕಳುಹಿಸಲಾಯಿತು. ಜಿಲ್ಲಾ ಪಂಚಾಯತ, ಯೋಜನಾ ಕಾರ್ಯಕ್ರಮಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ಅನುಮೋದಿಸಲಾಯಿತು. ತಾಲೂಕ ಪಂಚಾಯತಗಳಿಂದ ತಯಾರಿಸಿ ಬಂದ ಯೋಜನಾ ಕಾರ್ಯಕ್ರಮಗಳ ಕ್ರಿಯಾ ಯೋಜನೆಗೆ ಪರಿಶೀಲನೆ ಮಾಡಲಾಯಿತು. ಯೋಜನಾ ಕಾರ್ಯಕ್ರಮಗಳಲ್ಲಿ ಬದಲಾವಣೆ ಹಾಗೂ ಬದಲಾವಣೆಗೆ ಬಂದ ಮನವಿಗಳನ್ನು ಪರಿಶೀಲಿಸಿ ಅನುಮೋದಿಸಲಾಯಿತು. ಜಿಲ್ಲಾ ಪಂಚಾಯತದ ವಾರ್ಷಿಕ ಹಣಕಾಸು ಲೆಕ್ಕ ಪತ್ರವನ್ನು ಪರಿಶೀಲಿಸಿ ಅನುಮೋದಿಸಲಾಯಿತು.

5) **ಸಾಮಾನ್ಯ ಸ್ಥಾಯಿ ಸಮಿತಿ :** ಸದರೀ ಸಮಿತಿಯ ಸಭೆಯಲ್ಲಿ ಸಿಬ್ಬಂದಿ ವಿಷಯಗಳು ಸಂಪರ್ಕ ಮತ್ತು ಕಟ್ಟಡಗಳು, ಗ್ರಾಮೀಣ ಗೃಹ ನಿರ್ಮಾಣ, ಗ್ರಾಮ ರಸ್ತೆ ವಿಸ್ತರಣೆ, ಪ್ರಕೃತಿ ವಿಕೋಪ ಪರಿಹಾರ ಹಾಗೂ ಉಳಿದ ಎಲ್ಲಾ ಸಂಕೀರ್ಣ ವಿಷಯಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಪರೀಶಿಲಿಸಲಾಯಿತು.

6) **ಇತರೆ ಸಮಿತಿಗಳಿದ್ದಲ್ಲಿ ಅವುಗಳು ನಿರ್ವಹಿಸಿದ ಕಾರ್ಯಗಳು.**

<u>ಜಿಲ್ಲಾ ಯೋಜನಾ ಸಮಿತಿಯ :</u>

ಜಿಲ್ಲಾ ಯೋಜನಾ ಸಮಿತಿಗೆ ಜಿಲ್ಲೆಯ ಮಾನ್ಯ ಉಸ್ತುವಾರಿ ಸಚಿವರು ಚೇರ್ಮನರಾಗಿರುತ್ತಾರೆ. ಜಿಲ್ಲಾ ಪಂಚಾಯತ ಅಧ್ಯಕ್ಷರು ತಾಲೂಕು ಯೋಜನೆ ಹಾಗೂ ಅಭಿವೃದ್ಧಿ ಸಮಿತಿಯ ಪದನಿಮಿತ್ತ ಕೋ ಚೇರಪರ್ಸನ್ ಆಗಿರುವ ತಾಲೂಕಾ ಪಂಚಾಯತ ಅಧ್ಯಕ್ಷರು (10) ತಾಲೂಕಿನಿಂದ ತಾಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ವೈಸ್ ಚೇರ್‌ಪರ್ಸನ್ (ಗ್ರಾಮ ಪಂಚಾಯತಿಯ ಮೂಲಕ ಚುನಾಯಿತರಾದವರು (10), ಜಿಲ್ಲಾ ಪಂಚಾಯತ ತಾಲೂಕು ಪಂಚಾಯತ (ಗ್ರಾಮೀಣ ಪ್ರದೇಶ)ಯ ಸದಸ್ಯರು (66) ಹಾಗೂ ಮಹನಗರ ಪಾಲಿಕೆ ನಗರ ಸಭೆ, ಪುರಸಭೆ, ಪಟ್ಟಣ ಪಂಚಾಯತಿ (ನಗರ ಪ್ರದೇಶ) ಸದಸ್ಯರು (22) ಸದರ ಸಮಿತಿಯ ಸದಸ್ಯರಾಗಿರುತ್ತಾರೆ.

ಗ್ರಾಮಾಂತರ ಮತ್ತು ನಗರ ಪ್ರದೇಶಗಳ ಸ್ಥಳೀಯ ಸಂಸ್ಥೆಗಳು ಸಿದ್ದಪಡಿಸುವ ಯೋಜನೆಗಳನ್ನು ಕ್ರೋಢಿಕರಿಸಲು ಮತ್ತು ಒಟ್ಟಾರೆ ಜಿಲ್ಲೆಯ ಅಭಿವೃದ್ಧಿಗಾಗಿ ಯೋಜನೆಯ ಕರಡನ್ನು ಸಿದ್ದಪಡಿಸಲು ಈ ಸಮಿತಿಯನ್ನು ರಚಿಸಲಾಗಿದೆ.

ಧನ ಸಹಾಯ ನೀಡಿದ ವಿವರ:

1.	ಹಣಕಾಸು ಮಟ್ಟದ ಸಂಸ್ಥೆಗಳು	: –
2.	ಇತರ ರಾಜ್ಯ ಮಟ್ಟದ ಸಂಸ್ಥೆಗಳು	: –
3.	ಪ್ರತಿಯೊಂದು ಘಟಕ ಸಿಬ್ಬಂದಿ ವೆಚ್ಚ ಮತ್ತು ಸಾದಿಲ್ವಾರು ವೆಚ್ಚ	:
	1) 2515 ಡಿ.ಆರ್.ಡಿ.ಎ. ಆಡಳಿತ ವೆಚ್ಚ	: 124.44 ಲಕ್ಷ
	2) 2515 ಓಆರ್.ಡಿ.ಪಿ. ಜಿ.ಪಂ. ನಿರ್ವಹಣಾ ವೆಚ್ಚ	: 294.49 ಲಕ್ಷ
4.	ಪರಿಶಿಷ್ಟ ಜಾತಿ/ಪಂಗಡಗಳ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ತೆಗೆದಿರಿಸಲಾದ ಒಟ್ಟು ಹಣ ಹಾಗೂ ಖರ್ಚಿನ ಒಟ್ಟು ಹಣ (ಯೋಜನೆ, ಯೋಜನೇತರ ಸೇರಿ)	:
	1) ತೆಗೆದಿರಿಸಲಾದ ಒಟ್ಟು ಹಣ	: ಇಲ್ಲ
	2) ಖರ್ಚಿನ ಒಟ್ಟು ಹಣ	: ಇಲ್ಲ
5.	ಜಿಲ್ಲಾ ಪಂಚಾಯತ ಎತ್ತಿದ ಸಾಲಗಳು	: ಇಲ್ಲ
6.	ರಚಿಸಲಾದ ಋಣ ತೀರಿಕೆ (ಸಿಂಕಿಂಗ್ ಫಂಡ)	: ಇಲ್ಲ
7.	ಜಿಲ್ಲಾ ಪಂಚಾಯತ ಅಂದಾಜು ಪತ್ರಿಕೆಯಲ್ಲಿ ನಮೂದಾಗದೇ ಇರುವ ಬಾಬುಗಳ ಮೇಲೆ ಮಾಡಲಾದ ಖರ್ಚು, ಮಾಡಲು ಕಾರಣ	
8.	ಸಕಾಲದಲ್ಲಿ ಲೆಕ್ಕ ಪತ್ರಗಳನ್ನು ಕಳುಹಿಸಲಾಗಿದೆಯೇ ?	: 2019–20 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ ವಾರ್ಷಿಕ ಲೆಕ್ಕಪತ್ರ ತಯಾರಿಸಲಾಗಿದ್ದು,

ಸಾಮಾನ್ಯ ಸಭೆ ಅನುಮೋದನೆ ಪಡೆದು ಸರಕಾರಕ್ಕೆ ಹಾಗೂ ಮಹಾಲೇಖಾಪಾಲರಿಗೆ ಸಲ್ಲಿಸಲಾಗುವುದು.

9. ವಸೂಲಾಗದೇ ಇರುವ ಹಣವನ್ನು ಲೆಕ್ಕದಿಂದ ತೆಗೆದುಹಾಕಿದ್ದು :
   1) ಜಿಲ್ಲಾ ಪಂಚಾಯತದಿಂದ : – ಇಲ್ಲ –
   2) ಸರಕಾರದ ಪೂರ್ವಾನುಮತಿಯಿಂದ : – ಇಲ್ಲ –
10. ಲೆಕ್ಕ ಪರಿಶೋಧಕರಿಂದ ತಿರಸ್ಕರಿಸಲ್ಪಟ್ಟ ಬಾಬುಗಳು ಆ ಬಗ್ಗೆ ಆದೇಶಗಳು : ತಿರಸ್ಕರಿಸಲ್ಪಟ್ಟ ಬಾಬ್ತುಗಳು ಇರುವದಿಲ್ಲ
11. ಲೆಕ್ಕ ಪರಿಶೋಧಕರಿಂದ ತಿರಸ್ಕರಿಲ್ಪಟ್ಟ ಮತ್ತು ಅದರ ಬಡ್ಡಿ ಪೈಕಿ ವಸೂಲಾದ ಒಟ್ಟು ಹಣ : ಅನ್ವಯಿಸುವದಿಲ್ಲ.
12. ಪ್ರಕರಣ 165.166.177 ರ ಕೆಳಗೆ ಮಾಹಿತಿ

ಕ್ರ. ಸಂ.	ಅಧ್ಯಕ್ಷರ ಹೆಸರು	ಹುದ್ದೆ	ಗೌರವ ಧನ	ಪ್ರವಾಸ ಭತ್ಯೆ	ಮನೆ ಬಾಡಿಗೆ ಭತ್ಯೆ	ಅತಿಥಿ ಭತ್ಯೆ	ಒಟ್ಟು
1.	ಶ್ರೀಮತಿ ಆಶಾ ಪ್ರ. ಐಹೋಳೆ	ಅಧ್ಯಕ್ಷರು	420000	250000	240000	156062	1066062
2.	ಶ್ರೀ ಅರುಣ ಅ. ಕಟಾಂಬಳೆ	ಉಪಾಧ್ಯಕ್ಷರು	180000	12000	120000	460	312460

7) ಪ್ರಕರಣ ರನ್ವಯ ಆಡಳಿತ

1) ಜಿಲ್ಲಾ ಪಂಚಾಯತಿ ಸಿಬ್ಬಂದಿ ಒಟ್ಟಾರೆ ಮಂಜೂರಾದ ಹುದ್ದೆಗಳ ಸಂಖ್ಯೆ
2) ಖಾಲಿಯಿರುವ ಹುದ್ದೆಗಳು ಹಾಗೂ ಭರ್ತಿ ಮಾಡದಿರುವುದಕ್ಕೆ ಕಾರಣಗಳು

ಜಿಲ್ಲಾ ಪಂಚಾಯತ ಬೆಳಗಾವಿಗೆ ಮಂಜೂರಾದ ಭರ್ತಿಯಾದ ಮತ್ತು ಖಾಲಿ ಇರುವ ಹುದ್ದೆಗಳ ವಿವರ

ಕ್ರ. ಸಂ.	ಹುದ್ದೆ	ಮಂಜೂರಾಗಿರುವ ಹುದ್ದೆಗಳ ಸಂಖ್ಯೆ	ಕೆಲಸ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1	**2**	**3**	**4**	**5**
1	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು	1	1	–
2	ಉಪ ಕಾರ್ಯದರ್ಶಿ (ಆಡಳಿತ)	1	1	–
3	ಉಪ ಕಾರ್ಯದರ್ಶಿ (ಅಭಿವೃದ್ಧಿ)	1	1	–
4	ಮುಖ್ಯ ಲೆಕ್ಕಾಧಿಕಾರಿ	1	1	–
5	ಮುಖ್ಯ ಯೋಜನಾಧಿಕಾರಿ	1	1	–
6	ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ. ಕೋಶ	1	1	–
7	ಯೋಜನಾ ಅಂದಾಜು ಮತ್ತು ಮೌಲ್ಯಮಾಪನ ಅಧಿಕಾರಿ	1	1	–
8	ಸಹಾಯಕ ಕಾರ್ಯದರ್ಶಿ (ಆಡಳಿತ)	1	1	–
9	ಸಹಾಯಕ ಕಾರ್ಯದರ್ಶಿ (ಅಭಿವೃದ್ಧಿ)	1	–	–

10	ಸಹಾಯಕ ಯೋಜನಾಧಿಕಾರಿ ಡಿ.ಆರ್.ಡಿ.ಎ. ಕೋಶ	1	–	1
11	ಸಹಾಯಕ ಯೋಜನಾಧಿಕಾರಿ ಎಸ್.ಜಿ.ಎಸ್.ವಾಯ್.	1	1	–
12	ಲೆಕ್ಕಾಧಿಕಾರಿ	2	–	2
13	ಲೆಕ್ಕಾಧಿಕ್ಷಕರು	4	4	–
14	ಯೋಜನಾ ಸಹಾಯಕರು (ಆರ್ಥಿಕ) ಸಾಂಖ್ಯಿಕ	2	2	–
15	ಕಿರಿಯ ಇಂಜನೀಯರ	4	1	3
16	ಅಧೀಕ್ಷಕರು/ಲೆಕ್ಕಾಧಿಕ್ಷಕರು	5	4	1
17	ಪ.ದ.ಸ.	22	12	10
18	ಶೀಘ್ರಲಿಪಿಗಾರರು	9	0	9
19	ದ್ವಿ.ದ.ಸ.	15	5	10
20	ರಿಕಾರ್ಡ ಕೀಪರ	1	–	1
21	ಬೆರಳಚ್ಚುಗಾರರು	9	1	8
22	ಕ್ಲರ್ಕ ಕಮ್ ಬೆರಳಚ್ಚುಗಾರ	1	–	1
23	ಡಾಟಾ ಎಂಟ್ರಿ ಆಪರೇಟರ್	1	–	1
24	ವಾಹನ ಚಾಲಕರು	6	1	5
25	ಗ್ರೂಪ್ ಡಿ	15	4	11
26	ಬೈಂಡರ್	1	–	1
	ಒಟ್ಟು	**108**	**43**	**65**

ಘೋಷವಾರೆ :

1. ಮಂಜೂರಾದ ಹುದ್ದೆಗಳು : 108
2. ಭರ್ತಿಯಾದ ಹುದ್ದೆಗಳು : 43
3. ಖಾಲಿ ಇರುವ ಹುದ್ದೆಗಳು : 65

ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕಾರ್ಯಕ್ರಮಗಳು

1) ನವ ರಾಷ್ಟ್ರೀಯ ಜೈವಾನಿಲ ಮತ್ತು ಸಾವಯವ ಗೊಬ್ಬರ ನಿರ್ವಹಣೆ ಯೋಜನೆ :

ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಉರುವಲು ಕಟ್ಟಿಗೆಯ ಬಳಕೆಯನ್ನು ಮಿತಿಗೊಳಿಸಿ ಅರಣ್ಯ ನಾಶ ತಡೆಯುವದು ಮತ್ತು ಇಂಧನ ಕೊರತೆಯನ್ನು ಅನುಭವಿಸುತ್ತಿರುವ ಇಂದಿನ ದಿನಗಳಲ್ಲಿ ಸೀಮೆ ಎಣ್ಣೆ, ವಿದ್ಯುತ್ ಶಕ್ತಿ ಮಿತಿಗೊಳಿಸಿ ಗ್ರಾಮಾಂತರ ಪ್ರದೇಶದಲ್ಲಿ ಲಭ್ಯವಿರುವ ಸಗಣಿಯಿಂದ ಜೈವಿಕ ಅನಿಲ ಯಂತ್ರದ ಮೂಲಕ ಜೈವಾನಿಲ ಉತ್ಪಾದಿಸಿ ಅಡುಗೆ ಅನಿಲಕ್ಕೆ ಪರ್ಯಾಯವಾಗಿ ಬಳಸಿಕೊಂಡು ಗ್ರಾಮಾಂತರ ಕುಟುಂಬದ ಸದಸ್ಯರು ಆರೋಗ್ಯದಿಂದ ಇರುವಂತೆ ಮಾಡುವದು ಹಾಗೂ ಜೈವಿಕ ಅನಿಲ ಯಂತ್ರದಿಂದ ಹೊರಬರುವ ಸಾವಯವ ಗೊಬ್ಬರದಿಂದ ಭೂಮಿ ಫಲವತ್ತತೆಯನ್ನು ಕಾಪಾಡುವದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಸನ್ 2019–20 ನೇ ಸಾಲಿನಲ್ಲಿ ಸರ್ಕಾರದಿಂದ 1800 ಭೌತಿಕ ಗುರಿ ನಿಗದಿಯಾಗಿದ್ದು ವರ್ಷಾಂತ್ಯಕ್ಕೆ 2105 ಜೈವಾನಿಲ ಸ್ಥಾವರ ನಿರ್ಮಿಸಲಾಗಿದೆ. ಪ್ರಸಕ್ತ ಸಾಲಿನ ವರ್ಷಾಂತ್ಯದವರೆಗೆ ರೂ. 129.36 ಲಕ್ಷ ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ.

2) ವಸತಿ ಯೋಜನೆ :

ಸನ್ 2019–20 ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಗೆ ಕೇಂದ್ರ ಸರ್ಕಾರದ ವಸತಿ ಯೋಜನೆಯಾದ ಪ್ರಧಾನ ಮಂತ್ರಿ ಗ್ರಾಮೀಣ ಆವಾಸ್ ಯೋಜನೆಯಡಿ 8520 ಮನೆಗಳ ಗುರಿಯನ್ನು ನಿಗದಿಪಡಿಸಿದ್ದು ಈ ಪೈಕಿ 7093 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿರುತ್ತದೆ.

ಅದರಂತೆ ಸನ್ 2018–19ನೇ ಸಾಲಿಗೆ 21061 ಮನೆಗಳನ್ನು ನಿರ್ಮಿಸುವ MPIC ಗುರಿ ಹೊಂದಿದ್ದು ಅದರ ಪೈಕಿ 11337 ಮನೆಗಳನ್ನು ಪೂರ್ಣಗೊಳಿಸಿ ಶೇಕಡಾ 54 ಪ್ರತಿಶತ ಪ್ರಗತಿಯನ್ನು ಸಾಧಿಸಲಾಗಿದೆ.

3) ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

ಸನ್ 2019–20ನೇ ಸಾಲಿನಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಇಲ್ಲಿಯವರೆಗೆ 6.12 ಲಕ್ಷ ಕುಟುಂಬಗಳು ನೋಂದಣಿಯಾಗಿರುತ್ತವೆ. 6.12 ಲಕ್ಷ ಉದ್ಯೋಗ ಚೀಟಿಗಳನ್ನು ವಿತರಿಸಲಾಗಿರುತ್ತದೆ. ಭೌತಿಕ ಗುರಿ 118.82 ಲಕ್ಷಗಳ ಮಾನವ ದಿನಗಳ ಗುರಿ ನಿಗದಿಪಡಿಸಲಾಗಿತ್ತು. 82.84 ಲಕ್ಷಗಳಷ್ಟು ಮಾನವ ದಿನಗಳನ್ನು ಸೃಜಿಸಿ ಶೇ 69.72 ರಷ್ಟು ಪ್ರಗತಿ ಸಾಧಿಸಲಾಗಿದೆ. ಅದರಂತೆ 1.92 ಲಕ್ಷ ಕುಟುಂಬಗಳಿಗೆ ಹಾಗೂ 3.00 ಲಕ್ಷ ಕೂಲಿ ಕಾರ್ಮಿಕರಿಗೆ ಉದ್ಯೋಗ ಒದಗಿಸಲಾಗಿರುತ್ತದೆ. ಒಟ್ಟು 15154 ಕುಟುಂಬಗಳು 100 ದಿನಗಳ ಉದ್ಯೋಗವನ್ನು ಪೂರ್ಣಗೊಳಿಸಿರುತ್ತಾರೆ. ಆರ್ಥಿಕ ಗುರಿ ರೂ. 52268.92 ಲಕ್ಷಗಳ ಪೈಕಿ ರೂ. 35694.72 ಲಕ್ಷಗಳ ವೆಚ್ಚ ಭರಿಸಿ ಶೇ 68.29 ರಷ್ಟು ಪ್ರಗತಿ ಸಾಧಿಸಲಾಗಿದೆ.

ಸದರಿ ಯೋಜನೆಯಡಿ ಕೊಳವೆ ಬಾವಿಗಳ ಮರುಪೂರಣ ಘಟಕ, ಅರಣ್ಯೀಕರಣ ಹಾಗೂ ವೈಯಕ್ತಿಕ ಕಾಮಗಾರಿಗಳಾದ ತೋಟಗಾರಿಕೆ, ರೇಷ್ಮೇ ನಾಟಿ, ಕೃಷಿ ಹೊಂಡ, ಬದುನಿರ್ಮಾಣಕೆರೆಗಳ ಪುನಶ್ಚೇತನ, ನಮ್ಮ ಹೊಲ ನಮ್ಮ ದಾರಿ, ಅಂಗನವಾಡಿ ಕಟ್ಟಡ, ರಾಜೀವ ಗಾಂದಿ ಸೇವಾ ಕೇಂದ್ರ, ಆಟದ ಮೈದಾನ ಅಭಿವೃದ್ಧಿ, ದನದ ಕೊಟ್ಟಿಗೆ ನಿರ್ಮಾಣ, ಸ್ಮಶಾನ ಅಭಿವೃದ್ಧಿ ಇತ್ಯಾದಿ ಕಾಮಗಾರಿಗಳನ್ನು ಕೈಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

4) **ಸ್ವಚ್ಛ ಭಾರತ ಮಿಷನ್ (ಗ್ರಾ):** ಸ್ವಚ್ಛ ಭಾರತ ಮಿಷನ್ (ಗ್ರಾ) 2012 ರ ಸಮೀಕ್ಷೆಯಂತೆ 5,41,264 ಕುಟುಂಬಗಳಲ್ಲಿ 1,12,575 ಕುಟುಂಬಗಳು ಶೌಚಾಲಯ ಹೊಂದಿರುವ ಹಾಗೂ 4,28,689 ಶೌಚಾಲಯ ರಹಿತ ಕುಟುಂಬಗಳಿದ್ದವು.

2013–14 ನೇ ಸಾಲನಿಂದ 2018–19 ನೇ ಸಾಲಿನವರೆಗೆ ಒಟ್ಟು 4,28,689 ವೈಯಕ್ತಿಕ ಗೃಹ ಶೌಚಾಲಯಗಳನ್ನು ನಿರ್ಮಾಣ ಮಾಡಿ ದಿನಾಂಕ 19–11–2018 ರಂದು ಬೆಳಗಾವಿ ಜಿಲ್ಲೆಯನ್ನು ಬಯಲು ಬಹಿರ್ದೆಸಿ ಮುಕ್ತ ಜಿಲ್ಲೆಯೆಂದು

ಘೋಷಿಸಲಾಗಿದೆ. ಅದರಂತೆ 2019–20ನೇ ಸಾಲಿನಲ್ಲಿ ಬೇಸಲೈನ್ ಸಮೀಕ್ಷೆಯಿಂದ ಹೊರಗುಳಿದ ಒಟ್ಟು 25,246 ಕುಟುಂಬಗಳಿಗೆ LOB ಮತ್ತು NOLB ಅಡಿ ವೈಯಕ್ತಿಕ ಗೃಹ ಶೌಚಾಲಯಗಳ ನಿರ್ಮಾಣ ಪ್ರಗತಿಯಲ್ಲಿವೆ. ಶೌಚಾಲಯಗಳ ನಿರಂತರ ಬಳಕೆ ಮತ್ತು ಶುಚಿತ್ವ ಹಾಗೂ ಗ್ರಾಮಗಳ ನೈರ್ಮಲ್ಯದ ಕುರಿತು ಎಲ್ಲಾ ಗ್ರಾಮಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಸಂಜೀವಿನಿ : ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ

1) **ಎನ್‌ಆರ್‌ಎಲ್‌ಎಂ ಯೋಜನೆಯಡಿ** 2019–20 ನೇ ಸಾಲಿಗೆ ಬೆಳಗಾವಿ ಜಿಲ್ಲೆಗೆ 56 ಗ್ರಾಮ ಪಂಚಾಯತ ಒಕ್ಕೂಟಗಳನ್ನು ರಚಿಸಲು ಭೌತಿಕ ಗುರಿ ಹಾಗೂ ರೂ. 17.36 ಲಕ್ಷ ಆರ್ಥಿಕ ಗುರಿ ನಿಗದಿ ಪಡಿಸಿದ್ದು, ಆ ಪ್ರಕಾರ ಜಿಲ್ಲೆಯಲ್ಲಿ 57 ಗ್ರಾಮ ಪಂಚಾಯತ ಮಟ್ಟದ ಒಕ್ಕೂಟಗಳು ಹಾಗೂ 254 ವಾರ್ಡ ಮಟ್ಟದ ಒಕ್ಕೂಟ ರಚನೆಯನ್ನು ಮಾಡಿ 1878 ಸ್ವಸಹಾಯ ಸಂಘಗಳನ್ನು ಸೇರ್ಪಡೆ ಮಾಡಲಾಗಿದೆ. ಅದರಂತೆ, ಅಲ್ಲದೇ 594 ಹೊಸ ಸ್ವಸಹಾಯ ಸಂಘಗಳ ರಚನೆ ಮಾಡಲಾಗಿದೆ. ಸ್ವಸಹಾಯ ಸಂಘಗಳ 21042 ಸದಸ್ಯರ ಆಧಾರ ಸೀಡಿಂಗ್ ಮಾಡಲಾಗಿದೆ. ಹಿಂದಿನ ವರ್ಷ ರಚಿಸಲಾದ ಒಟ್ಟು 18 ಒಕ್ಕೂಟಗಳಿಗೆ ಸಮುದಾಯ ಬಂಡವಾಳ ನಿಧಿ ರೂ. 227.00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ ಮತ್ತು 48 ಮುಖ್ಯ ಪುಸ್ತಕ ಬರಹಗಾರರ, 223 ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳ ಹಾಗೂ 51 ತಾಲೂಕಾ ಮಟ್ಟದ ಸಂಪನ್ಮೂಲ ವ್ಯಕ್ತಿಗಳ ತರಬೇತಿಯನ್ನು ಏರ್ಪಡಿಸಲಾಗಿದೆ.

2) **ಶ್ಯಾಮ ಪ್ರಸಾದ ಮುಖರ್ಜಿ ರುರ್ಬನ್ ಅಭಿಯಾನ್ :** ಸದರಿ ಅಭಿಯಾನವನ್ನು ಪ್ರಸ್ತುತ 2016–17 ನೇ ಸಾಲಿನಿಂದ ಪ್ರಾರಂಭವಾಗಿದ್ದು, ಸದರಿ ಅಭಿಯಾನವನ್ನು ಅನುಷ್ಠಾನಗೊಳಿಸಲು ಬೆಳಗಾವಿ ಜಿಲ್ಲೆಯ ಕಂಗ್ರಾಳಿ ಕ್ಲಸ್ಟರ್ ಆಯ್ಕೆ ಆಗಿರುತ್ತದೆ. ಕಂಗ್ರಾಳಿ ಬಿ.ಕೆ., ಕಂಗ್ರಾಳಿ ಕೆಎಚ್, ಮಂಡೋಳಿ ಹಾಗೂ ಅಂಬೇವಾಡಿ ಗ್ರಾಮ ಪಂಚಾಯತಿಗಳನ್ನು ಒಳಗೊಂಡಿರುವ ಈ ಯೋಜನೆಯಲ್ಲಿ ಹಳ್ಳಿಯ ವಾತಾವರಣ ಉಳಿಸಿ ಗ್ರಾಮಸ್ಥರ ಜೀವನೋಪಾಯ ಮಟ್ಟ ಹೆಚ್ಚಿಸಿ ಪಟ್ಟಣದ ಎಲ್ಲ ಆಧುನಿಕ ಸೌಲಭ್ಯ ಕಲ್ಪಿಸುವ ಗುರಿ ಹೊಂದಲಾಗಿದೆ ಹಾಗೂ ಈಗಾಗಲೇ ರೂ. 116.91 ಕೋಟಿ ಮೊತ್ತದ ಕ್ರಿಯಾ ಯೋಜನೆಗೆ ಅನುಮೋದನೆ ದೊರೆತಿದೆ ಹಾಗೂ ಅನುಷ್ಠಾನ ಇಲಾಖೆಗಳಿಂದ ಒಗ್ಗೂಡಿಸುವಿಕೆಯಡಿ ರೂ. 21.04 ಕೋಟಿ ಮೊತ್ತದ ಕಾಮಗಾರಿಗಳನ್ನು ಪೂರ್ಣಗೊಳಿಸಿರುತ್ತಾರೆ. ಕಂಗ್ರಾಳಿ ಕ್ಲಸ್ಟರದಲ್ಲಿ ಸಿಜಿಎಫ್ ಅನುದಾನದಡಿ ರೂ. 2.27 ಕೋಟಿ ವೆಚ್ಚ ಭರಿಸಲಾಗಿದ್ದು 32 ಕಾಮಗಾರಿಗಳನ್ನು ಪೂರ್ಣಗೊಳಿಸಿ ಪ್ರಗತಿ ಸಾಧಿಸಲಾಗಿದೆ.

ತೋಟಗಾರಿಕೆ ಇಲಾಖೆ

ಬೆಳಗಾವಿ ಜಿಲ್ಲೆಯ ಭೌಗೋಳಿಕವಾಗಿ 10 ಕಂದಾಯ ತಾಲ್ಲೂಕುಗಳನ್ನು ಒಳಗೊಂಡು ಒಟ್ಟು 13,415 ಕಿ.ಮೀ. ವಿಸ್ತೀರ್ಣ ಹೊಂದಿರುತ್ತದೆ. ಜಿಲ್ಲೆಯಲ್ಲಿ ಒಟ್ಟು 10.09,297 ಹೆ. ಪ್ರದೇಶವು ಸಾಗುವಳಿಗೆ ಯೋಗ್ಯವಾದ ಪ್ರದೇಶವಾಗಿರುತ್ತದೆ. ಜಿಲ್ಲೆಯಲ್ಲಿ 2018–19ನೇ ಸಾಲಿನಲ್ಲಿ ಹಣ್ಣಿನ ಬೆಳೆಗಳ ವಿಸ್ತೀರ್ಣ 19234.00 ಹೆ. ತರಕಾರಿ ಬೆಳೆಗಳು–44754.34 ಹೆ. ಸಾಂಬಾರು ಬೆಳೆಗಳು–9790.3 ಹೆ. ತೋಟದ ಬೆಳೆಗಳು–9663.14 ಹೆ. ಹಾಗೂ ವಾಣಿಜ್ಯ ಪುಷ್ಪ ಬೆಳೆಗಳು–1719.12 ಹೆ.ಗಳು ಒಟ್ಟು 85163.05 ಹೆ. ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ರೈತರು ಬೆಳೆಯುತ್ತಿದ್ದಾರೆ.

ಜಿಲ್ಲೆಯಲ್ಲಿ ಬೆಳಗಾವಿ, ಬೈಲಹೊಂಗಲ್, ಖಾನಾಪೂರ, ಗೋಕಾಕ, ಸವದತ್ತಿ, ಚಿಕ್ಕೋಡಿ ಹಾಗೂ ಹುಕ್ಕೇರಿ ತಾಲ್ಲೂಕುಗಳಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಾರ್ಯಾಲಯಗಳಿರುತ್ತವೆ. ಅಥಣಿ, ರಾಯಬಾಗ ಹಾಗೂ ರಾಮದುರ್ಗ ತಾಲ್ಲೂಕುಗಳಲ್ಲಿ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಾರ್ಯಾಲಯಗಳಿರುತ್ತವೆ. ಜಿಲ್ಲೆಯಲ್ಲಿ ಒಟ್ಟು 36 ರೈತ ಸಂಪರ್ಕ ಕೇಂದ್ರಗಳಿದ್ದು, 36 ಕೇಂದ್ರಗಳಿಗೆ ಸಹಾಯಕ ತೋಟಗಾರಿಕೆ ಅಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಿರುತ್ತಾರೆ. ಇದರಿಂದ ಇಲಾಖೆಯ ಯೋಜನೆಗಳಾದ ರಾಷ್ಟ್ರೀಯ ತೋಟಗಾರಿಕೆ ಮಿಷನ್, ಸಮಗ್ರ ತೋಟಗಾರಿಕೆ ಅಭಿವೃದ್ಧಿ, ಹನಿ ನೀರಾವರಿ, ರಾಜ್ಯವಲಯ ಹಾಗೂ ಜಿಲ್ಲಾ ಪಂಚಾಯತ್ ಯೋಜನೆಗಳನ್ನು ಅನುಷ್ಠಾನಗೊಳಿಸಲು ಬಹಳ ಅನುಕೂಲವಾಗಿದೆ.

ತೋಟಗಾರಿಕೆ ಉಪನಿರ್ದೇಶಕರ ಕಾರ್ಯಾಲಯವು ಜಿಲ್ಲಾ ಕೇಂದ್ರವಾದ ಬೆಳಗಾವಿಯಲ್ಲಿದ್ದು, ಇದು ಇಲಾಖೆಯ ಕಾರ್ಯಚಟುವಟಿಕೆಗಳನ್ನು ಜಿಲ್ಲಾ ಮಟ್ಟದಲ್ಲಿ ಆಡಳಿತಾತ್ಮಕವಾಗಿ ಹಾಗೂ ತಾಂತ್ರಿಕವಾಗಿ ನಿಯಂತ್ರಿಸುತ್ತದೆ.

2019–20ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿರುವ ಯೋಜನೆಗಳು :–

1) ಜಿಲ್ಲಾ ಪಂಚಾಯತ್ ಯೋಜನೆಗಳು :–

- **ಡಿ–01 : ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆತಾಳೆ ಬೇಸಾಯ :–** ಸದರಿ ಯೋಜನೆಯಡಿ ರೂ. 1.00 ಲಕ್ಷ ವಾರ್ಷಿಕ ಗುರಿ ಇದ್ದು, ರೂ. 1.00 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಅದರಲ್ಲಿ ಕೊಳವೆ ಬಾವಿಗೆ ಆರ್ಥಿಕ ರೂ. 0.50 ಲಕ್ಷ ಭೌತಿಕ :01ಸಂ., ತರಬೇತಿಗೆ ರೂ. 0.10 ಲಕ್ಷ ಭೌತಿಕ :25ಸಂ., ಅಂತರ ಬೆಳೆಗೆ ಸಹಾಯಧನ ಆರ್ಥಿಕ ರೂ. 0.25 ಲಕ್ಷ, ಭೌತಿಕ :5.00ಹೆ., ಯಂತ್ರೋಪಕರಣಗಳಿಗೆ ಡಿಸೇಲ್ ಪಂಪ್‌ಸೆಟ್‌ಗೆ ಆರ್ಥಿಕ ರೂ. 0.15 ಲಕ್ಷ, ಭೌತಿಕ :1 ಸಂಖ್ಯೆ ಪ್ರಗತಿ ಸಾಧಿಸಲಾಗಿದೆ.

- **ಡಿ–02 : ಹನಿ ನೀರಾವರಿ ಯೋಜನೆ :–** ಸದರಿ ಯೋಜನೆಯಡಿ ವಿವಿಧ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಅವಳವಡಿಸಿರುವ ರೈತರಿಗೆ ಶೇ 90ರ ಸಹಾಯಧನ ನೀಡಲಾಗುವುದು. ಈ ಯೋಜನೆಯಲ್ಲಿ ಆರ್ಥಿಕ ಗುರಿ ರೂ. 60.00ಲಕ್ಷ ಭೌತಿಕ ಗುರಿ 120 ಹೆ. ಇದ್ದು, ಇದರಲ್ಲಿ ಆರ್ಥಿಕ ರೂ. 60.00 ಲಕ್ಷ ಹಾಗೂ ಭೌತಿಕ 67.03 ಹೆ. ಪ್ರಗತಿ ಸಾಧಿಸಿದೆ.

- **ಡಿ–03 : ತೋಟಗಾರಿಕೆ ಕಟ್ಟಡಗಳು :–** ಸದರಿ ಯೋಜನೆಯಡಿ ಜಿಲ್ಲೆಯಲ್ಲಿ ಬರುವ ತಾಲ್ಲೂಕಾ ಕಾರ್ಯಾಲಯ ಹಾಗೂ ಜಿಲ್ಲಾ ಕಾರ್ಯಾಲಯಗಳಲ್ಲಿ ರಿಪೇರಿ, ದುರಸ್ತಿ, ಹೆಚ್ಚಿನ ಕೊಠಡಿ, ಕಂಪೌಂಡ ಗೋಡೆ ಹಾಗೂ ನವೀಕರಣ ಕೆಲಸಗಳ ಕುರಿತು ಸದರಿ ಯೋಜನೆಯಡಿ ವಾರ್ಷಿಕ ಗುರಿ ರೂ. 35.00 ಲಕ್ಷ ಹಾಗೂ ಭೌತಿಕ 10 ಸಂ.ಗಳಿದ್ದು, ಶೇ.100 ರಷ್ಟು ಪ್ರಗತಿ ಸಾಧಿಸಲಾಗಿದೆ.

- **ಡಿ–04 : ತೋಟಗಾರಿಕೆ ಕ್ಷೇತ್ರ/ನರ್ಸರಿಗಳ ನಿರ್ವಹಣೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿ :–** ಸದರಿ ಯೋಜನೆಯಡಿ ವಾರ್ಷಿಕ ಗುರಿ ರೂ. 20.00 ಲಕ್ಷಗಳಿದ್ದು, ರೂ. 19.99 ಲಕ್ಷ ವೆಚ್ಚ ಭರಿಸಲಾಗಿದೆ. ಒಟ್ಟು 8 ಕ್ಷೇತ್ರಗಳಲ್ಲಿ ಉತ್ಪಾದನೆ ಹೆಚ್ಚಿಸಲು ನಿರ್ವಹಣೆ ಕೈಗೊಳ್ಳಲಾಗಿದೆ.

- **ಡಿ–05 : ತೆಂಗುಬೀಜ ಸಂಗ್ರಹಣೆ ಹಾಗೂ ನರ್ಸರಿ ನಿರ್ವಹಣೆ :–** ಸದರಿ ಯೋಜನೆಯಡಿ ವಾರ್ಷಿಕ ಗುರಿ ರೂ. 3.00 ಲಕ್ಷಗಳಿದ್ದು, ರೂ. 3.00 ಲಕ್ಷ ಸಾಧನೆಯಾಗಿದೆ. ಇದರಲ್ಲಿ ತೆಂಗಿನ ಸಸಿ ಉತ್ಪಾದಿಸಲು ರೂ. 2.508 ಲಕ್ಷ ವೆಚ್ಚ ಭರಿಸಲಾಗಿದೆ ಹಾಗೂ 4800 ಸಂ. ಭೌತಿಕ ಪ್ರಗತಿ ಸಾಧಿಸಲಾಗಿದೆ. ರೂ. 0.492 ಲಕ್ಷ ಅನುದಾನವನ್ನು ಸನ್ 2018–19ರ ಸಸ್ಯಾಗಾರ ನಿರ್ವಹಣೆಗೆ ವೆಚ್ಚ ಭರಿಸಿ 11859 ಸಂ. ಭೌತಿಕ ಪ್ರಗತಿ ಸಾಧಿಸಲಾಗಿದೆ.

- **ಡಿ–06 : ಪ್ರಚಾರ ಮತ್ತು ಸಾಹಿತ್ಯ :–** ತೋಟಗಾರಿಕೆ ಇಲಾಖೆಯ ವಿವಿಧ ಯೋಜನೆಗಳ ಬಗ್ಗೆ ಹೆಚ್ಚಿನ ಪ್ರಚಾರಕ್ಕಾಗಿ ರೂ. 3.00 ಲಕ್ಷಗಳ ವಾರ್ಷಿಕ ಗುರಿ ಇದ್ದು, ಇದರಲ್ಲಿ ರೂ. 3.00 ಲಕ್ಷ ಹಣ ಬಿಡುಗಡೆಯಾಗಿದ್ದು, ಸ್ತಬ್ಧಚಿತ್ರ ತಯಾರಿಸಲು ರೂ. 1.20 ಲಕ್ಷ ಹಾಗೂ ಪ್ರಚಾರಕ್ಕಾಗಿ ರೂ. 1.80 ಲಕ್ಷ ವೆಚ್ಚ ಭರಿಸಿ ಶೇ. 100 ರಷ್ಟು ಪ್ರಗತಿ ಸಾಧಿಸಲಾಗಿದೆ.

- **ಡಿ–08 : ಜೇನುಕೃಷಿ ಯೋಜನೆ :–** ಜೇನುಕೃಷಿ ಅಭಿವೃದ್ಧಿಯ ವಿವಿಧ ಚಟುವಟಿಕೆಗಳ ಕುರಿತು ಸನ್ 2019–20 ನೇ ಸಾಲಿಗೆ ರೂ. 3.00 ಲಕ್ಷಗಳ ಅನುದಾನದ ಅವಕಾಶವಿರುತ್ತದೆ. ಈ ಅನುದಾನದಲ್ಲಿ ಜೇನುಕೃಷಿ ರೈತರಿಗೆ ತರಬೇತಿ ನೀಡಿದ್ದು, ಶೇ. 50ರ ಪ್ರೋತ್ಸಾಹಧನದಲ್ಲಿ ಕೃಷಿಕರಿಗೆ ಜೇನುಕೃಷಿ ಪರಿಕರ ನೀಡಲಾಗಿದೆ. ಅಲ್ಲದೆ ತರಬೇತಿ ಕೇಂದ್ರದ ನಿರ್ವಹಣಾ ವೆಚ್ಚ ಭರಿಸಲಾಗಿದೆ. ಆರ್ಥಿಕ ಗುರಿ ರೂ. 3.00 ಲಕ್ಷ ಇದ್ದು, ಪೂರ್ತಿ ವೆಚ್ಚ ಭರಿಸಲಾಗಿದೆ. ಭೌತಿಕ ಗುರಿ 115 ಸಂ. ಇದ್ದು, 125 ಸಂ. ಭೌತಿಕ ಪ್ರಗತಿ ಸಾಧಿಸಲಾಗಿದೆ.

2) ತಾಲ್ಲೂಕಾ ಪಂಚಾಯತ್ ಯೋಜನೆಗಳು :–

- **ಡಿ–09 : ರೈತರಿಗೆ ಸಹಾಯ :–** ಸದರಿ ಯೋಜನೆಯಡಿ ರೈತರಿಗೆ ಸಸ್ಯ ಸಂರಕ್ಷಣೆ ಔಷಧಿ ವಿತರಣೆ ಹಾಗೂ ಸರ್ಕಾರಿ ಕಚೇರಿಗಳ ಮುಂದಿಡಲು ಅಲಂಕಾರಿಕ ಕುಂಡಗಳ ಅಭಿವೃದ್ಧಿ ಕುರಿತು ಜಿಲ್ಲೆಗೆ ರೂ. 4.00 ಲಕ್ಷ ಅನುದಾನ ನಿಗದಿಯಾಗಿದ್ದು, ಇದರಲ್ಲಿ ರೂ. 4.00 ಲಕ್ಷ ಬಿಡುಗಡೆಯಾಗಿದ್ದು ರೂ. 3.997 ಲಕ್ಷ ವೆಚ್ಚ ಭರಿಸಲಾಗಿದೆ. ತೋಟಗಾರಿಕೆ ಬೆಳೆಗಳಿಗೆ ಸಸ್ಯ ಸಂರಕ್ಷಣಾ ಔಷಧಿ ವಿತರಿಸಲು ರೂ. 1.999 ಲಕ್ಷ ವೆಚ್ಚಭರಿಸಿ, ಭೌತಿಕ 90 ಹೆ. ಪ್ರದೇಶಕ್ಕೆ ಔಷಧಿ ವಿತರಿಸಲಾಗಿದೆ. ಸರ್ಕಾರಿ/ಅತಿಥಿ ಗೃಹಗಳ ಮುಂದಿಡಲು ಅಲಂಕಾರಿಕ ಗಿಡಗಳ ಅಭಿವೃದ್ಧಿಗೆ ರೂ. 1.998 ಲಕ್ಷ ವೆಚ್ಚ ಭರಿಸಿ ಭೌತಿಕ 2541 ಸಂ. ಕಸಿ ಗಿಡಗಳನ್ನು ವಿತರಿಸಲಾಗಿದೆ.

- **ಡಿ–10 : ರೈತರಿಗೆ ತರಬೇತಿ :–** ಸದರಿ ಯೋಜನೆಯಡಿ ರೈತರಿಗೆ/ರೈತ ಮಹಿಳೆಯರಿಗೆ ತೋಟಗಾರಿಕೆ ಇಲಾಖೆಯ ಬೆಳೆಗಳನ್ನು ಬೆಳೆಯಲು ತರಬೇತಿ ನೀಡುವುದು. ಈ ಯೋಜನೆಯಡಿ ರೂ. 1.00 ಲಕ್ಷ ನಿಗದಿಯಾಗಿದ್ದು, ಇದರಲ್ಲಿ ರೂ. 1.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೈತ ಮಹಿಳೆಯರಿಗೆ ತರಬೇತಿ ಕಾರ್ಯಕ್ರಮಕ್ಕೆ ಆರ್ಥಿಕ ರೂ. 1.00 ಲಕ್ಷ, ಭೌತಿಕ 250 ಸಂ. ಗುರಿಯಿದ್ದು, ಇದರಲ್ಲಿ ರೂ. 1.00 ಲಕ್ಷ ಹಾಗೂ ಭೌತಿಕ 250 ಸಂ. ಪ್ರಗತಿ ಸಾಧಿಸಲಾಗಿದೆ.

3) ರಾಜ್ಯವಲಯ ಯೋಜನೆಗಳು :–

- **ಎಸ್–02 : ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆತಾಳೆ ವ್ಯವಸಾಯ ಯೋಜನೆ :–** ಸದರಿ ಯೋಜನೆಯಡಿ ಒಟ್ಟು ವಾರ್ಷಿಕ ಗುರಿ ಆರ್ಥಿಕ ರೂ. 47.29 ಲಕ್ಷ ಹಾಗೂ ಭೌತಿಕ 1196.35 ಸಂ./ಹೆ. ನಿಗದಿಯಾಗಿರುತ್ತದೆ. ಇದರಲ್ಲಿ ರೂ. 34.3112 ಲಕ್ಷ ಬಿಡುಗಡೆಯಾಗಿದ್ದು, ರೂ. 33.59312 ಲಕ್ಷ ಆರ್ಥಿಕ ಹಾಗೂ ಭೌತಿಕ 958.25 ಸಂ/ಹೆ ಸಾಧಿಸಲಾಗಿದೆ.

- **ಎಸ್–11 : ತೋಟಗಾರಿಕೆ ಕ್ಷೇತ್ರ/ನರ್ಸರಿಗಳ ಅಭಿವೃದ್ಧಿ ಮತ್ತು ನಿರ್ವಹಣೆ :–** ಸದರಿ ಯೋಜನೆಯಡಿ ವಾರ್ಷಿಕ ಗುರಿ ಆರ್ಥಿಕ ರೂ. 110.72 ಲಕ್ಷ, ಭೌತಿಕ 10425 ಗಿಡಗಳು ಹಾಗೂ 34 ಹೆ ಮತ್ತು 1000 ಮೀ ಪೈಪ್ ಲೈನ್, 19336 ಮೀ ಕ್ಷೇತ್ರ ನಿರ್ವಹಣೆ, 9 ಕಾಮಗಾರಿಗಳು ಹಾಗೂ 5 ಕಾರ್ಯಕ್ರಮಗಳ ಗುರಿ ನಿಗದಿಯಾಗಿದ್ದು, ಇದರಲ್ಲಿ ರೂ. 110.72 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಬಿಡುಗಡೆಯಾದ ಅನುದಾನಕ್ಕೆ ಆರ್ಥಿಕವಾಗಿ ರೂ. 110.72 ಲಕ್ಷ ವೆಚ್ಚ ಭರಿಸಲಾಗಿದ್ದು, ನಿಗದಿತ ಭೌತಿಕ ಗುರಿಯನ್ನು ಸಾಧಿಸಲಾಗಿದೆ.

- **ಎಸ್–14 : ಇಲಾಖೆ ಪ್ರಯೋಗ ಶಾಲೆಗಳ ಅಭಿವೃದ್ಧಿ :–** ರೈತರ ಜಮೀನುಗಳ ಮಣ್ಣು ಪರೀಕ್ಷೆ ಮಾದರಿಗಳನ್ನು ವಿಶ್ಲೇಷಣೆ ಮಾಡಲಾಗುತ್ತಿದೆ. ಸದರಿ ಯೋಜನೆಯಡಿ ವಾರ್ಷಿಕ ಗುರಿ ಆರ್ಥಿಕ ರೂ. 91.59 ಲಕ್ಷ, ಭೌತಿಕ 7269 ಮಾದರಿ ಗುರಿ ನಿಗದಿಯಾಗಿದ್ದು, ಇದರಲ್ಲಿ ರೂ. 90.33 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಬಿಡುಗಡೆಯಾದ ಅನುದಾನಕ್ಕೆ ಆರ್ಥಿಕ ರೂ. 89.35 ಲಕ್ಷ ಹಾಗೂ ಭೌತಿಕ 4174 ಮಾದರಿ ಗುರಿ ಸಾಧಿಸಲಾಗಿದೆ.

- **ಎಸ್–15 : ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ :–** ತೋಟಗಾರಿಕೆ ಬೆಳೆಗಳ ರೋಗ/ಕೀಟ ನಿಯಂತ್ರಿಸಲು ಶೇ 75 ಮತ್ತು 90ರ ಸಹಾಯಧನವನ್ನು ವಿತರಿಸಲಾಗುತ್ತದೆ. ಈ ಯೋಜನೆಯಡಿ ವಾರ್ಷಿಕ ಗುರಿ ರೂ. 44.00 ಲಕ್ಷ ಭೌತಿಕ 568.89 ಹೆ. ನಿಗದಿಯಾಗಿದ್ದು, ಇದರಲ್ಲಿ ರೂ. 44.00 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಬಿಡುಗಡೆಯಾದ ಅನುದಾನಕ್ಕೆ ಆರ್ಥಿಕ ರೂ. 43.99914 ಲಕ್ಷ ಹಾಗೂ ಭೌತಿಕ 568.88 ಹೆ. ಪ್ರಗತಿ ಸಾಧಿಸಲಾಗಿದೆ.

- **ಎಸ್–06 : ವಿಸ್ತರಣೆ ಮತ್ತು ತರಬೇತಿ ಯೋಜನೆ :–** ತೋಟಗಾರಿಕೆ ಬೆಳೆಗಳ ಕ್ಷೇತ್ರ ವಿಸ್ತರಣೆ ಮಾಡುವುದು ಹಾಗೂ ರೈತರಿಗೆ / ರೈತರ ಮಕ್ಕಳಿಗೆ ತರಬೇತಿ ನೀಡುವದು. ಈ ಯೋಜನೆಯಡಿ ವಾರ್ಷಿಕ ಗುರಿ ಆರ್ಥಿಕ ರೂ. 20.22 ಲಕ್ಷ ನಿಗದಿಯಾಗಿದ್ದು, ಇದರಲ್ಲಿ ರೂ. 20.22 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಬಿಡುಗಡೆಯಾದ ಅನುದಾಕ್ಕೆ ಆರ್ಥಿಕ ರೂ. 20.21632 ಲಕ್ಷ ಸಾಧಿಸಲಾಗಿದೆ.

- **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ :–** ತೋಟಗಾರಿಕೆ ಇಲಾಖಾ ಪ್ರಯೋಗಾಲಯಗಳ ಬಲವರ್ಧನೆ, ತೋಟಗಾರಿಕೆಯಲ್ಲಿ ಯಾಂತ್ರೀಕರಣ ಹಾಗೂ ರೈತ ಉತ್ಪಾದಕ ಸಂಸ್ಥೆಗಳ ನಿರ್ವಹಣೆ ಮಾಡಲು ರೈತರಿಗೆ

ಸಹಾಯಧನ ಒದಗಿಸುವುದು. ಈ ಯೋಜನೆಯಡಿ ವಾರ್ಷಿಕ ಗುರಿ ಆರ್ಥಿಕ ರೂ. 35.51152 ಲಕ್ಷ, ಭೌತಿಕ 47 ಹೆ/ಸಂ ಗುರಿ ನಿಗದಿಯಾಗಿದ್ದು, ಇದರಲ್ಲಿ ರೂ. 35.51152 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಬಿಡುಗಡೆಯಾದ ಅನುದಾಕ್ಕೆ ಆರ್ಥಿಕ ರೂ.35.41759 ಲಕ್ಷ ಹಾಗೂ ಭೌತಿಕ 47 ಹೆ/ಸಂ ಗುರಿ ಸಾಧಿಸಲಾಗಿದೆ.

- **ಎಸ್–19 : ತೋಟಗಾರಿಕೆ ಉದ್ಯಾನವನಗಳು :–** ತೋಟಗಾರಿಕೆ ಇಲಾಖೆಯ ಉದ್ಯಾನವನಗಳ ಅಭಿವೃದ್ಧಿ ಹಾಗೂ ನಿರ್ವಹಣೆ ಕೈಗೊಳ್ಳಲಾಗಿದ್ದು, ವಾರ್ಷಿಕ ರೂ. 10.00 ಲಕ್ಷಗಳ ಗುರಿ ನಿಗದಿಯಾಗಿದ್ದು, ಇರದಲ್ಲಿ ರೂ. 10.00 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಬಿಡುಗಡೆಯಾದ ಅನುದಾಕ್ಕೆ ಆರ್ಥಿಕ ರೂ.9.99988 ಲಕ್ಷ ಗುರಿ ಸಾಧಿಸಲಾಗಿದೆ.

- **ಎಸ್–09 : ಸಮಗ್ರ ತೋಟಗಾರಿಕೆ ಅಭಿವೃದ್ಧಿ (CHD):–** ಈ ಯೋಜನೆಯಡಿ ವಿವಿಧ ತೋಟಗಾರಿಕೆ ಬೆಳೆಗಳನ್ನು ಸಮಗ್ರ ಬೇಸಾಯ ಪದ್ದತಿಯಡಿ ಬೆಳೆಯಲು, ಸಂಸ್ಕರಣೆ, ಮೌಲ್ಯವರ್ಧನೆ ಹಾಗೂ ಗುಣಮಟ್ಟ ವರ್ಧಿಸಲು ರೈತರಿಗೆ ಸಹಾಯಧನ ನೀಡಲಾಗುತ್ತಿದೆ. ವಾರ್ಷಿಕ ಗುರಿ ರೂ. 557.208 ಲಕ್ಷ, ಭೌತಿಕ 1988.41 ಹೆ/ಸಂ ನಿಗದಿಯಾಗಿದ್ದು, ಇದರಲ್ಲಿ ರೂ. 557.208 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಬಿಡುಗಡೆಯಾದ ಅನುದಾಕ್ಕೆ ಆರ್ಥಿಕ ರೂ. 556.50544 ಲಕ್ಷ ಹಾಗೂ ಭೌತಿಕ 1987.71 ಹೆ ಗುರಿ ಸಾಧಿಸಲಾಗಿದೆ.

- **ಎಸ್–04 : ಹನಿ ನೀರಾವರಿ ಯೋಜನೆ :–** ಅರ್ಹ ತೋಟಗಾರಿಕೆ ಬೆಳೆ ಬೆಳೆಯುತ್ತಿರುವ ರೈತರಿಗೆ ಶೇ 90ರವರೆಗೆ ಹನಿ ನೀರಾವರಿ ಅಳವಡಿಕೆಗೆ ಸಹಾಯಧನ ನೀಡಲಾಗುತ್ತಿದೆ. ಈ ಯೋಜನೆಯಡಿ ವಾರ್ಷಿಕ ಗುರಿ ಆರ್ಥಿಕ ರೂ. 1119.98 ಲಕ್ಷ, ಭೌತಿಕ 2196.56 ಹೆ ಗುರಿ ನಿಗದಿಯಾಗಿದ್ದು, ಇದರಲ್ಲಿ ರೂ. 1119.98 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಬಿಡುಗಡೆಯಾದ ಅನುದಾಕ್ಕೆ ಆರ್ಥಿಕ ರೂ. 1119.98 ಲಕ್ಷ ಹಾಗೂ ಭೌತಿಕ 1207.65 ಹೆ. ಗುರಿ ಸಾಧಿಸಲಾಗಿದೆ.

- **ಎಸ್–12 ರಾಷ್ಟ್ರೀಯ ತೋಟಗಾರಿಕೆ ಮಿಷನ್ :–** ಈ ಯೋಜನೆಯಡಿ ಹೊಸ ಪ್ರದೇಶ ವಿಸ್ತರಣೆ, ಸಂರಕ್ಷಿತ ಬೇಸಾಯ, ಯಾಂತ್ರೀಕರಣ ನೀರಿನ ಮೂಲಗಳ ನಿರ್ಮಾಣ ಹಾಗೂ ಕೊಯ್ಲೋತ್ತರ ನಿರ್ವಹಣೆಗಳನ್ನು ಮಾಡಿ ಉತ್ಪಾದನೆ ಹೆಚ್ಚಿಸುವುದು. ತೋಟಗಾರಿಕೆ ಬೆಳೆಗಳಾದ ದಾಳಿಂಬೆ, ಬಾಳೆ ಹಾಗೂ ತರಕಾರಿ ಬೆಳೆಗಳ ಪ್ರದೇಶ ವಿಸ್ತರಣೆ, ಮೂಲಭೂತ ಸೌಕರ್ಯಗಳಾದ ಹಸಿರುಮನೆ, ಕೃಷಿಹೊಂಡ, ಸಾವಯವ ತೋಟಗಾರಿಕೆ, ಕೊಯ್ಲೋತ್ತರ ನಿರ್ವಹಣೆ, ಸಸ್ಯ ಸಂರಕ್ಷಣೆ ಮುಂತಾದ ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. 2019–20 ನೇ ಸಾಲಿಗೆ ರೂ. 885.31 ಲಕ್ಷ ಹಣ ಬಿಡುಗಡೆಯಾಗಿದ್ದು, ರೂ. 884.67944 ಲಕ್ಷ ವೆಚ್ಚ ಭರಿಸಲಾಗಿದೆ.

- **ಕೃಷಿಭಾಗ್ಯ ಯೋಜನೆ :–** ಈ ಯೋಜನೆಯಡಿ ವಿವಿಧ ತರಕಾರಿ ಹಾಗೂ ಹೂವಿನ ಬೆಳೆಗಳನ್ನು ಸಂರಕ್ಷಿತ ಬೇಸಾಯ ಪದ್ಧತಿಯಡಿ ಬೆಳೆಸಲು ಸಹಾಯಧನ ನೀಡಲಾಗುತ್ತಿದ್ದು, ವರ್ಷವಿಡೀ ಎಲ್ಲ ಋತುಮಾನಗಳಲ್ಲಿ ಬೆಳೆಯಬಹುದಾಗಿದ್ದು, ಉತ್ಪಾದನೆಯನ್ನು 3–4 ಪಟ್ಟು ಹೆಚ್ಚಿಸುವ ಮೂಲಕ ರೈತರ ಆದಾಯ ಹೆಚ್ಚಿಸುವುದು. ವಾರ್ಷಿಕ ಗುರಿ ಆರ್ಥಿಕ ರೂ. 182.133 ಲಕ್ಷ, ಭೌತಿಕ 34.06 ಸಂ. ನಿಗದಿಯಾಗಿದ್ದು, ಇದರಲ್ಲಿ ರೂ. 182.133 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಬಿಡುಗಡೆಯಾದ ಅನುದಾಕ್ಕೆ ಆರ್ಥಿಕ ರೂ.182.09712 ಲಕ್ಷ ಹಾಗೂ ಭೌತಿಕ 34.06 ಹೆ. ಗುರಿ ಸಾಧಿಸಲಾಗಿದೆ.

- **ಕೃಷಿ ಯಾಂತ್ರೀಕರಣ ಉಪಅಭಿಯಾನ ಯೋಜನೆಯಡಿ ಯಾಂತ್ರೀಕರಣ ಕಾರ್ಯಕ್ರಮ :** ಈ ಯೋಜನೆಯಡಿ ರೈತರಿಗೆ ತೋಟಗಾರಿಕೆ ಬೆಳೆಗಳ ಬೇಸಾಯ ಕ್ರಮದಲ್ಲಿ ಆಧುನಿಕ ಯಂತ್ರಗಳನ್ನು ಖರೀದಿಸಲು ಸಹಾಯಧನ ಒದಗಿಸುವುದು. ವಾರ್ಷಿಕ ಆರ್ಥಿಕ ಗುರಿ ರೂ. 113.73 ಲಕ್ಷ, ಭೌತಿಕ ಗುರಿ 220 ಸಂ ನಿಗದಿಯಾಗಿದ್ದು, ಇದರಲ್ಲಿ ರೂ. 113.73 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಬಿಡುಗಡೆಯಾದ ಅನುದಾನಕ್ಕೆ ಆರ್ಥಿಕ ರೂ. 113.657 ಲಕ್ಷ ಹಾಗೂ ಭೌತಿಕ 219 ಸಂ. ಗುರಿ ಸಾಧಿಸಲಾಗಿದೆ.

ಪಶು ಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

ಬೆಳಗಾವಿ ಜಿಲ್ಲೆಯ ಹತ್ತು ತಾಲೂಕುಗಳಲ್ಲಿ 28 ಲಕ್ಷಕ್ಕೂ ಮೇಲ್ಪಟ್ಟು ಜಾನುವಾರುಗಳು ಆರೋಗ್ಯ ರಕ್ಷಣೆಯು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಕ್ರಮಬದ್ಧ ಕರ್ತವ್ಯವಾಗಿದೆ. ಬೆಳಗಾವಿ ಜಿಲ್ಲೆಯ ಸರಾಸರಿ ಮಳೆಯ ಪ್ರಮಾಣ 808 ಮಿ.ಮಿ. ಇದ್ದು ಈ ಜಿಲ್ಲೆಯ ಪ್ರಾಕೃತಿಕ ಹವಾಮಾನ ಜಾನುವಾರು ಮತ್ತು ಕುರಿಗಳ ಸಂಗೋಪನೆಗೆ ಅನುಕೂಲಕರವಾಗಿದೆ.

ಜಿಲ್ಲೆಯ ಪಶು ಸಂಪತ್ತಿನ ವಿವರ (2020ರ ಗಣತಿಯಲ್ಲಿದ್ದಂತೆ ತಾತ್ಕಾಲಿಕವಾಗಿ) ಲಕ್ಷಗಳಲ್ಲಿ

1.	ದನಗಳು	549540
2.	ಎಮ್ಮೆಗಳು	844171
3.	ಕುರಿ/ಮೇಕೆಗಳು	1459420
4.	ಕುದುರೆಗಳು	4979
5.	ಹಂದಿಗಳು	21784
6.	ನಾಯಿಗಳು	74234
7.	ಕೋಳಿಗಳು	680331

ಆಡಳಿತ ವ್ಯವಸ್ಥೆ :

ಬೆಳಗಾವಿ ಜಿಲ್ಲೆಯ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯು ಜಿಲ್ಲಾ ಪಂಚಾಯತ್ ಆಡಳಿತ ವ್ಯಾಪ್ತಿಗೆ ಬರುತ್ತಿದ್ದು, ಉಪ ನಿರ್ದೇಶಕರು (ಆಡಳಿತ) ಇಲಾಖೆಯ ಜಿಲ್ಲಾ ಮುಖ್ಯಸ್ಥರಾಗಿರುತ್ತಾರೆ. ಇವರು ಜಿಲ್ಲೆಯ ಆಡಳಿತ ಮತ್ತು ತಾಂತ್ರಿಕ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಾರೆ. ಜಿಲ್ಲೆಯ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಇವರಿಗೆ 11 ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ) ಮತ್ತು 193 ಪಶು ವೈದ್ಯಾಧಿಕಾರಿಗಳು ಹಾಗೂ 386 ಅರೆ ತಾಂತ್ರಿಕ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ನೆರವಾಗುತ್ತಾರೆ.

ತಾಲೂಕು ಮಟ್ಟದ ಆಡಳಿತ ವ್ಯವಸ್ಥೆ :

ಪ್ರತಿ ತಾಲೂಕಿನ ಪಶು ಆಸ್ಪತ್ರೆಗಳಿದ್ದು, ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ) ತಾಲೂಕಿನ ಆಡಳಿತ ಮತ್ತು ತಾಂತ್ರಿಕ ಕೆಲಸಗಳನ್ನು ನಿರ್ವಹಿಸುತ್ತಾರೆ. ಇವರಿಗೆ ಪಶುವೈದ್ಯಾಧಿಕಾರಿಗಳು ಹಾಗೂ ಅರೆ ತಾಂತ್ರಿಕ ಸಿಬ್ಬಂದಿ ಮತ್ತು ಡಿ ದರ್ಜೆ ನೌಕರರು ಸಹಾಯಕರಾಗಿರುತ್ತಾರೆ. ಸಹಾಯಕ ನಿರ್ದೇಶಕರು ತಾಲೂಕಿನಲ್ಲಿರುವ ಪಶುವೈದ್ಯಕೀಯ ಸಂಸ್ಥೆಗಳ ತಾಂತ್ರಿಕ ಮೇಲ್ವಿಚಾರಣೆಯನ್ನು ಮಾಡುತ್ತಾರೆ ಮತ್ತು ತಾಲೂಕು ಪಂಚಾಯತ್ ವ್ಯಾಪ್ತಿಗೊಳಪಟ್ಟ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಾರೆ.

ಹೋಬಳಿ ಮಟ್ಟದ ಆಡಳಿತ ವ್ಯವಸ್ಥೆ :

ಹೋಬಳಿ ಮಟ್ಟದಲ್ಲಿ ಪಶು ಚಿಕಿತ್ಸಾಲಯಗಳಿದ್ದು ಈ ಪಶು ಚಿಕಿತ್ಸಾಲಯಗಳಿಗೆ ಪಶುವೈದ್ಯಾಧಿಕಾರಿಗಳು ಮುಖ್ಯಸ್ಥರಾಗಿದ್ದು ಇವರುಗಳು ತಾಂತ್ರಿಕ ಮತ್ತು ಆಡಳಿತ ಕಾರ್ಯವನ್ನು ನಿರ್ವಹಿಸುತ್ತಾರೆ ಹಾಗೂ ತಮ್ಮ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ಪಶುವೈದ್ಯಕೀಯ ಸಂಸ್ಥೆಗಳ ತಾಂತ್ರಿಕ ಮೇಲ್ವಿಚಾರಣೆಯನ್ನು ಮಾಡುತ್ತಾರೆ.

ಗ್ರಾಮೀಣ ಮಟ್ಟದ ಆಡಳಿತ ವ್ಯವಸ್ಥೆ :

ಗ್ರಾಮೀಣ ಮಟ್ಟದಲ್ಲಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಲ್ಲಿ ಪಶುವೈದ್ಯಕೀಯ ಪರೀಕ್ಷಕರು ಪ್ರಥಮೋಪಚಾರ ನೀಡುತ್ತಾರೆ. ಇವರು ತಾಂತ್ರಿಕ ಕೆಲಸಗಳನ್ನು ನಿರ್ವಹಿಸುತ್ತಾರೆ.

ಸಂಚಾರಿ ಪಶು ಚಿಕಿತ್ಸಾಲಯಗಳು :

ಬೆಳಗಾವಿ ಜಿಲ್ಲೆಯ ಒಟ್ಟು 10 ಸಂಚಾರಿ ಪಶು ಚಿಕಿತ್ಸಾಲಯಗಳಿದ್ದು, ಸಂಚಾರಿ ಪಶು ಚಿಕಿತ್ಸಾಲಯಗಳ ಕೆಲಸವನ್ನು ಪಶು ವೈದ್ಯಾಧಿಕಾರಿಗಳು ನೋಡುಕೊಳ್ಳುತ್ತಾರೆ. ಇವರಿಗೆ ಒಬ್ಬ ಡಿ–ದರ್ಜೆ ನೌಕರರು ಸಹಾಯಕರಾಗಿರುತ್ತಾರೆ. ನಿಗಧಿಪಡಿಸಿದ 5 ಮಾರ್ಗಗಳಲ್ಲಿ ಬರುವ ಜಾನುವಾರುಗಳ ಆರೋಗ್ಯ, ಕೃತಕ ಗರ್ಭಧಾರಣೆ ಹಾಗೂ ಗರ್ಭತಪಾಸಣೆ ಮಾಡುವ ಕಾರ್ಯವನ್ನು ನಿರ್ವಹಿಸುತ್ತಾರೆ. ಸಂಚಾರಿ ಪಶು ಚಿಕಿತ್ಸಾಲಯಗಳ ಸಿಬ್ಬಂದಿಗಳು ಒಂದು ಮಾರ್ಗದಲ್ಲಿ 5 ಹಳ್ಳಿಗಳಿಗೆ ಭೆಟ್ಟಿಕೊಟ್ಟು ಒಂದು ವಾರದಲ್ಲಿ ಒಟ್ಟು 20 ಹಳ್ಳಿಗಳ ಜಾನುವಾರುಗಳ ಆರೋಗ್ಯ ತಪಾಸಣೆ / ಚಿಕಿತ್ಸೆ ಮಾಡುತ್ತಾರೆ.

ಇಲಾಖೆಯ ಕಾರ್ಯ ಚಟುವಟಿಕೆಗಳು : ಪಶು ಸಂಗೋಪನಾ ಇಲಾಖೆಯ ಕಾರ್ಯಚಟುವಟಿಕೆಗಳನ್ನು ವಿಶಾಲ ತಳಹದಿಯ ಮೇಲೆ 08 ಭಾಗಗಳನ್ನಾಗಿ ಈ ಕೆಳಗಿನಂತೆ ವಿಂಗಡಿಸಲಾಗಿದೆ.

1) ಜಾನುವಾರು ಆರೋಗ್ಯ ಮತ್ತು ಪಶುವೈದ್ಯಕೀಯ ಸೇವೆಗಳು
2) ಜಾನುವಾರು ಅಭಿವೃದ್ಧಿ
3) ಕುರಿ ಮತ್ತು ಉಣ್ಣೆ ಅಭಿವೃದ್ಧಿ
4) ಕುಕ್ಕುಟ ಅಭಿವೃದ್ಧಿ
5) ಮೇವು ಅಭಿವೃದ್ಧಿ
6) ಸಾಮಾಜಿಕ ಆರ್ಥಿಕ ಕಾರ್ಯಕ್ರಮಗಳು
7) ಜಾನುವಾರು ಉತ್ಪನ್ನಗಳ ಸಮೀಕ್ಷೆ
8) ಜಾನುವಾರು ಗಣತಿ

ಬೆಳಗಾವಿ ಜಿಲ್ಲೆಯಲ್ಲಿನ ಪಶುವೈದ್ಯಕೀಯ ಸಂಸ್ಥೆಗಳ ವಿವರ

ಕ್ರ. ಸಂ.	ತಾಲೂಕು	ಪಾಲಿಕ್ಲಿನಿಕ್	ಪಶು ಆಸ್ಪತ್ರೆ	ಪಶು ಚಿಕಿತ್ಸಾಲಯ	ಪ್ರಾಥಮಿಕ ಪಶು ಚಿಕಿತ್ಸಾಲಯ	ಸಂಚಾರಿ ಪಶು ಚಿಕಿತ್ಸಾಲಯ	ಒಟ್ಟು
1	ಅಥಣಿ	0	04	18	9	01	32
2	ಬೈಲಹೊಂಗಲ	0	03	16	15	01	35
3	ಬೆಳಗಾವಿ	1	04	14	03	01	22
4	ಚಿಕ್ಕೋಡಿ	0	06	22	06	01	35
5	ಗೋಕಾಕ	0	04	23	06	01	34
6	ಹುಕ್ಕೇರಿ	0	03	18	07	01	29
7	ಖಾನಾಪೂರ	0	03	07	04	01	15
8	ರಾಯಬಾಗ	0	03	10	03	01	17
9	ರಾಮದುರ್ಗ	0	04	12	02	01	19
10	ಸವದತ್ತಿ	0	04	15	13	01	33
	ಒಟ್ಟು	**01**	**37**	**155**	**68**	**10**	**271**

ಜಿಲ್ಲೆಯಲ್ಲಿ ಎಲ್ಲಾ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಜಾನುವಾರುಗಳ ಆರೋಗ್ಯ ತಪಾಸಣೆಯನ್ನು ಹಾಗೂ ಪಶುಗಳ ಚಿಕಿತ್ಸೆ, ಜಾನುವಾರುಗಳಲ್ಲಿ ಬರುವ ಅಂಟು ರೋಗಗಳಾದ ಚಪ್ಪೆ ರೋಗ, ಗಂಟಲು ಬೇನೆ ಮತ್ತು ಕಾಲು ಬಾಯಿ ಜ್ವರ ವಿರುದ್ಧ ನಿಯಮಿತವಾಗಿ ಲಸಿಕಾ ಚುಚ್ಚುಮದ್ದು ಹಾಕಲಾಗಿದೆ.

ಚಿಕಿತ್ಸೆ ನೀಡಿದ ವಿವರ 2019–20

ಕ್ರ.ಸಂ.	ವಿವರ	2019–20
1	ಜಾನುವಾರುಗಳಿಗೆ ಚಿಕಿತ್ಸೆ ಮಾಡಿದ್ದು	818255
2	ಜಾನುವಾರುಗಳಿಗೆ ಶಸ್ತ್ರ ಚಿಕಿತ್ಸೆ ಮಾಡಿದ್ದು	23969
3	ಕಸಿ ಮಾಡಿದ್ದು	36885

ಕ್ರ.ಸಂ.	ವಿವರ	2019–20
1	ಗಂಟಲು ಬೇನೆ ರೋಗ (HS)	170320
2	ಕಾಲು ಮತ್ತು ಬಾಯಿ ರೋಗ (FMD)	1300310
3	ಕೊಕ್ಕರೆ ರೋಗ (RKT)	479006
4	ಕರಳು ಬೇನೆ (ET)	2743971
5	ಪಿ.ಪಿ.ಆರ್. (PPR)	851774

ಜಾನುವಾರು ಅಭಿವೃದ್ಧಿ :

ಕೃತಕ ಗರ್ಭಧಾರಣೆಯು ಇಲಾಖೆಯ ಅತೀ ಮುಖ್ಯವಾದ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಉತ್ತಮ ತಳಿಗೆ ಹೆಸರಾದ ಜರ್ಸಿ, ಹೆಚ್.ಎಫ್ ಮತ್ತು ಇತರೆ ತಳಿಗಳ ಮಿಶ್ರ ತಳೀಕರಣದಿಂದ ಇಲ್ಲಿಯ ತಳಗಳ ಮೇಲ್ದರ್ಜೆಗೇರಿಸಲಾಗಿದೆ. ಸುಧಾರಿತ ತಳಿ ಜಾನುವಾರುಗಳ ವೀರ್ಯವನ್ನು ಕೃತಕವಾಗಿ ದೇಶಿ ಹಸು ಹಾಗೂ ಎಮ್ಮೆಗಳಿಗೆ ಉಪಯೋಗಿಸಿ ಜಾನುವಾರುಗಳ ತಳಿ ಸುಧಾರಿಸಲಾಗುತ್ತದೆ. ಇದರಿಂದ ಹೆಚ್ಚಿನ ಹಾಲು ಉತ್ಪಾದನೆ ಕೊಡುವಂತಹ ಮತ್ತು ಸದೃಢವಾದ ತಳಿ ಉತ್ಪಾದನೆಯಾಗುವುದು. ಬೆಳಗಾವಿ ಜಿಲ್ಲೆಯಲ್ಲಿ ಘನೀಕೃತ ವೀರ್ಯ ಉಪಯೋಗಿಸಿ ಕೃತಕ ಗರ್ಭಧಾರಣೆ ಮಾಡಲಾಗುತ್ತದೆ.

ಕ್ರ.ಸಂ.	ವಿವರ	ವಾರ್ಷಿಕ ಗುರಿ	ಸಾಧನೆ	ಶೇಕಡಾ
1	ಕೃತಕ ಗರ್ಭಧಾರಣೆ ಮಾಡಿದ್ದು	320000	341733	107
2	ಕರುಗಳ ಜನನ	–	71711	–

ಆರ್ಥಿಕ ಸಾಮಾಜಿಕ ಕಾರ್ಯಕ್ರಮಗಳು :

ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆ ಸಹಯೋಗದಿಂದ ಆರ್ಥಿಕ ಸಾಮಾಜಿಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಸಲಾಗುತ್ತದೆ. ವಿಶೇಷ ಘಟಕ (ಯೋಜನೆ/ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಎಮ್ಮೆ/ಆಕಳು ಘಟಕ ನೀಡಲಾಗುತ್ತಿದೆ.

- ಜಿಲ್ಲಾ ವಲಯ ಘಟಕದ ವಿವರ (ಸಹಾಯಧನ ರೂ. 60,000/– ಸಾಲ ರೂ. 60,000/– ಒಟ್ಟು ರೂ. 1,20,000/–)
- ರಾಜ್ಯ ವಲಯ ಘಟಕದ ವಿವರ (ಸಹಾಯಧನ ರೂ. 54,000/– ಸಾಲ ರೂ. 6,000/– ಒಟ್ಟು ರೂ. 60,000/–)

ಕ್ರ. ಸಂ.	ಲೆಕ್ಕ ಶಿರ್ಷಿಕೆ ಹಾಗೂ ಯೋಜನೆಯ ಹೆಸರು	2018–19ನೇ ಸಾಲಿನ ಪ್ರಗತಿ ವಿವರ			
		ವಾರ್ಷಿಕ ಗುರಿ		ಸಾಧನೆ	
		ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ
	ವಿಶೇಷ ಘಟಕ ಯೋಜನೆ				
1.	2403–00–101–0–04 ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013 ಬಳಕೆಯಾಗದೇ ಇರುವ ಮೊತ್ತ	44.69	97	44.69	97
2.	2404–00–191–1–16 ಮಹಿಳೆಯರಿಗಾಗಿ ಹೈನುಗಾರಿಕೆ/ಕುರಿ–ಮೇಕೆ/ಹಂದಿ ಘಟಕ ಕಾರ್ಯಕ್ರಮ	16.20	75	16.20	75
	ಗಿರಿಜನ ಉಪ ಯೋಜನೆ				
3.	2403–00–101–0–04 ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013 ಬಳಕೆಯಾಗದೇ ಇರುವ ಮೊತ್ತ	4.46	6	4.46	6
4.	2404–00–191–1–16 ಮಹಿಳೆಯರಿಗಾಗಿ ಹೈನುಗಾರಿಕೆ/ಕುರಿ–ಮೇಕೆ/ಹಂದಿ ಘಟಕ ಕಾರ್ಯಕ್ರಮ	10.13	45	10.13	45
	ಸಾಮಾನ್ಯ ವರ್ಗ				
6.	ಮಹಿಳಾ ಫಲಾನುಭವಿ ಆಧಾರಿತ ಕಾರ್ಯಕ್ರಮ ಹೈನುಗಾರಿಕೆ/ಕುರಿ–ಮೇಕೆ	40.80	312	40.80	312

ಗೊಡ್ಡು ರಾಸುಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ನ್ಯೂನ್ಯತೆ ಇದರಿಂದ ತಳಿ ಉತ್ಪಾದನೆ ಹಾಗೂ ಹಾಲು ಉತ್ಪಾದನೆ ಕುಂಠಿತವಾಗುತ್ತದ್ದು, ಇದನ್ನು ನಿವಾರಿಸಲು ಯೋಜನೆಯನ್ನು ಹಮ್ಮಿಕೊಂಡಿದ್ದು ಅದು ಬಂಜೆ/ಗೊಡ್ಡು ಜಾನುವಾರುಗಳ ಚಿಕಿತ್ಸಾ ಶಿಬಿರ ಯೋಜನೆ 2019–20 ನೇ ಸಾಲಿನಲ್ಲಿ ಈ ಕಾರ್ಯಕ್ರಮಕ್ಕಾಗಿ ರೂ. 35.00 ಲಕ್ಷ ಅನುದಾನ ನಿಗಧಿಪಡಿಸಿ 160 ಶಿಬಿರಗಳನ್ನು ಏರ್ಪಡಿಸಲು ಗುರಿಯನ್ನು ನಿಗಧಿ ಆಗಿದ್ದು, ನಿಗಧಿಯಾದ ಭೌತಿಕ ಗುರಿಯಂತೆ ಜಿಲ್ಲೆಯಲ್ಲಿ 160 ಶಿಬಿರಗಳನ್ನು ಏರ್ಪಡಿಸಿ ಬಂಜೆ/ಗೊಡ್ಡು ರಾಸುಗಳಿಗೆ ಚಿಕಿತ್ಸೆಯನ್ನು ನೀಡಲಾಗಿದೆ.

ಮೇವು ಅಭಿವೃದ್ಧಿ ಯೋಜನೆ :

2019–20ನೇ ಸಾಲಿನ 20 ಅಂಶಗಳ ಕಾರ್ಯಕ್ರಮದಡಿಯಲ್ಲಿ 5643 ಹೆಕ್ಟೇರ್ ಪ್ರದೇಶದಲ್ಲಿ ಮೇವು ಉತ್ಪಾದಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಈ ದಿಸೆಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಸುಧಾರಿತ ಮೇವಿನ ಬೀಜಗಳನ್ನು ನೀರಾವರಿ ಹೊಂದಿರುವ ರೈತರಿಗೆ ಸರಬರಾಜು ಮಾಡಿ ಮೇವನ್ನು ಬೆಳೆಸಲಾಗುತ್ತದೆ. 2018–19ನೇ ಸಾಲಿನಲ್ಲಿ ಒಟ್ಟು 124967 ಮೇವಿನ ಪೊಟ್ಟಣಗಳನ್ನು ನೀರಾವರಿ ಹೊಂದಿದ ರೈತರಿಗೆ ಸರಬರಾಜು ಮಾಡಿದ್ದು 12.400 ಹೆಕ್ಟೇರ್ ಪ್ರದೇಶದಲ್ಲಿ ಮೇವು ಬೆಳೆಸಿ ಪ್ರಗತಿಯನ್ನು ಸಾಧಿಸಲಾಗಿದೆ.

ಅವಶ್ಯಕತೆಗಳು :

ಬೆಳಗಾವಿ ಜಿಲ್ಲೆಯಲ್ಲಿ 57 ಪಶು ಆಸ್ಪತ್ರೆಗಳಲ್ಲಿ ಸಿಬ್ಬಂದಿ ಕೊರತೆ ಇರುವುದರಿಂದ ಆಡಳಿತಾತ್ಮಕ ಹಾಗೂ ತಾಂತ್ರಿಕ ಕಾರ್ಯವನ್ನು ನಿರ್ವಹಿಸಲು ಸಿಬ್ಬಂದಿಯ ಅವಶ್ಯಕತೆ ಇರುತ್ತದೆ. ಜಿಲ್ಲೆಯಲ್ಲಿ ಖಾಲಿ ಇರುವ 78 ಪಶುವೈದ್ಯಾಧಿಕಾರಿಗಳ ಹುದ್ದೆಯನ್ನು ಭರ್ತಿ ಮಾಡುವುದು ಹಾಗೂ ಅರೆ ತಾಂತ್ರಿಕ ಸಿಬ್ಬಂದಿಯ ಹುದ್ದೆಗಳನ್ನು ಭರ್ತಿ ಮಾಡಲು ಕೋರಿದೆ.

ಜಿಲ್ಲೆಯಲ್ಲಿ ಮಂಜೂರಾದ ತಾಂತ್ರಿಕ ಮತ್ತು ಅರೆ ತಾಂತ್ರಿಕ ಸಿಬ್ಬಂದಿಗಳ ವಿವರ

ಅ.ಸಂ.	ಹುದ್ದೆ	ಮಂಜೂರು	ಭರ್ತಿ	ಖಾಲಿ	ಷರಾ
1.	ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ)	12	10	02	–
2.	ಮುಖ್ಯ ಪಶುವೈದ್ಯಾಧಿಕಾರಿ	51	39	12	–
3.	ಹಿರಿಯ ಪಶುವೈದ್ಯಾಧಿಕಾರಿ/ ಪಶುವೈದ್ಯಾಧಿಕಾರಿ	152	99	53	–
4.	ಅರೆ ತಾಂತ್ರಿಕ ಸಿಬ್ಬಂದಿ	407	357	50	

ಮೀನುಗಾರಿಕೆ ಇಲಾಖೆ

2019–20ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯ ಮೀನುಗಾರಿಕೆ ಇಲಾಖೆಗೆ ಜಿಲ್ಲಾ ಪಂಚಾಯತ ಬೆಳಗಾವಿಯಿಂದ ವಿವಿಧ ಯೋಜನೆಗಳಿಗೆ ರೂ. 95.67 ಲಕ್ಷಗಳ ವಾರ್ಷಿಕ ಗುರಿ ನೀಡಲಾಗಿತ್ತು. ರೂ. 104.67.00 ಲಕ್ಷ ಬಿಡುಗಡೆಯಾಗಿದ್ದು. ರೂ. 98.22 ಖರ್ಚು ಮಾಡಿದೆ. ವಿವಿಧ ಯೋಜನೆಗಳ ಗುರಿ ಮತ್ತು ಸಾಧನೆಗಳ ವಿವರಗಳು ಈ ಕೆಳಗಿನಂತಿದೆ.

1) ಜಿಲ್ಲಾ ಮತ್ತು ಇತರೆ ಸಿಬ್ಬಂದಿ : (2405–00–101–0–26)

ಬೆಳಗಾವಿ ಜಿಲ್ಲೆಯಲ್ಲಿರುವ ಒಂದು ಜಿಲ್ಲಾ ಮಟ್ಟದ ಮತ್ತು 6 ತಾಲೂಕಾ ಮಟ್ಟದ ಕಚೇರಿಗಳಲ್ಲಿ ಒಟ್ಟು 28 ಹುದ್ದೆಗಳಿದ್ದು ಈ ಪೈಕಿ 15 ಹುದ್ದೆಗಳು ಭರ್ತಿಯಾಗಿರುತ್ತವೆ. ಸದರಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ /ಸಿಬ್ಬಂದಿಗಳಿಗೆ ವೇತನ ಮತ್ತು ಭತ್ಯೆಗಳು ಮತ್ತು ಕಛೇರಿ ಸಾದಿಲ್ವಾರು ವೆಚ್ಚಗಳಿಗೆ ವರದಿ ಸಾಲಿನಲ್ಲಿ ರೂ. 70.67 ಲಕ್ಷ ಅನುದಾನ ನಿಗದಿಪಡಿಸಲಾಗಿತ್ತು. ವೇತನ ಮತ್ತು ಭತ್ಯೆಗಳಿಗೆ ಹೆಚ್ಚುವರಿಯಾಗಿ ರೂ. 9.00 ಲಕ್ಷ ಅನುದಾನ ಸ್ವೀಕರಿಸಿದ್ದು, ಒಟ್ಟು ಬಿಡುಗಡೆಯಾದ ರೂ. 79.67 ರಲ್ಲಿ 73.27 ಲಕ್ಷ ಖರ್ಚು ಭರಿಸಿ ಶೇ. 92% ಪ್ರಗತಿ ಸಾಧಿಸಲಾಗಿದೆ.

2) ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ : (2405–00–101–0–27)

ಈ ಯೋಜನೆಯಡಿಯಲ್ಲಿ 2019–20 ನೇ ಸಾಲಿಗೆ ಒಟ್ಟು ರೂ. 2.50 ಲಕ್ಷಗಳ ಆರ್ಥಿಕ ಗುರಿ ಹೊಂದಲಾಗಿದ್ದು, ಬೆಳಗಾವಿ ತಾಲೂಕಿನ ರಾಕಸಕೊಪ್ಪ ಮೀನುಮರಿ ಪಾಲನಾ ಕೇಂದ್ರದ 5 ಕೊಳಗ ದುರಸ್ತಿ ಕಾಮಗಾರಿಗೆ ರೂ. 2.20 ಲಕ್ಷ ಅನುದಾನ ಹಾಗೂ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2) ಬೈಲಹೊಂಗಲ ಕಚೇರಿಯ ಕಂಪೌಂಡ್‌ಗೆ ಗೇಟ್ ಅಳವಡಿಸಲು ರೂ. 0.30 ಹೀಗೆ ಒಟ್ಟು 2.50 ಲಕ್ಷ ಅನುದಾನ ನಿಗದಿಪಡಿಸಲಾಗಿರುತ್ತದೆ. ಈ ಯೋಜನೆಯಡಿಯಲ್ಲಿ ರೂ. 2.47 ಲಕ್ಷ ವೆಚ್ಚ ಮಾಡಿ ಶೇ. 99% ರಷ್ಟು ಪ್ರಗತಿ ಸಾಧಿಸಲಾಗಿದೆ.

3) ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ : (2405–00–101–0–28)

2019–20 ನೇ ಸಾಲಿನಲ್ಲಿ ಜಿಲ್ಲೆಯಲ್ಲಿ 139 ದೊಡ್ಡ ಕೆರೆಗಳಲ್ಲಿ 66.42 ಲಕ್ಷ ಮೀನುಮರಿ ಬಿತ್ತನೆ ಮಾಡಲಾಗಿದೆ ಹಾಗೂ 36 ಸಣ್ಣ ಕೆರೆಗಳಲ್ಲಿ 6.58 ಲಕ್ಷ ಮೀನುಮರಿ ಬಿತ್ತನೆ ಮಾಡಲಾಗಿದೆ. ಖಾಸಗಿ ಕೊಳಗಳಲ್ಲಿ 13.12 ಲಕ್ಷ ಮೀನುಮರಿ ಬಿತ್ತನೆ ಮಾಡಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಈ ಯೋಜನೆಗೆ ಒಟ್ಟು ರೂ. 10.50 ಲಕ್ಷ ಅನುದಾನ ಕಲ್ಪಿಸಲಾಗಿತ್ತು. ವಿಶೇಷ ಘಟಕ ಯೋಜನೆಯಡಿ ಬೆಳಗಾವಿ ಜಿಲ್ಲೆಯ ಒಟ್ಟು 30 ಪರಿಶಿಷ್ಟ ಜಾತಿಯ ಫಲಾನುಭವಿಗಳಿಗೆ ಪ್ರತಿ ಫಲಾನುಭವಿಗೆ ರೂ. 10000/– ದಂತೆ ಒಟ್ಟು ರೂ. 3.00 ಲಕ್ಷ ಮೊತ್ತದ ಮೀನುಗಾರಿಕೆ ಸಲಕರಣೆ ಕಿಟ್ (ಬಲೆ)ಗಳನ್ನು ಖರೀದಿಸಿ ವಿತರಿಸಲಾಗಿದೆ. ಯೋಜನೆಗಳ ಅನುಷ್ಠಾನಕ್ಕಾಗಿ ಮೇಲ್ವಿಚಾರಣೆಗಾಗಿ ಹೊರಗುತ್ತಿಗೆ ವಾಹನ, ಹೊರಗುತ್ತಿಗೆ ಸಿಬ್ಬಂದಿ ಸೇವೆಯ ವೆಚ್ಚ ಹಾಗೂ ರಾಕ್ಕಸಕೊಪ್ಪ ಮೀನುಮರಿ ಪಾಲನಾ ಕೇಂದ್ರದಲ್ಲಿ ಮೀನುಮರಿ ಪಾಲನಾ ವೆಚ್ಚ, ಕೆರೆಗಳ ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಟೆಂಡರ್ ಪ್ರಕಟಣೆ ವೆಚ್ಚ ಹೀಗೆ ಒಟ್ಟು ರೂ. 7.50 ಲಕ್ಷ ವೆಚ್ಚ ಮಾಡಲಾಗಿದೆ.

ಈ ಯೋಜನೆಯಡಿಯಲ್ಲಿ ಒಟ್ಟು ರೂ. 10.50 ಲಕ್ಷ ವೆಚ್ಚ ಮಾಡಿ ಶೇ. 100 ರಷ್ಟು ಪ್ರಗತಿ ಸಾಧಿಸಲಾಗಿದೆ.

4) ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ : (2405–00–101–0–30)

ಈ ಯೋಜನೆಯಡಿಯಲ್ಲಿ 2019–20 ನೇ ಸಾಲಿಗೆ ರೂ. 8.00 ಲಕ್ಷ ಅನುದಾನದಲ್ಲಿ 80 ಫಲಾನುಭವಿಗಳಿಗೆ ಮೀನುಮಾರಾಟ ಮಾಡಲು ಅನುಕೂಲವಾಗುವಂತೆ ಮೋಪೆಡ್ ಮತ್ತು ಕ್ರೇಟ್ ಖರೀದಿಸಲು ಸಹಾಯಧನ ನೀಡುವ ಗುರಿ ಹೊಂದಲಾಗಿದ್ದು, 80 ಜನರಿಗೆ ಮೋಪೆಡ್ ಮತ್ತು ಕ್ರೇಟ್ ಖರೀದಿಸಲು ಪ್ರತಿ ಫಲಾನುಭವಿಗೆ ರೂ. 10000/– ರಂತೆ ಒಟ್ಟು ರೂ. 8.00 ಲಕ್ಷ ಸಹಾಯಧನ ನೀಡಿ ಶೇ. 100 ರಷ್ಟು ಪ್ರಗತಿ ಸಾಧಿಸಲಾಗಿದೆ.

5) ಪ್ರದರ್ಶನ ಮತ್ತು ತರಬೇತಿ : (2405–00–101–0–32)

ಈ ಯೋಜನೆಯಲ್ಲಿ 2019–20 ನೇ ಸಾಲಿಗೆ ಒಟ್ಟು ರೂ. 4.00 ಲಕ್ಷಗಳ ಆರ್ಥಿಕ ಗುರಿ ಹೊಂದಿದ್ದು, ಕಿತ್ತೂರು ಉತ್ಸವ, ಗೊಡಚಿ ಉತ್ಸವ ಹಾಗೂ ತೋಟಗಾರಿಕೆ ಫಲ–ಪುಷ್ಪ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿ ಇಲಾಖೆಯ ವಸ್ತು ಪ್ರದರ್ಶನವನ್ನು ಏರ್ಪಡಿಸಿ ಇಲಾಖೆಯ ಚಟುವಟಿಕೆಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಲಾಗಿದೆ. ಜಿಲ್ಲೆಯ 250 ಮೀನುಕೃಷಿಕರಿಗೆ ಒಂದು ದಿನದ ತರಬೇತಿ ನೀಡಲಾಗಿದೆ ಮತ್ತು ಕರ ಪತ್ರ / ಬೋರ್ಡಗಳನ್ನು ಮುದ್ರಿಸಲಾಗಿದೆ. ಈ ಯೋಜನೆಯಲ್ಲಿ ಭೂತರಾಮನಹಟ್ಟಿ ಮತ್ಸ್ಯಾಲಯದ ಅಕ್ವೇರಿಯಂ ನಿರ್ವಹಣೆ ವೆಚ್ಚ ಕೈಗೊಂಡು ಒಟ್ಟು ರೂ. 3.98 ಲಕ್ಷ ಅನುದಾನ ವೆಚ್ಚ ಮಾಡಿ ಶೇ. 99.5 ರಷ್ಟು ಪ್ರಗತಿ ಸಾಧಿಸಲಾಗಿದೆ.

ಸಾಮಾಜಿಕ ಅರಣ್ಯ ವಿಭಾಗ

1. 2019–20ನೇ ಸಾಲಿನಲ್ಲಿ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ 615.00 ಹೆಕ್ಟೇರ್ ಪ್ರದೇಶದಲ್ಲಿ ಕಂದಾಯಭೂಮಿ, ಶಾಲೆ–ಕಾಲೇಜು ರಸ್ತೆಬದಿ, ಆಸ್ಪತ್ರೆ ಆವರಣ, ಸ್ಮಶಾನ ಮತ್ತು ಇತರೆ ಸರ್ಕಾರಿ ಸ್ಥಳಗಳಲ್ಲಿ ನೆಡುತೋಪು ಬೆಳೆಸಲಾಗಿದೆ ಹಾಗೂ ಒಗ್ಗೂಡಿಸುವಿಕೆಯಲ್ಲಿ 4.60 ಲಕ್ಷ ಹಿಪ್ಪು, ನೇರಳೆ ಸಸಿಗಳನ್ನು ರೇಷ್ಮೆ ಇಲಾಖೆಯ ಕೋರಿಕೆಯಂತೆ ಬೆಳೆಸಿ ರೈತರಿಗೆ ಪೂರೈಸಲಾಗಿದೆ. ಒಟ್ಟು ರೂ. 2792.35 ಲಕ್ಷ ವೆಚ್ಚವಾಗಿದ್ದು 6.67 ಲಕ್ಷ ಮಾನವ ದಿನಗಳನ್ನು ಸೃಜನೆ ಮಾಡಲಾಗಿದೆ.
2. 2019–20ನೇ ಸಾಲಿನಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ಈ ವಿಭಾಗಕ್ಕೆ ರೂ. 390.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ 163.00 ಹೆ/ಕಮಿ. ಪ್ರದೇಶದಲ್ಲಿ ನೆಡುತೋಪು ನಿರ್ಮಿಸಲಾಗಿರುತ್ತದೆ ಹಾಗೂ 285.92 ಹೆಕ್ಟೇರ್ ಪ್ರದೇಶದಲ್ಲಿ 1ನೇ ವರ್ಷ, 2ನೇ ವರ್ಷ, 3ನೇ ಹಾಗೂ 4ನೇ ವರ್ಷದ ನೆಡುತೋಪು ನಿರ್ವಹಣೆ ಮಾಡಲಾಗಿರುತ್ತದೆ. ಒಟ್ಟು ಅನುದಾನ ರೂ. 388.30 ಲಕ್ಷ ವೆಚ್ಚವಾಗಿರುತ್ತದೆ.
3. ಕಟ್ಟಡಗಳ ಯೋಜನೆಯಡಿ 2019–20 ನೇ ಸಾಲಿಗಾಗಿ ರೂ. 105.00 ಲಕ್ಷ ಅನುದಾನ ಬಿಡುಗಡೆ ಆಗಿದ್ದು, ಕಚೇರಿ ಕಟ್ಟಡ ವಸತಿ ಗೃಹಗಳ ನಿರ್ವಹಣೆ ವಲಯ ಅರಣ್ಯ ಅಧಿಕಾರಿಗಳ ವಸತಿ ಗೃಹಗಳ ನಿರ್ಮಾಣ ನರ್ಸರಿ ಕ್ಷೇತ್ರಗಳಲ್ಲಿ ನೀರಿನ ಟ್ಯಾಂಕ ಹಾಗೂ ವಾಚರ್ ಶೆಡ್ ನಿರ್ಮಾಣ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಬೆಳಗಾವಿರವರ ಮುಖಾಂತರ ಕೈಗೊಂಡಿದ್ದು, ಪೂರ್ಣ ಪ್ರಮಾಣದಲ್ಲಿ ವೆಚ್ಚವಾಗಿರುತ್ತದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಯೋಜನೆ ಕಾರ್ಯಕ್ರಮಗಳು

1) 2205–00–104–0–26 ಕ್ರೀಡಾಕೂಟ ಮತ್ತು ರ್‍ಯಾಲಿಗಳ ಸಂಘಟಣೆ ಮತ್ತು ಅವುಗಳಲ್ಲಿ ಭಾಗವಹಿಸುವವರರಿಗೆ ಪ್ರಯಾಣ ಮತ್ತು ದಿನ ಭತ್ಯೆ :

2019–20ನೇ ಸಾಲಿನ ಯೋಜನೆ ಲೆಕ್ಕ ಶಿರ್ಷಿಕೆ 2205–00–104–0–26 ಕ್ರೀಡಾಕೂಟ ಮತ್ತು ರ್‍ಯಾಲಿಗಳ ಸಂಘಟಣೆ ಮತ್ತು ಅವುಗಳಲ್ಲಿ ಭಾಗವಹಿಸುವವರರಿಗೆ ಪ್ರಯಾಣ ಮತ್ತು ದಿನ ಭತ್ಯೆ ಅಡಿಯಲ್ಲಿ ಒದಗಿಸಲಾದ ಒಟ್ಟು ರೂ. 50.13 ಲಕ್ಷಗಳಲ್ಲಿ ನಿಯಮಾನುಸಾರ ಕ್ರೀಡಾಕೂಟ ಮತ್ತು ರ್‍ಯಾಲಿಗಳ ಸಂಘಟನೆಗೆ ಹಾಗೂ ಅವುಗಳಲ್ಲಿ ಬೆಳಗಾವಿ ಜಿಲ್ಲೆಯಿಂದ ಭಾಗವಹಿಸುವ ಕ್ರೀಡಾಪಟುಗಳಿಗೆ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆ ವಿತರಣೆಗಾಗಿ ಒಟ್ಟು ರೂ. 35.27 ಲಕ್ಷಗಳನ್ನು ವಿನಿಯೋಗಿಸಲಾಗಿದ್ದು, ರೂ. 14.86 ಲಕ್ಷಗಳ ಅನುದಾನ ವ್ಯಪಗತವಾಗಿರುತ್ತದೆ.

2) 2205–00–104–0–27 ವೇತನ / ವೇತನೇತರ :

2019–20ನೇ ಸಾಲಿನ ಯೋಜನೆ ಲೆಕ್ಕ ಶಿರ್ಷಿಕೆ 2205–00–104–0–27 ವೇತನ ವೇತನೇತರ ಅಡಿಯಲ್ಲಿ ಒದಗಿಸಲಾದ ಒಟ್ಟು ರೂ. 17.90 ಲಕ್ಷಗಳಲ್ಲಿ ಕಚೇರಿಯ ಸಿಬ್ಬಂದಿಗಳ ವೇತನ ಹಾಗೂ ಕಚೇರಿಯ ನಿರ್ವಹಣಾ ವೆಚ್ಚಕ್ಕಾಗಿ ಒಟ್ಟು ರೂ. 11.79 ಲಕ್ಷಗಳನ್ನು ವಿನಿಯೋಗಿಸಲಾಗಿರುತ್ತದೆ.

3) 2205–00–104–0–28 ಕ್ರೀಡಾಂಗಣ ಮತ್ತು ಇತರೆ ನಿರ್ಮಾಣ / ನಿರ್ವಹಣೆ :

2019–20ನೇ ಸಾಲಿನ ಯೋಜನೆ ಲೆಕ್ಕ ಶಿರ್ಷಿಕೆ 2205–00–104–0–28 ಕ್ರೀಡಾಂಗಣ ಮತ್ತು ಇತರೆ ನಿರ್ಮಾಣ / ನಿರ್ವಹಣೆ ಅಡಿಯಲ್ಲಿ ಒದಗಿಸಲಾದ ಒಟ್ಟು ರೂ. 83.20 ಲಕ್ಷಗಳಲ್ಲಿ ಜಿಲ್ಲಾ ಕ್ರೀಡಾಂಗಣ ಹಾಗೂ ತಾಲ್ಲೂಕು ಕ್ರೀಡಾಂಗಣಗಳ ವಿದ್ಯುತ್ ಬಿಲ್, ನೀರಿನ ಬಿಲ್, ಹೊರಗುತ್ತಿಗೆ ಸಿಬ್ಬಂದಿಗಳ ಗೌರವಧನ, ಅವಶ್ಯಕ ಸಾಮಗ್ರಿಗಳ ಖರೀದಿ ಇನ್ನಿತರೆ ನಿರ್ವಹಣೆಗಾಗಿ ಒಟ್ಟು ರೂ. 45.84 ಲಕ್ಷಗಳ ಅನುದಾನವನ್ನು ವಿನಿಯೋಗಿಸಲಾಗಿದ್ದು, ರೂ. 37.36 ಲಕ್ಷಗಳ ಅನುದಾನ ವ್ಯಪಗತವಾಗಿರುತ್ತದೆ.

4) 2205–00–104–0–29 ಕ್ರೀಡಾ ಶಾಲೆ / ಕ್ರೀಡಾ ನಿಲಯ :

2019–20ನೇ ಸಾಲಿನ ಯೋಜನೆ ಲೆಕ್ಕ ಶಿರ್ಷಿಕೆ 2205–00–104–0–29 ಕ್ರೀಡಾ ಶಾಲೆ / ಕ್ರೀಡಾ ನಿಲಯ ನಿರ್ವಹಣೆ ಅಡಿಯಲ್ಲಿ ಒದಗಿಸಲಾದ ಒಟ್ಟು ರೂ. 44.02 ಲಕ್ಷಗಳಲ್ಲಿ ಕ್ರೀಡಾ ವಸತಿ ನಿಲಯದ ನಿವಹಣೆ, ನಿಲಯದ ನೀರಿನ ಬಿಲ್ಲು, ವಿದ್ಯುತ್ ವೆಚ್ಚ, ಸ್ವಚ್ಚತಾ ಸಾಮಗ್ರಿಗಳ ವೆಚ್ಚ, ಎಲೆಕ್ಟ್ರೀಕಲ್ ಮತ್ತು ಪ್ಲಂಬಿಂಗ್ ದುರಸ್ಥಿ, ಅವಶ್ಯಕ ಸಾಮಗ್ರಿಗಳ ಖರೀದಿ ಇತ್ಯಾದಿಗಳಿಗಾಗಿ ಒಟ್ಟು ರೂ. 24.28 ಲಕ್ಷಗಳ ಅನುದಾನವನ್ನು ವಿನಿಯೋಗಿಸಲಾಗಿದ್ದು, ರೂ. 19.74 ಲಕ್ಷಗಳ ಅನುದಾನವು ವ್ಯಪಗತವಾಗಿರುತ್ತದೆ.

5) 2205–00–104–0–30 ಯೋಜನೆ ಕಷ್ಟ ಪರಿಸ್ಥಿತಿಯಲ್ಲಿರುವ ಕುಸ್ತಿ ಕ್ರೀಡಾಪಟುಗಳಿಗೆ ಆರ್ಥಿಕ ನೆರವು :

ಕಷ್ಟ ಪರಿಸ್ಥಿತಿಯಲ್ಲಿರುವ ಕ್ರೀಡಾ/ಕುಸ್ತಿ ಕ್ರೀಡಾಪಟುಗಳಿಗೆ ಮಾಸಿಕ ಪಿಂಚಣಿಯನ್ನು ಜಿಲ್ಲಾ ಖಜಾನೆಯ ಮೂಲಕ ವಿತರಿಸುವ ಕುರಿತು ಅನುದಾನವನ್ನು ಜಿಲ್ಲಾ ಖಜಾನೆಗೆ ವರ್ಗಾಯಿಸಿ ಅಲ್ಲಿಂದಲೇ ಈ ಯೋಜನೆಯನ್ನು ಅನುಷ್ಠಾನಗೋಳಿಸಲಾಗಿದೆ.

ಸರ್ಕಾರದ ಆದೇಶಗಳ ಅನ್ವಯ ಮಾಜಿ ಕುಸ್ತಿ/ಇತರೆ ಕ್ರೀಡಾಪಟುಗಳು ಈ ಕೆಳಗಿನಂತೆ ಮಾಶಾಸನವನ್ನು ಪಡೆಯುತ್ತಿರುತ್ತಾರೆ.

1) ರಾಜ್ಯ ಮಟ್ಟದ ಕುಸ್ತಿಪಟುಗಳಿಗೆ – ರೂ. 2,500/–

2)	ರಾಷ್ಟ್ರ ಮಟ್ಟದ ಕುಸ್ತಿಪಟುಗಳಿಗೆ	–	ರೂ. 3,000/–
3)	ಅಂತರರಾಷ್ಟ್ರ ಮಟ್ಟದ ಕುಸ್ತಿಪಟುಗಳಿಗೆ	–	ರೂ. 4,000/–
4)	ರಾಜ್ಯ ಮಟ್ಟದ ಇತರೆ ಕುಸ್ತಿಪಟುಗಳಿಗೆ	–	ರೂ. 1,000/–
5)	ರಾಷ್ಟ್ರ ಮಟ್ಟದ ಇತರೆ ಕುಸ್ತಿಪಟುಗಳಿಗೆ	–	ರೂ. 1,500/–
6)	ಅಂತರರಾಷ್ಟ್ರ ಮಟ್ಟದ ಇತರೆ ಕುಸ್ತಿಪಟುಗಳಿಗೆ	–	ರೂ. 2,000/–

2019–20ನೇ ಸಾಲಿನ ಯೋಜನೆ ಲೆಕ್ಕ ಶಿರ್ಷಿಕೆ 2205–00–104–0–30 ಯೋಜನೆ ಕಷ್ಟ ಪರಿಸ್ಥಿತಿಯಲ್ಲಿರುವ ಕುಸ್ತಿ ಕ್ರೀಡಾಪಟುಗಳಿಗೆ ಆರ್ಥಿಕ ನೆರವು ಅಡಿಯಲ್ಲಿ ಒದಗಿಸಲಾದ ಒಟ್ಟು ರೂ. 59.40 ಲಕ್ಷಗಳಲ್ಲಿ ನಿಯಮಾನುಸಾರ 161 ಮಾಜಿ ಕುಸ್ತಿ/ಇತರೆ ಕ್ರೀಡಾಪಟುಗಳಿಗೆ ಮಾಶಾಸನ ವಿತರಿಸಲು ರೂ. 53.79 ಲಕ್ಷಗಳ ಅನುದಾನವನ್ನು ವಿನಿಯೋಗಿಸಲಾಗಿದ್ದು, ರೂ. 5.61 ಲಕ್ಷಗಳ ಅನುದಾನ ವ್ಯಪಗತವಾಗಿರುತ್ತದೆ.

6) 2205–00–104–0–31 ಯೋಜನೆ ಗ್ರಾಮೀಣ ಕ್ರೀಡಾಕೇಂದ್ರಗಳು :

2019–20ನೇ ಸಾಲಿನ ಯೋಜನೆ ಲೆಕ್ಕ ಶಿರ್ಷಿಕೆ 2205–00–104–0–31 ಯೋಜನೆ ಗ್ರಾಮೀಣ ಕ್ರೀಡಾಕೇಂದ್ರಗಳು ಅಡಿಯಲ್ಲಿ ರೂ. 18.00 ಲಕ್ಷಗಳ ಅನುದಾನ ಒದಗಿಸಲಾಗಿದ್ದು, ಜಿಲ್ಲಾ ಪಂಚಾಯತ ಶಿಕ್ಷಣ, ಆರೋಗ್ಯ ಸ್ಥಾಯಿ ಸಮಿತಿಯು ಅನುಮೋದಿಸಲ್ಪಟ್ಟ ಬೆಳಗಾವಿ ಜಿಲ್ಲೆಯ ಹತ್ತೂ ತಾಲೂಕಿನ ಒಟ್ಟು 180 ಗ್ರಾಮೀಣ ಕ್ರೀಡಾ ಕೇಂದ್ರಗಳಿಗೆ ತಲಾ ರೂ. 5,000/–ಗಳ ಕ್ರೀಡಾ ಸಾಮಗ್ರಿಗಳನ್ನು ಖರೀದಿಸಿ ವಿತರಿಸಲು ಒಟ್ಟು ರೂ. 18.00 ಲಕ್ಷಗಳ ಅನುದಾನವನ್ನು ವಿನಿಯೋಗಿಸಲಾಗಿದೆ.

7) 2205–00–104–0–32 ವಿದ್ಯಾರ್ಥಿ ಮತ್ತು ವಿದ್ಯಾರ್ಥಿಯೇತರರಿಗೆ ಪ್ರೋತ್ಸಾಹಧನ :

2019–20ನೇ ಸಾಲಿನ ಯೋಜನೆ ಲೆಕ್ಕ ಶಿರ್ಷಿಕೆ 2205–00–104–0–32 ವಿದ್ಯಾರ್ಥಿ ಮತ್ತು ವಿದ್ಯಾರ್ಥಿಯೇತರರಿಗೆ ಪ್ರೋತ್ಸಾಹಧನ ಯೋಜನೆಯಡಿಯಲ್ಲಿ ಒದಗಿಸಲಾದ ಒಟ್ಟು ರೂ. 2.45 ಲಕ್ಷಗಳಲ್ಲಿ ಸರ್ಕಾರ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದಂತಹ ಸಂಸ್ಥೆಗಳಿಂದ ಸಂಘಟಿಸಿದ ರಾಷ್ಟ್ರೀಯ ಮಟ್ಟದ ಪಂದ್ಯಾವಳಿಗಳಲ್ಲಿ ಭಾಗವಹಿಸಿ ಪದಕ ಪಡೆದಂತಹ ಹಾಗೂ ಅಂತರರಾಷ್ಟ್ರ ಮಟ್ಟದ ಪಂದ್ಯಾವಳಿಯಲ್ಲಿ ಭಾಗವಹಿಸಿದ ಜಿಲ್ಲಾ ಪಂಚಾಯತ ಶಿಕ್ಷಣ, ಆರೋಗ್ಯ ಸ್ಥಾಯಿ ಸಮಿಟತಿಯು ಅನುಮೋದಿಸಲ್ಪಟ್ಟ ಒಟ್ಟು 15 ಜನ ಅಂತರರಾಷ್ಟ್ರ ಮಟ್ಟದ ಕ್ರೀಡಾ ಪಟುಗಳಿಗೆ ತಲಾ ರೂ. 10,000/– ಹಾಗೂ 19 ರಾಷ್ಟ್ರ ಮಟ್ಟದ ಕ್ರೀಡಾಪಟುಗಳಿಗೆ ತಲಾ ರೂ. 5,000/– ಗಳಂತೆ ಪ್ರೋತ್ಸಾಹಧನವನ್ನು ವಿತರಿಸಲು ಒಟ್ಟು ರೂ. 2.45 ಲಕ್ಷಗಳನ್ನು ವಿನಿಯೋಗಿಸಲಾಗಿದೆ.

8) 2205–00–104–0–33 ಆಟದ ಮೈದಾನ ಅಭಿವೃದ್ಧಿ ಹಾಗೂ ಕ್ರೀಡಾ ಸಲಕರಣೆಗಳ ಖರೀದಿ :

2019–20ನೇ ಸಾಲಿನ ಯೋಜನೆ ಲೆಕ್ಕ ಶಿರ್ಷಿಕೆ 2205–00–104–0–33 ಆಟದ ಮೈದಾನ ಅಭಿವೃದ್ಧಿ ಹಾಗೂ ಕ್ರೀಡಾ ಸಲಕರಣೆಗಳ ಖರೀದಿ ಯೋಜನೆಯಡಿಯಲ್ಲಿ ವಾರ್ಷಿಕ ಗುರಿ ಒಟ್ಟು ರೂ. 2.45 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ. ಸದರಿ ಅನುದಾನವನ್ನು ಜಿಲ್ಲಾ ಪಂಚಾಯತ ಶಿಕ್ಷಣ, ಆರೋಗ್ಯ ಸ್ಥಾಯಿ ಸಮಿತಿಯು ಅನುಮೋದಿಸಲ್ಪಟ್ಟ 03 ಶಿಕ್ಷಣ ಸಂಸ್ಥೆಗಳ ಆಟದ ಮೈದಾನ ಅಭಿವೃದ್ಧಿಗಾಗಿ ಒಟ್ಟು ರೂ. 2.45 ಲಕ್ಷಗಳ ಅನುದಾನವನ್ನು ವಿನಿಯೋಗಿಸಲಾಗಿದೆ.

9) 2205–00–104–0–35 ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡೆಗಳಿಗೆ ಪ್ರೋತ್ಸಾಹ :

2019–20ನೇ ಸಾಲಿನ ಯೋಜನೆ ಲೆಕ್ಕ ಶಿರ್ಷಿಕೆ 2205–00–104–0–35 ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡೆಗಳಿಗೆ ಪ್ರೋತ್ಸಾಹ ಯೋಜನೆಯಡಿಯಲ್ಲಿ ವಾರ್ಷಿಕ ಗುರಿ ರೂ. 1.14 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ. ಸದರಿ ಅನುದಾನವನ್ನು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಕ್ರೀಡಾ ಶಾಲೆ/ನಿಲಯ ಕ್ರೀಡಾಪಟುಗಳ ಆಯ್ಕೆ ಪ್ರಕ್ರಿಯೆಯನ್ನು ನಡೆಸಲು ರೂ. 0.32 ಲಕ್ಷಗಳ ಅನುದಾನವನ್ನು ವಿನಿಯೋಗಿಸಲಾಗಿದ್ದು, ರೂ. 0.82 ಲಕ್ಷಗಳ ಅನುದಾನ ವ್ಯಪಗತವಾಗಿರುತ್ತದೆ.

10) 2205–00–104–0–36 ವಿಭಾಗೀಯ ಯುವಜನ ಸೇವೆಗಳ ಮಂಡಳಿಗಳಿಗೆ ಕ್ರೀಡಾ ಸಾಮಗ್ರಿಗಳ ಖರೀದಿ :

2019–20ನೇ ಸಾಲಿನ ಯೋಜನೆ ಲೆಕ್ಕ ಶಿರ್ಷಿಕೆ 2205–00–104–0–36 ವಿಭಾಗೀಯ ಯುವಜನ ಸೇವೆಗಳ ಮಂಡಳಿಗಳಿಗೆ ಕ್ರೀಡಾ ಸಾಮಗ್ರಿಗಳ ಖರೀದಿ ಯೋಜನೆಯಡಿಯಲ್ಲಿ ವಾರ್ಷಿಕ ಗುರಿ ಒಟ್ಟು ರೂ. 1.22 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ. ಸದರಿ ಅನುದಾನವನ್ನು ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ತರಬೇತಿದಾರರಿಗೆ ಪ್ರತಿನಿತ್ಯದ ತರಬೇತಿಗೆ ಅವಶ್ಯಕವಾಗಿರುವ ಕ್ರೀಡಾ ಸಾಮಗ್ರಿಗಳನ್ನು ಖರೀದಿಸಿ ವಿತರಿಸಲು ವಿನಿಯೋಗಿಸಬೇಕಾಗಿರುತ್ತದೆ ಆದರೆ ಕಾರಣಾಂತರಗಳಿಂದ ಅನುದಾನವು ವ್ಯಪಗತವಾಗಿರುತ್ತದೆ.

ರೇಷ್ಮೆ ಇಲಾಖೆ

ಬೆಳಗಾವಿ ಜಿಲ್ಲೆಯಲ್ಲಿ ರೇಷ್ಮೆ ವ್ಯವಸಾಯವನ್ನು ಅಭಿವೃದ್ಧಿ ಪಡಿಸಲು ಕೃಷಿಕರಿಗೆ ಅನುಕೂಲವಾಗುವ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಇಲ್ಲಿಯ ಮಣ್ಣು ಹಾಗೂ ಹವಾಗುಣವು ರೇಷ್ಮೆ ವ್ಯವಸಾಯಕ್ಕೆ ಅನುಕೂಲವಾಗಿದ್ದು ಹಲವಾರು ಸಣ್ಣ, ಅತಿ ಸಣ್ಣ ಹಿಂದುಳಿದ ವರ್ಗದ ರೈತರಿಗೆ ಇದರಿಂದ ಅನುಕೂಲವಾಗಿರುತ್ತದೆ. ಜಿಲ್ಲೆಯಲ್ಲಿನ ಒಟ್ಟು 2625 ಎಕರೆ ಹಿಪ್ಪು ನೇರಳೆ ಕ್ಷೇತ್ರವಿದ್ದು ಪ್ರಸಕ್ತ 2019–20 ನೇ ಸಾಲಿನಲ್ಲಿ 308.14 ಎಕರೆ ಪ್ರದೇಶದಲ್ಲಿ ಹೊಸದಾಗಿ ಹಿಪ್ಪು ನೇರಳೆ ನಾಟಿ ಮಾಡಿಸಲಾಗಿರುತ್ತದೆ ಹಾಗೂ 465.28 ಮೆ.ಟನ್ ರೇಷ್ಮೆ ಗೂಡು ಉತ್ಪಾದನೆ ಮಾಡಲಾಗಿರುತ್ತದೆ.

ಕ್ರಮ ಸಂಖ್ಯೆ	ಹಳ್ಳಿಗಳ ಸಂಖ್ಯೆ	ರೈತರ ಸಂಖ್ಯೆ	ಪ. ಜಾತಿ	ಪ. ಪಂಗಡ	ಅಲ್ಪ ಸಂಖ್ಯಾತರು	ಮಹಿಳೆಯರು	ಇತರರು	ಒಟ್ಟು	ಗೂಡು ಉತ್ಪಾದನೆ (ಟನ್)	
									ಗುರಿ	ಸಾಧನೆ
1	**365**	**2198**	**133**	**67**	**120**	**175**	**1878**	**2198**	**595.17**	**465.28**

ಜಿಲ್ಲಾ ಪಂಚಾಯತ್ ಯೋಜನೆಗಳು : 2019–20 ರಲ್ಲಿ ಕೆಳಕಂಡಂತೆ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.

ಕ್ರಮ ಸಂಖ್ಯೆ	ಯೋಜನೆಯ ವಿವರ	2019–20ನೇ ಸಾಲಿನ ಕಾರ್ಯಕ್ರಮ		ಬಿಡುಗಡೆಯಾದ ಅನುದಾನ	ಸಾಧನೆ	
		ಭೌತಿಕ	ಆರ್ಥಿಕ		ಭೌತಿಕ	ಆರ್ಥಿಕ
1	ರೇಷ್ಮೆ ಬೆಳೆಗಾರರಿಗೆ ಸಹಾಯ ಸೌಲಭ್ಯಗಳು 2851–00–104–0–30 (100)	60.00 ಎಕರೆ	22.70 ಲಕ್ಷ	22.70 ಲಕ್ಷ	60.00 ಎಕರೆ	21.14 ಲಕ್ಷ
					ಕರ್ನಾಟಕ ರಾಜ್ಯೋತ್ಸವ	0.06 ಲಕ್ಷ
					ಅಧ್ಯಯನ ಪ್ರವಾಸ	0.97 ಲಕ್ಷ
					ಒಟ್ಟು	22.17 ಲಕ್ಷ
2	ರೇಷ್ಮೆ ಬೆಳೆಗಾರರಿಗೆ ಸಹಾಯ ಸೌಲಭ್ಯಗಳು 2851–00–104–0–30 (422)	11.00 ಎಕರೆ	5.10 ಲಕ್ಷ	5.10 ಲಕ್ಷ	11.00 ಎಕರೆ	5.10 ಲಕ್ಷ
3	ರೇಷ್ಮೆ ಬೆಳೆಗಾರರಿಗೆ ಸಹಾಯ ಸೌಲಭ್ಯಗಳು 2851–00–104–0–30 (423)	5.00 ಎಕರೆ	2.20 ಲಕ್ಷ	2.20 ಲಕ್ಷ	5.00 ಎಕರೆ	2.20 ಲಕ್ಷ
	ಒಟ್ಟು	**76.00 ಎಕರೆ**	**30.00 ಲಕ್ಷ**	**30.00 ಲಕ್ಷ**	**76.00 ಎಕರೆ**	**29.47 ಲಕ್ಷ**

2019–20 ನೇ ಸಾಲಿನ ತಾಲೂಕಾ ಪಂಚಾಯತ್ ಯೋಜನೆಗಳು

1	ಸಲಹಾ ಸೇವೆಗಳು ಪ್ರಚಾರ ದೃಶ್ಯ ಮತ್ತು ಶ್ರವಣ ಕ್ಷೇತ್ರೋತ್ಸವಗಳು, ವಸ್ತು ಪ್ರದರ್ಶನ 2851–00–104–0–61 (100)	ಕ್ಷೇತ್ರೋತ್ಸವಗಳು–77	3.50 ಲಕ್ಷ	1.39 ಲಕ್ಷ	ಕ್ಷೇತ್ರೋತ್ಸವಗಳು–16	1.39 ಲಕ್ಷ
		ವಸ್ತು ಪ್ರದರ್ಶನ–11			ವಸ್ತು ಪ್ರದರ್ಶನ–03	
		ಕಾರ್ಯಾಗಾರ–9			ಕಾರ್ಯಾಗಾರ–0	
		ಪಾಂಪ್ಲೇಟ್ಸ್–02			ಪಾಂಪ್ಲೇಟ್ಸ್–02	
		ಡೆಮಾಸ್ಟ್ರೇಶನ್ ಬೋರ್ಡ–02			ಡೆಮಾಸ್ಟ್ರೇಶನ್ ಬೋರ್ಡ–02	

ನರೇಗಾ ಯೋಜನೆಗಳು

1	**ನರೇಗಾ ಯೋಜನೆ**	**ಕೆಲಸಗಳು 323**	**ವೆಚ್ಚ 228.34 ಲಕ್ಷ**	**63609 ಮಾನವ ದಿನಗಳು**

ಸಹಕಾರ ಇಲಾಖೆ

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಹಾಗೂ ನಿಯಮಗಳು 1960 ರನ್ವಯ ರಾಜ್ಯದಲ್ಲಿ ಸಹಕಾರ ಇಲಾಖೆ ಕಾರ್ಯನಿರ್ವಹಿಸುತ್ತಿದ್ದ, ಜಿಲ್ಲಾ ಮಟ್ಟದಲ್ಲಿ ಸಹಕಾರ ಸಂಘಗಳ ಉಪನಿಬಂಧಕರು, ಉಪವಿಭಾಗ ಮಟ್ಟದಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ತಾಲೂಕ ಮಟ್ಟದಲ್ಲಿ ಸಹಕಾರ ಅಭಿವೃದ್ಧಿ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ.

ದಿ.: 31/03/2020 ರ ಅಂತ್ಯಕ್ಕೆ ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 5760 ವಿವಿಧ ಸಹಕಾರ ಸಂಘಗಳಿದ್ದು, ಅದರಲ್ಲಿ 5251 ಸಹಕಾರ ಸಂಘಗಳು ಕಾರ್ಯನಿರತವಾಗಿದ್ದು, 244 ನಿಷ್ಕ್ರಿಯ ಹಾಗೂ 265 ಸಹಕಾರ ಸಂಘಗಳು ಸಮಾಪನೆಯಲ್ಲಿರುತ್ತವೆ. ಬೆಳಗಾವಿ ಜಿಲ್ಲೆಯಲ್ಲಿ ಸಹಕಾರ ಚಳುವಳಿ ಉತ್ತಮ ಪ್ರಗತಿಯಲ್ಲಿ ಇರುತ್ತದೆ.

ದಿ.: 31/03/2020 ರ ಅಂತ್ಯಕ್ಕೆ ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ (ನಿ) ಬೆಳಗಾವಿ ಇದರ ವತಿಯಿಂದ ಜಿಲ್ಲೆಯಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಜಿಲ್ಲೆಯಲ್ಲಿನ ಒಟ್ಟು 380223 ರೈತ ಸದಸ್ಯರಿಗೆ ಒಟ್ಟು ರೂ. 1893.70 ಕೋಟಿ ಅಲ್ಪಾವಧಿ, 313 ರೈತ ಸದಸ್ಯರಿಗೆ ರೂ. 16.81 ಕೋಟಿ ಮಾಧ್ಯಮಾವಧಿ ಹಾಗೂ ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ ಮೂಲಕ 773 ರೈತ ಸದಸ್ಯರಿಗೆ ರೂ. 15.63 ಕೋಟಿ ದೀರ್ಘಾವಧಿ ಸಾಲಗಳನ್ನು ವಿತರಿಸಲಾಗಿದೆ. ಅಲ್ಲದೇ ಕರ್ನಾಟಕ ಮಾರ್ಕೆಟಿಂಗ ಕೋ–ಆಪ್ ಫೆಡರೇಶನ್ ಮೂಲಕ 4699.15 ಟನ್ ರಸಾಯನಿಕ ಗೊಬ್ಬರವನ್ನು ವಿತರಣೆ ಮಾಡಲಾಗಿರುತ್ತದೆ.

ಸಹಕಾರ ಇಲಾಖೆಯಿಂದ 2019–20 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ ಹಾಗೂ ತಾಲೂಕ ಪಂಚಾಯತ ಯೋಜನೆ ಅಡಿಯಲ್ಲಿ ಸಹಕಾರ ಸಂಘಗಳಿಗೆ ಈ ಕೆಳಗಿನಂತೆ ಆರ್ಥಿಕ ಸಹಾಯ ನೀಡಲಾಗಿರುತ್ತದೆ.

(ರೂ. ಲಕ್ಷಗಳಲ್ಲಿ)

ಜಿಲ್ಲಾ ಪಂಚಾಯತ ಯೋಜನೆಗಳು :–

ಕ್ರಮ ಸಂಖ್ಯೆ	ಯೋಜನೆಯ ವಿವರ	2019–20ನೇ ಸಾಲಿನ ಗುರಿ		2019–20ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನ	2019–20ನೇ ಸಾಲಿನ ಸಾಧನೆ		ಪ್ರತಿಶತ ಸಾಧನೆ
		ಭೌತಿಕ	ಆರ್ಥಿಕ		ಭೌತಿಕ	ಆರ್ಥಿಕ	
1	2	3	4	5	6	7	8
1	ವಿವಿಧ ವರ್ಗಗಳ ಸಹಕಾರಿ ಸಂಘಗಳಿಗೆ ಶೇರು ಬಂಡವಾಳದ ಸಹಾಯ (ಸಾಮಾನ್ಯ) ನಬಾರ್ಡ/ ಎನ್.ಸಿ.ಡಿ.ಸಿ.	0	0	0	0	0	0
2	ಇತರೇ ಸಹಕಾರಿ ಸಂಘಗಳಿಗೆ ಶೇರು ಬಂಡವಾಳ	0	0	0	0	0	0
3	ವಿವಿಧ ವರ್ಗಗಳ ಸಹಕಾರಿ ಸಂಘಗಳಿಗೆ ಸಾಲದ ಸಹಾಯ ಎನ್.ಸಿ.ಡಿ.ಸಿ. (ಸಾಮಾನ್ಯ)	0	0	0	0	0	0
	ಒಟ್ಟು	**0**	**0**	**0**	**0**	**0**	**0**

ತಾಲೂಕ ಪಂಚಾಯತ ಯೋಜನೆಗಳು :–

ಕ್ರಮ ಸಂಖ್ಯೆ	ಯೋಜನೆಯ ವಿವರ	2019–20ನೇ ಸಾಲಿನ ಗುರಿ		2019–20ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನ	2019–20ನೇ ಸಾಲಿನ ಸಾಧನೆ		ಪ್ರತಿಶತ ಸಾಧನೆ
		ಭೌತಿಕ	ಆರ್ಥಿಕ		ಭೌತಿಕ	ಆರ್ಥಿಕ	
1	2	3	4	5	6	7	8
1	ವಿ.ಫ.ಯೋಜನೆ ಅಡಿಯಲ್ಲಿ ಪರಿಶಿಷ್ಠ ಜಾತಿಯವರಿಗೆ ಆಸ್ತಿ ನಿರ್ಮಾಣಕ್ಕಾಗಿ ಪಿಕಾರ್ಡ ಬ್ಯಾಂಕಿನವರು ನೀಡಿರುವ ಸಾಲದ ಮೇಲೆ ಸಹಾಯಧನ	9	3.00	2.99	9	2.99	100
2	ಮಹಿಳಾ ಸಹಕಾರ ಸಂಘಗಳಲ್ಲಿ ಹೂಡಿಕೆಗಳು	5	1.50	1.50	5	150	100
3	ಪರಿಶಿಷ್ಠ ಜಾತಿಯವರಿಗೆ ವಿಶೇಷ ಘಟಕ ಯೋಜನೆ	0	0	0	0	0	0
	ಒಟ್ಟು	**14**	**4.50**	**4.49**	**14**	**4.49**	**1000**
	ಜಿಲ್ಲಾ ಪಂಚಾಯತ ಹಾಗೂ ತಾಲೂಕ ಪಂಚಾಯತ ಯೋಜನೆಗಳ ಒಟ್ಟು	**14**	**4.50**	**4.49**	**14**	**4.49**	**1000**

ಸಹಕಾರ ಇಲಾಖೆಯಿಂದ 2019–20ನೇ ಸಾಲಿನಲ್ಲಿ ರಾಜ್ಯ ಯೋಜನೆ ಅಡಿಯಲ್ಲಿ ಸಹಕಾರ ಸಂಘಗಳಿಗೆ ಈ ಕೆಳಗಿನಂತೆ ಆರ್ಥಿಕ ಸಹಾಯ ನೀಡಲಾಗಿರುತ್ತದೆ.

ಕ್ರಮ ಸಂಖ್ಯೆ	ಯೋಜನೆಯ ವಿವರ	2019–20ನೇ ಸಾಲಿನ ಗುರಿ		2019–20ನೇ ಸಾಲಿನ ಸಲ್ಲಿಸಿದ ಪ್ರಸ್ತಾವೆ		ಸರ್ಕಾರದಿಂದ ಮಂಜೂರಿ		ಮಾರ್ಚ 2020ರ ಅಂತ್ಯಕ್ಕೆ ವೆಚ್ಚ		ಶೇಕಡಾ ವಾರು
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	
1	2	3	4	5	6	7	8	9	10	11
1	ಪರಿಶಿಷ್ಟ ಜಾತಿಯವರನ್ನು ಎಲ್ಲ ವಿಧದ ಸಹಕಾರ ಸಂಘಗಳಲ್ಲಿ ನೊಂದಾಯಿಸಲು ಸಹಾಯಧನ	200	1.00	455	2.28	260	1.30	260	1.30	**100%**
2	ಪರಿಶಿಷ್ಟ ವರ್ಗದವರನ್ನು ಎಲ್ಲ ವಿಧದ ಸಹಕಾರ ಸಂಘಗಳಲ್ಲಿ ನೊಂದಾಯಿಸಲು ಸಹಾಯಧನ	36	0.18	250	1.25	36	0.18	36	0.18	**100%**
3	ಹಿಂದುಳಿದ ವರ್ಗದವರನ್ನು ಹಾಗೂ ಅಲ್ಪಸಂಖ್ಯಾತರನ್ನು ಎಲ್ಲ ವಿಧದ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೊಂದಾಯಿಸಲು ಸಹಾಯಧನ	300	1.50	1731	8.655	672	3.36	672	3.36	**100%**
4	ಪ.ಜಾ/ಪ.ಪಂ/ಹಿಂದುಳಿದ ವರ್ಗ/ ಅಲ್ಪಸಂಖ್ಯಾತರ ವರ್ಗದ ಸ.ಸಂ. ಗಳಿಗೆ ಹಣಕಾಸು ಸಹಾಯಧನ	0	0	5	5.00	5	5.00	5	5.00	**100%**
5	ಮಹಿಳೆಯರನ್ನು ಸದಸ್ಯರನ್ನಾಗಿ ನೊಂದಣಿ ಮಾಡುವ ಸಹಾಯಧನ	400	2.00	2330	11.65	600	3.00	400	2.00	**67%**
6	ವಿಕಲಚೇತನರನ್ನು ಸದಸ್ಯರನ್ನಾಗಿ ನೊಂದಣಿ ಮಾಡುವ ಸಹಾಯಧನ	36	0.18	146	0.73	36	0.18	36	0.18	**100%**
7	ಬಡತನ ರೇಖೆಗಿಂತ ಕೆಳಗಿನವರನ್ನು ಸದಸ್ಯರನ್ನಾಗಿ ನೊಂದಾಯಿಸಲು ಸಹಾಯಧನ	262	1.31	1354	6.76	200	1.00	200	1.00	**100%**
	ಒಟ್ಟು	**1234**	**6.17**	**6271**	**36.32**	**1809**	**14.02**	**1609**	**13.02**	**93%**

ಜಿಲ್ಲೆಯಲ್ಲಿ ವಿವಿಧ ರೀತಿಯ ಸಹಕಾರ ಸಂಘಗಳು 598 ಉಗ್ರಾಣಗಳನ್ನು ಹೊಂದಿರುತ್ತವೆ. ಇವುಗಳು ಉಗ್ರಾಣಗಳನ್ನು ಹೊಂದಿರುತ್ತವೆ. ಇವುಗಳು ಗ್ರಾಮಾಂತರ ಪ್ರದೇಶಗಳಲ್ಲಿ ಹಾಗೂ ಪಡಿತರೇತರ ಗ್ರಾಹಕರ ಪ್ರತಿನಿತ್ಯ ವಸ್ತುಗಳ ವಿತರಣೆಗಾಗಿ ಉಪಯೋಗಿಸಲಾರುತ್ತದೆ ಹಾಗೂ ತನ್ನ ಸದಸ್ಯ ರೈತರು ಬೆಳೆದ ದಾಸ್ತಾನಕ್ಕಾಗಿ ಉಪಯೋಗಿಸಲಾಗಿರುತ್ತದೆ.

ಬೆಳಗಾವಿ ಜಿಲ್ಲೆಯಲ್ಲಿ 14 ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಹೊಂದಿದ್ದು, ಅವುಗಳಿಂದ ರೈತರು ಬೆಳೆದ ಕಬ್ಬು ಸಂಸ್ಕರಣಗೊಳಿಸಿ ಸಕ್ಕರೆಯನ್ನು ತಯಾರಿಸುವ ಕಾರ್ಯವನ್ನು ನಿರ್ವಹಿಸಲಾಗುತ್ತಿದ್ದು, ಬೆಳಗಾವಿ ಜಿಲ್ಲೆಯು ಸಹಿ ಜಿಲ್ಲೆ ಎಂದು ಹೆಸರುವಾಸಿಯಾಗಿದೆ. ಅದು ಅಲ್ಲದೆ ಬೆಳಗಾವಿ ಜಿಲ್ಲೆಯ ಬೇರೆ ಜಿಲ್ಲೆಗಳಿಗಿಂತ ವಿಶಿಷ್ಟ ಮಾದರಿಯ ಸಹಕಾರ ಸಂಸ್ಥೆಗಳನ್ನು ಹೊಂದಿರುತ್ತದೆ. ಉದಾಹರಣೆಗೆ 1) ಶ್ರೀ ಜಗದ್ಗುರು ಗುರುಸಿದ್ದೇಶ್ವರ ಸಹಕಾರಿ ಆಸ್ಪತ್ರೆ ಹಾಗೂ ಸಂಶೋಧನಾ ಸಂಸ್ಥೆ ಘಟಪ್ರಭಾ, ತಾ. ಬೆಳಗಾವಿ. 2) ಹುಕ್ಕೇರಿ ತಾಲೂಕ ಗ್ರಾಮೀಣ ವಿದ್ಯುತ ಸಹಕಾರಿ ಸಂಘ (ನಿ) ಹುಕ್ಕೇರಿ. 3) ರಂಗ ಕಲಾವಿದರ ಸಹಕಾರ ಸಂಘ (ನಿ) ಬೆಳಗಾವಿ ಇತ್ಯಾದಿಗಳು ಇರುತ್ತವೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಬೆಳಗಾವಿ ಜಿಲ್ಲೆಯಲ್ಲಿ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಅಧೀನದಲ್ಲಿ 01 ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, 12 ಮೆಟ್ರಿಕ್ ನಂತರ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳು, 01 ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ, 05 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, 01 ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜು, 14 ಮೌಲಾನಾ ಆಜಾದ್ ಮಾದರಿ ಶಾಲೆಗಳು ಹಾಗೂ 08 ಅನುದಾನಿತ ಖಾಸಗಿ ವಿದ್ಯಾರ್ಥಿನಿಲಯಗಳು ಮತ್ತು 02 ಅನುದಾನಿತ ಖಾಸಗಿ ಅನಾಥಾಲಯಗಳು ಕಾರ್ಯನಿರ್ವಹಿಸುತ್ತಿವೆ.

ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ, ಪಿಎಚ್‌ಡಿ/ ಎಂಫಿಲ್ ವಿದ್ಯಾರ್ಥಿಗಳಿಗೆ ಫೆಲೋಶಿಪ್, ಸಂವಹನ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ, ಬಿಎಡ್. ಬಿಎಡ್ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಖಾಸಗಿ ವಿದ್ಯಾರ್ಥಿನಿಲಯ/ಅನಾಥಾಲಯಗಳಿಗೆ ಸಹಾಯಧನ, ವಕೀಲರಿಗೆ ಶಿಷ್ಯವೇತನ, ಬಿದಾಯಿ ಯೋಜನೆ ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

2018–19ನೇ ಸಾಲಿಗೆ ಬೆಳಗಾವಿ ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ವಲಯದ ಕಾರ್ಯಕ್ರಮಗಳಿಗೆ ಒಟ್ಟು ಅನುದಾನ ರೂ. 462.05 ಲಕ್ಷಗಳು ಬಿಡುಗಡೆಯಾಗಿದ್ದು, ರೂ. 430.69 ಲಕ್ಷಗಳನ್ನು ಖರ್ಚು ಮಾಡಿ ಶೇ. 94 ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ.

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವರಗಳು	2019–20ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ	ಖರ್ಚಾದ ಅನುದಾನ	ಭೌತಿಕ ಪ್ರಗತಿ (ಫಲಾನುಭವಿಗಳು)
1	ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳು	462.05	430.69	1502
	ಒಟ್ಟು	**462.05**	**430.69**	**1502**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಬೆಳಗಾವಿ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 100 ಮೆಟ್ರಿಕ್ ಪೂರ್ವ ವಸತಿ ನಿಲಯಗಳು ಹಾಗೂ 56 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಮತ್ತು 15 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ವಿದ್ಯಾಸಿರಿ, ಶುಲ್ಕವಿನಾಯ್ತಿ, ಶಿಷ್ಯವೇತನ, ಕೌಶಲ್ಯ ತರಬೇತಿ, ಸಿಂಧುತ್ವ ಪ್ರಮಾಣ ಪತ್ರ ವಿತರಣೆ, ನರ್ಸಿಂಗ್ ತರಬೇತಿ ಭತ್ಯೆ, ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಸಹಾಯಧನ, ವಕೀಲರಿಗೆ ಶಿಷ್ಯವೇತನ, ಸೈನಿಕ ತರಬೇತಿ, ಹೊಲಿಗೆ ತರಬೇತಿ, ವಿದೇಶಿ ವ್ಯಾಸಂಗ, ಶಿಷ್ಯವೇತನ, ಪ್ರತಿಭಾ ಪುರಸ್ಕಾರ, ಸಮುದಾಯ ಭವನ ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

2019–20ನೇ ಸಾಲಿನಲ್ಲಿ ಮಾರ್ಚ ಅಂತ್ಯದವರೆಗೆ ಒಟ್ಟು ಬಿಡುಗಡೆಯಾದ ಅನುದಾನದ ರೂ. 8596.15 ಲಕ್ಷಗಳಲ್ಲಿ ರೂ. 8339.99 ಲಕ್ಷಗಳನ್ನು ಖರ್ಚು ಮಾಡಿದ್ದು, ಒಟ್ಟಾರೆ ಶೇಕಡಾ 97% ಪ್ರಗತಿ ಹೊಂದಿದ್ದು ಮತ್ತು 3.38,007 ಫಲಾನುಭವಿಗಳು ಲಾಭ ಪಡೆದಿರುತ್ತಾರೆ.

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವರಗಳು	ವಲಯಗಳು	ಬಿಡುಗಡೆಯಾದ ಅನುದಾನ	ಖರ್ಚಾದ ಅನುದಾನ	ಶೇಕಡಾ	ಭೌತಿಕ ಪ್ರಗತಿ (ಫಲಾನುಭವಿಗಳು)
1	ಹಿಂದುಳಿದ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳು	ಜಿಲ್ಲಾ ವಲಯ	7292.72	7262.43	99.58%	86510
		ತಾಲೂಕಾ ವಲಯ	1303.43	1077.56	82.67%	251497
	ಒಟ್ಟು		**8596.15**	**8339.99**	**97%**	**338007**

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

2019–20ನೇ ಸಾಲಿನಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗೆ ಬೆಳಗಾವಿ ಜಿಲ್ಲೆಯಲ್ಲಿ ಯೋಜನೆತರಯಡಿ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಪರಿಶಿಷ್ಟ ವರ್ಗದವರಿಗಾಗಿ ಒಟ್ಟು ರೂ. 2066.98 ಲಕ್ಷಗಳನ್ನು ನಿಗದಿಪಡಿಸಲಾಗಿದೆ. ಜಿಲ್ಲಾ ಪಂಚಾಯತದಿಂದ ದಿನಾಂಕ : 31–03–2020 ರವರೆಗೆ ರೂ. 2108.32 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಈ ಮೊತ್ತವನ್ನು ವಿವಿಧ ಇಲಾಖೆ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ರೂ. 1933.96 ಲಕ್ಷಗಳನ್ನು ಮಾರ್ಚ–2020 ರ ಅಂತ್ಯದವರೆಗೆ ವೆಚ್ಚ ಮಾಡಲಾಗಿರುತ್ತದೆ. ನಿಗಧಿತ ಭೌತಿಕ ಗುರಿ 56138 ರಲ್ಲಿ 55891 ಭೌತಿಕ ಗುರಿಯನ್ನು ಸಾಧಿಸಲಾಗಿರುತ್ತದೆ. ಈ ಕಾರ್ಯಕ್ರಮಗಳ ಸಂಕ್ಷಿಪ್ತ ವಿವರ ಬಿಡುಗಡೆ ಮತ್ತು ಖರ್ಚಾದ ಅನುದಾನದ ಬಗ್ಗೆ ಈ ಕೆಳಗಿನಂತಿರುತ್ತದೆ.

ಕ್ರಮ ಸಂಖ್ಯೆ	ವಿವರಗಳು	ಬಿಡುಗಡೆಯಾದ ಅನುದಾನ ರೂ.ಲಕ್ಷಗಳಲ್ಲಿ ಯೋಜನೇತರ	ಒಟ್ಟು ಖರ್ಚಾದ ಅನುದಾನ	ಪ್ರಯೋಜನ ಪಡೆದ (ಫಲಾನುಭವಿಗಳು)
1	ವಿ.ನಿ./ವೇತನ ಮತ್ತು ಧನ ಸಹಾಯ	367.11	343.78	516
2	ಕಾರ್ಯನಿರ್ವಾಹನ ಸಿಬ್ಬಂದಿ	155.26	136.97	15
3	ಮೆಟ್ರಿಕ್ ಪೂರ್ವ ವಸತಿ ನಿಲಯಗಳು	296.07	285.37	843
4	ಪ.ವರ್ಗದ ಆಶ್ರಮ ಶಾಲೆ	75.17	72.26	143
5	ಕಟ್ಟಡ ನಿರ್ವಹಣೆಗಾಗಿ	30.00	30.00	15
6	ಮೆಟ್ರಿಕ್ ನಂತರದ ಶಿಷ್ಯವೇತನ	489.32	489.32	9965
7	ಅನುದಾನಿತ ವಸತಿ ನಿಲಯಗಳು	14.30	12.77	130
8	ಮೆಟ್ರಿಕ್ ಪೂರ್ವ ಶಿಷ್ಯವೇತನ	583.90	466.30	43239
9	ಹೆಚ್ಚುವರಿ ಭೋಜನಾ ವೆಚ್ಚ	78.19	78.19	736
	ಒಟ್ಟು	2089.32	1914.96	55602

ಗಿರಿಜನ ಉಪಯೋಜನೆ

1	ತಾಲೂಕ ವಲಯ	19.00	19.00	289
	ಒಟ್ಟು	**19.00**	**19.00**	**289**

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಯೋಜನೇತರ ಕಾರ್ಯಕ್ರಮದಲ್ಲಿ ಬಿಡುಗಡೆಯಾದ ಅನುದಾನದಲ್ಲಿ ಶೇ. 92% ರಷ್ಟು ಸಾಧನೆಯನ್ನು ಮಾಡಲಾಗಿದೆ ಹಾಗೂ ಗಿರಿಜನ ಉಪ ಯೋಜನೆಯಲ್ಲಿ ಶೇ. 100% ರಷ್ಟು ಸಾಧನೆಯನ್ನು ಮಾಡಲಾಗಿದೆ

ಸಮಾಜ ಕಲ್ಯಾಣ ಇಲಾಖೆ

ಬೆಳಗಾವಿ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಪ್ರಸ್ತುತ 51 ಮೆಟ್ರಿಕ್ ಪೂರ್ವ ಬಾಲಕರ ಹಾಗೂ 15 ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯಗಳು ಮತ್ತು 18 ಮೆಟ್ರಿಕ್ ನಂತರದ ಬಾಲಕರ ಮತ್ತು 8 ಮೆಟ್ರಿಕ್ ನಂದರದ ಬಾಲಕಿಯರ ವಿದ್ಯಾರ್ಥಿ ನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಪ.ಜಾತಿಯ 28 ಮೊರಾರ್ಜಿ ದೇಸಾಯಿ/ಕಿತ್ತೂರ ರಾಣಿ ಚನ್ನಮ್ಮ / ಅಟಲ್ ಬಿಹಾರಿ ಮಾದರಿ / ಇಂದಿರಾ ವಸತಿ ಶಾಲೆಗಳು ಹಾಗೂ 1 ರಿಂದ 5 ನೇ ತರಗತಿಯವರಿಗಾಗಿ ಒಟ್ಟು 03 ಆಶ್ರಮ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.

ಮೆಟ್ರಿಕ್ ಪೂರ್ವ ಶಿಷ್ಯ ವೇತನ, ಮೆಟ್ರಿಕ್ ನಂತರದ (ಭಾರತ ಸರ್ಕಾರದ) ಶಿಷ್ಯ ವೇತನ ಇಲಾಖಾವತಿಯಿಂದ ನೀಡಲಾಗುತ್ತಿದೆ. ಕಾನೂನು ಪದವಿಧರರಿಗೆ ಸಹಾಯಧನ ಮತ್ತು ಮಿತವೇತನವೆಂದು ರೂ. 10000 ರಂತೆ ಪ್ರತಿ ಮಾಹೆಯಾನ ನೀಡಲಾಗುತ್ತಿದೆ. ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವ ಪಾಲಕರ ಮಕ್ಕಳು ಶಾಲೆಗೆ ಹೋಗುವ ಪ್ರವೃತ್ತಿ ಬೆಳೆಸಲು ವಿದ್ಯಾರ್ಥಿ ನಿಲಯವಾಸಿಗಳಲ್ಲದವರಿಗೆ 1 ರಿಂದ 10 ನೇ ತರಗತಿಯವರಿಗೆ ರೂ. 110–00 ರಂತೆ 10 ತಿಂಗಳಿಗೆ ವಿದ್ಯಾರ್ಥಿ ವೇತನ ಮಂಜೂರ ಮಾಡಲಾಗುತ್ತಿದೆ.

ಮೆಟ್ರಿಕ ನಂತರದ ಕೋರ್ಸುಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ಪ್ರಥಮ ಸಲ ಉತ್ತೀರ್ಣರಾದ ಪ.ಜಾತಿ ವಿದ್ಯಾರ್ಥಿಗಳಿಗೆ (ಪಿ.ಯು.ಸಿ. – 20,000, ಪದವಿ – 25000, ಸ್ನಾತ್ತಕೋತ್ತರ – 30000, ಬಿ.ಇ./ಮೆಡಿಕಲ್ ಮತ್ತು ಇತರೆ – 35000) ಬಹುಮಾನ ಧನ ಮಂಜೂರು ಮಾಡಲಾಗುತ್ತಿದೆ.

ಅಸ್ಪೃಶ್ಯತಾ ನಿವಾರಣೆ ಯೋಜನೆಯಡಿ ಪ.ಜಾತಿಯ ಹೆಣ್ಣು ಇತರೆ ವರ್ಗದ ಗಂಡನ್ನು ಅಂತರ್ಜಾತಿ ವಿವಾಹಿತರಾದ ದಂಪತಿಗಳಿಗೆ 3,00,000–00 ಪ್ರೋತ್ಸಾಹ ಧನ ಮತ್ತು ಪ.ಜಾತಿಯ ಗಂಡನ್ನು ಇತರೆ ವರ್ಗದ ಹೆಣ್ಣು ಅಂತರ್ಜಾತಿ ಮದುವೆಯಾಗುವ ದಂಪತಿಗಳಿಗೆ 2,00,000 ಪ್ರೋತ್ಸಾಹ ಧನ ಮಂಜೂರ ಮಾಡಲಾಗುತ್ತಿದೆ. ಸರಳ ವಿವಾಹ ಮಾಡಿಕೊಳ್ಳುವ ಪ.ಜಾತಿ ದಂಪತಿಗಳಿಗೆ 50,000 ಪ್ರೋತ್ಸಾಹ ಧನ ನೀಡಲಾಗುತ್ತಿದೆ. ಪ.ಜಾತಿಯ ವಿಧವೆಯರು ಮರು ವಿವಾಹವಾದಲ್ಲಿ 3,00,000 ಹಾಗೂ ಪ.ಜಾತಿಯ ಒಳ ಪಂಗಡದಲ್ಲಿ ಮದುವೆಯಾಗುವ ದಂಪತಿಗಳಿಗೆ 2,00,000 ಪ್ರೋತ್ಸಾಹ ಧನ ಹೊಸದಾಗಿ ಜಾರಿಗೆ ತರಲಾಗಿದೆ.

ಸವರ್ಣಿಯರಿಂದ ದೌರ್ಜನ್ಯಕ್ಕೆ ಒಳಗಾದ ಪರಿಶಿಷ್ಟ ಜಾತಿ / ವರ್ಗದ ಜನರಿಗೆ ದೌರ್ಜನ್ಯ ಪ್ರತಿಬಂಧಕ ಅಧಿನಿಯಮ 1989 ಮತ್ತು 95 ರಡಿ ದಾಖಲಾದ ಪ್ರಕರಣಗಳಿಗೆ ವಿವಿಧ ಅಪರಾಧ ಪ್ರಕರಣಗಳಲ್ಲಿ ಗರಿಷ್ಟ 7.50 ಲಕ್ಷಗಳ ವರೆಗೆ ಪರಿಹಾರ ಧನ ಮಂಜೂರ ಮಾಡಲಾಗುತ್ತಿದೆ ಮತ್ತು ನೊಂದ ಸಂತ್ರಸ್ತರು ವಿಚಾರಣೆಗೆ ನ್ಯಾಯಾಲಯಕ್ಕೆ ಹಾಜರಾಗಲು ದಿನ ಭತ್ಯೆ ಮತ್ತು ಪ್ರಯಾಣ ಭತ್ಯೆಯನ್ನು ನೀಡಲಾಗುತ್ತಿದೆ.

ಪರಿಶಿಷ್ಟ ಜಾತಿ ಉಪಯೋಜನೆಯಡಿ ಪರಿಶಿಷ್ಟ ಜಾತಿ ಜನರು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಮತ್ತು ಸ್ವಯಂ ಉದ್ಯೋಗ ಹೊಂದಲು ಜಿಲ್ಲಾ ಪಂಚಾಯತ್ ಸಹಕಾರದೊಂದಿಗೆ ಜಿಲ್ಲಾ ವಲಯದಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳಿಂದ ಕೃಷಿ, ತೋಟಗಾರಿಕೆ ಮತ್ತು ಪಶುಸಂಗೋಪನೆ ಇಲಾಖೆಗಳ ಮೂಲಕ ಸಹಾಯಧನವನ್ನು ಒದಗಿಸಿ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗುತ್ತಿದೆ.

2019–20ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಲೆಕ್ಕ ಶೀರ್ಷಿಕೆಗಳಿಗೆ ಮಾರ್ಚ–2020ರ ಅಂತ್ಯದವರೆಗೆ ಒಟ್ಟು 3091.76 ಲಕ್ಷ ಅನುದಾನ ಬಿಡುಗಡೆಯಾಗಿದ್ದು ಅದರಲ್ಲಿ 3084.76 ಲಕ್ಷಗಳ ಅನುದಾನ ಖರ್ಚಾಗಿದ್ದು ಶೇ. 99.77 ರಷ್ಟು ಪ್ರಗತಿಯಾಗಿರುತ್ತದೆ.

ಅದೇ ರೀತಿಯಾಗಿ ತಾಲ್ಲೂಕಾ ಪಂಚಾಯತ್ ಕಾರ್ಯಕ್ರಮಗಳಿಗೆ 3073.53 ಲಕ್ಷಗಳು ಇಲಾಖೆಗೆ ಬಿಡುಗಡೆಯಾಗಿದ್ದು ಅದರಲ್ಲಿ 3049.16 ಲಕ್ಷಗಳ ಅನುದಾನ ಖರ್ಚಾಗಿದ್ದು ಶೇ. 99.21 ರಷ್ಟು ಪ್ರಗತಿಯಾಗಿರುತ್ತದೆ.

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 2019–20ನೇ ಸಾಲಿಗೆ ಅನುಷ್ಠಾನಗೊಳಿಸಲಾದ ವಿವಿಧ ಯೋಜನೆಗಳಾದ 1) ಚೈತನ್ಯ ಬ್ಯಾಂಕ್ ಸಾಲ ಯೋಜನೆ 2) ಸ್ವಯಂ ಉದ್ಯೋಗ ಸಾಲ ಯೋಜನೆ 3) ಸಾಂಪ್ರದಾಯಿಕ ಕುಶಲ ಕರ್ಮಿ ಸಾಲ ಯೋಜನೆ 4) ಅರಿವು ಶೈಕ್ಷಣಿಕ ಸಾಲ ಯೋಜನೆ 5) ಕಿರುಸಾಲ ಯೋಜನೆ ಈ ಯೋಜನೆಗಳಡಿಯಲ್ಲಿ ಜಿಲ್ಲೆಗೆ ಒಟ್ಟು ಭೌತಿಕ 1769 ಆರ್ಥಿಕ 708.12 ಲಕ್ಷ ರೂ.ಗಳ ಗುರಿಯನ್ನು ನಿಗಧಿಪಡಿಸಲಾಗಿತ್ತು. ಪ್ರಸಕ್ತ ಸಾಲಿನಲ್ಲಿ ವಿವಿಧ ಸಾಲ ಯೋಜನೆಗಳಡಿಯಲ್ಲಿ 1546 ಹಿಂದುಳಿದ ವರ್ಗಗಳ ಜನರಿಗೆ ರೂ. 688.82 ಲಕ್ಷ ರೂ.ಗಳ ಸಾಲವನ್ನು ಮಂಜೂರು ಮಾಡಿ ಬಿಡುಗಡೆ ಮಾಡಲಾಗಿದೆ. ಪ್ರತಿಶತ 97 ಸಾಧನೆಯಾಗಿದೆ ಹಾಗೂ 6) ಗಂಗಾ ಕಲ್ಯಾಣ ಯೋಜನೆಯಡಿ ಜಿಲ್ಲೆಗೆ ಭೌತಿಕ 340 ಆರ್ಥಿಕ 680.00 ಲಕ್ಷ ರೂ.ಗಳ ಗುರಿಯನ್ನು ನಿಗಧಿಪಡಿಸಲಾಗಿತ್ತು ಈ ಯೋಜನೆಯಡಿ 340 ಜನ ಹಿಂದುಳಿದ ವರ್ಗಗಳಿದ ಸೇರಿದ ಸಣ್ಣ ಅತಿ ಸಣ್ಣ ಭೂ ಹಿಡುವಳಿದಾರರನ್ನು ಆಯ್ಕೆ ಸಮಿತಿಗಳಲ್ಲಿ ಆಯ್ಕೆ ಮಾಡಿಕೊಂಡು 340 ಕೊಳವೆ ಭಾವಿಗಳನ್ನು ಕೆರೆಯುವ ಕೆಲಸವು ಪ್ರಗತಿಯಲ್ಲಿರುತ್ತದೆ.

ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ

ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದಿಂದ 2019–20ನೇ ಸಾಲಿಗೆ ಅನುಷ್ಠಾನಗೊಳಿಸಲಾದ ವಿವಿಧ ಯೋಜನೆಗಳು 1) ಬ್ಯಾಂಕ್ ಸಾಲ ಯೋಜನೆ, 2) ಸ್ವಯಂ ಉದ್ಯೋಗ ಸಾಲ ಯೋಜನೆ, 3) ಪಂಚವೃತ್ತಿ ಸಾಲ ಯೋಜನೆ, 4) ಅರಿವು ಸಾಲ ಯೋಜನೆ, 5) ಕಿರುಸಾಲ ಯೋಜನೆ, ಈ ಯೋಜನೆಗಳಲ್ಲಿ ಜಿಲ್ಲೆಗೆ ಒಟ್ಟು ಭೌತಿಕ 174 ಆರ್ಥಿಕ 120.15 ಲಕ್ಷ ರೂ.ಗಳ ಗುರಿಯನ್ನು ನಿಗಧಿಪಡಿಸಲಾಗಿತ್ತು ಪ್ರಸಕ್ತ ಸಾಲಿನಲ್ಲಿ ವಿವಿಧ ಸಾಲ ಯೋಜನೆಗಳಡಿಯಲ್ಲಿ ಒಟ್ಟು 230 ವಿಶ್ವಕರ್ಮ ಸಮುದಾಯಗಳ ಜನರಿಗೆ 110.42 ಲಕ್ಷ ರೂ.ಗಳ ಸಾಲವನ್ನು ಮಂಜೂರು ಮಾಡಿ ಬಿಡುಗಡೆ ಮಾಡಲಿಗದೆ. ಪ್ರತಿಶತ 92 ರಷ್ಟು ಗುರಿ ಸಾಧನೆಯಾಗಿರುತ್ತದೆ ಹಾಗೂ ಗಂಗಾ ಕಲ್ಯಾಣ ಯೋಜನಯಡಿ ಜಿಲ್ಲೆಗೆ ಭೌತಿಕ 18 ಆರ್ಥಿಕ 36.00 ಲಕ್ಷ ರೂ.ಗಳ ಗುರಿಯನ್ನು ನಿಗಧಿಪಡಿಸಲಾಗಿತ್ತು. ಈ ಯೋಜನೆಯಡಿ 18 ವಿಶ್ವಕರ್ಮ ಸಮುದಾಯಗಳಿಗೆ ಸೇರಿದ ಸಣ್ಣ ಅತೀ ಸಣ್ಣ ಭೂ ಹಿಡುವಳಿದಾರರನ್ನು ಆಯ್ಕೆ ಸಮಿತಿಗಳಲ್ಲಿ ಆಯ್ಕೆ ಮಾಡಲಾಗಿದೆ. ಈ ಯೋಜನೆಯ ಅನುಷ್ಠಾನವು ಪ್ರಗತಿಯಲ್ಲಿರುತ್ತದೆ.

ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ

ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮದಿಂದ 2019–20ನೇ ಸಾಲಿಗೆ ಅನುಷ್ಠಾನಗೊಳಿಸಲಾದ ವಿವಿಧ ಯೋಜನೆಗಳು 1) ಸ್ವಯಂ ಉದ್ಯೋಗ ಸಾಲ ಯೋಜನೆ, 2) ಅರಿವು ಸಾಲ ಯೋಜನೆ ಈ ಯೋಜನೆಗಳಲ್ಲಿ ಜಿಲ್ಲೆಗೆ ಒಟ್ಟು ಭೌತಿಕ 136 ಆರ್ಥಿಕ 69.35 ಲಕ್ಷ ರೂ.ಗಳ ಗುರಿಯನ್ನು ನಿಗಧಿಪಡಿಸಲಾಗಿತ್ತು ಪ್ರಸಕ್ತ ಸಾಲಿನಲ್ಲಿ ವಿವಿಧ ಸಾಲ ಯೋಜನೆಗಳಡಿಯಲ್ಲಿ ಒಟ್ಟು 122 ಉಪ್ಪಾರ ಸಮಾಜದ ಜನರಿಗೆ ರೂ. 60.79 ಲಕ್ಷ ರೂ.ಗಳ ಸಾಲವನ್ನು ಮಂಜೂರು ಮಾಡಿ ಬಿಡುಗಡೆ ಮಾಡಲಾಗಿದೆ. ಪ್ರತಿಶತ 88 ರಷ್ಟು ಗುರಿ ಸಾಧನೆಯಾಗಿರುತ್ತದೆ ಹಾಗೂ ಗಂಗಾ ಕಲ್ಯಾಣ ಯೋಜನೆಯಡಿ ಜಿಲ್ಲೆಗೆ ಭೌತಿಕ 32 ಆರ್ಥಿಕ 64.00 ಲಕ್ಷ ರೂ.ಗಳ ಗುರಿಯನ್ನು ನಿಗಧಿಪಡಿಸಲಾಗಿತ್ತು. ಈ ಯೋಜನೆಯಡಿ 32 ಉಪ್ಪಾರ ಸಮಾಜಕ್ಕೆ ಸೇರಿದ ಸಣ್ಣ ಅತೀ ಸಣ್ಣ ಭೂ ಹಿಡುವಳಿದಾರರನ್ನು ಆಯ್ಕೆ ಸಮಿತಿಗಳಲ್ಲಿ ಆಯ್ಕೆ ಮಾಡಲಾಗಿದೆ. ಈ ಯೋಜನೆಯ ಅನುಷ್ಠಾನವು ಪ್ರಗತಿಯಲ್ಲಿರುತ್ತದೆ.

ನಿಜಶರಣ ಅಂಬಿಗರ ಚೌಡಯ್ಯಾ ಅಭಿವೃದ್ಧಿ ನಿಗಮ

ನಿಜಶರಣ ಅಂಬಿಗರ ಚೌಡಯ್ಯಾ ಅಭಿವೃದ್ಧಿ ನಿಗಮದಿಂದ 2019–20ನೇ ಸಾಲಿಗೆ ಅನುಷ್ಠಾನಗೊಳಿಸಲಾದ ವಿವಿಧ ಯೋಜನೆಗಳು 1) ಸ್ವಯಂ ಉದ್ಯೋಗ ಸಾಲ ಯೋಜನೆ, 2) ಅರಿವು ಸಾಲ ಯೋಜನೆ ಈ ಯೋಜನೆಗಳಲ್ಲಿ ಜಿಲ್ಲೆಗೆ ಒಟ್ಟು ಭೌತಿಕ 30 ಆರ್ಥಿಕ 15.30 ಲಕ್ಷ ರೂ.ಗಳ ಗುರಿಯನ್ನು ನಿಗಧಿಪಡಿಸಲಾಗಿತ್ತು ಪ್ರಸಕ್ತ ಸಾಲಿನಲ್ಲಿ ವಿವಿಧ ಸಾಲ ಯೋಜನೆಗಳಡಿಯಲ್ಲಿ ಒಟ್ಟು 27 ಅಂಬಿಗ ಸಮಾಜದ ಜನರಿಗೆ ರೂ. 13.50 ಲಕ್ಷ ರೂ.ಗಳ ಸಾಲವನ್ನು ಮಂಜೂರು ಮಾಡಿ ಬಿಡುಗಡೆ ಮಾಡಲಾಗಿದೆ. ಪ್ರತಿಶತ 88 ರಷ್ಟು ಗುರಿ ಸಾಧನೆಯಾಗಿರುತ್ತದೆ ಹಾಗೂ ಗಂಗಾ ಕಲ್ಯಾಣ ಯೋಜನೆಯಡಿ ಜಿಲ್ಲೆಗೆ

ಭೌತಿಕ 07 ಆರ್ಥಿಕ 14.00 ಲಕ್ಷ ರೂ.ಗಳ ಗುರಿಯನ್ನು ನಿಗಧಿಪಡಿಸಲಾಗಿತ್ತು. ಈ ಯೋಜನೆಯಡಿ 07 ಅಂಬಿಗ ಸಮಾಜಕ್ಕೆ ಸೇರಿದ ಸಣ್ಣ ಅತೀ ಸಣ್ಣ ಭೂ ಹಿಡುವಳಿದಾರರನ್ನು ಆಯ್ಕೆ ಸಮಿತಿಗಳಲ್ಲಿ ಆಯ್ಕೆ ಮಾಡಲಾಗಿದೆ. ಈ ಯೋಜನೆಯ ಅನುಷ್ಠಾನವು ಪ್ರಗತಿಯಲ್ಲಿರುತ್ತದೆ.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ

- 2019–20 ನೇ ಸಾಲಿನ ಕ್ರೀಯಾ ಯೋಜನೆಯಲ್ಲಿ ಬೆಳಗಾವಿ ಜಿಲ್ಲೆಗೆ ಸ್ವಯಂ ಉದ್ಯೋಗ, ಶ್ರಮಶಕ್ತಿ, ಮೈಕ್ರೋ, ಅರಿವು, ಗಂಗಾ ಕಲ್ಯಾಣ ವೈಯಕ್ತಿಕ ಕೊಳವೆ ಬಾವಿ ಯೋಜನೆ, ನೇರ ಅವಧಿ ಸಾಲ (NMDFC) ಅಟೋಮೊಬೈಲ ತರಬೇತಿ, ಪಶು ಸಂಗೋಪನೆ (ಕೃಷಿ ಸಂಬಂಧಿತ) ಯೋಜನೆ, ಟ್ಯಾಕ್ಸಿ/ಗೂಡ್ಸ್ ವಾಹನ ಖರೀದಿ ಯೋಜನೆ, ವೃತ್ತಿ ಪ್ರೋತ್ಸಾಹ ಸಹಾಯಧನ ಯೋಜನೆ, ಸಣ್ಣ ಅತೀ ಸಣ್ಣ ರೈತರಿಗೆ ಕೃಷಿ ಯಂತ್ರೋಪಕರಣಗಳಿಗೆ ಸಹಾಯಧನ ಯೋಜನೆ ಮತ್ತು ಮನೆ ಕಟ್ಟಡಕ್ಕಾಗಿ ಮಾರ್ಜಿನ ಹಣ ಯೋಜನೆ ಹೀಗೆ ಒಟ್ಟು 12 ಯೋಜನೆಗಳಿಗೆ 2207 ಭೌತಿಕ ಗುರಿ ರೂ. 1100.31 ಲಕ್ಷಗಳ ಆರ್ಥಿಕ ಗುರಿ ನಿಗಧಿಪಡಿಸಲಾಗಿದ್ದು, ಈ ಗುರಿಗಳ ಪ್ರಕಾರ ವಿವಿಧ ಸಾಲ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.
- 2019–20 ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಗೆ ವಿವಿಧ ಯೋಜನೆಗಳಲ್ಲಿ ಒಟ್ಟು 2207 ಭೌತಿಕ ಗುರಿ ರೂ. 1100.31 ಲಕ್ಷಗಳ ಆರ್ಥಿಕ ಗುರಿಗಳನ್ನು ನಿಗಧಿಪಡಿಸಲಾಗಿದೆ. ಈ ಗುರಿಗಳನ್ವಯ ದಿನಾಂಕ : 31–05–2020 ರ ವರೆಗೆ 1564 ಅಲ್ಪಸಂಖ್ಯಾತರ ಫಲಾನುಭವಿಗಳಿಗೆ ರೂ. 800.16 ಗಳ ಸಾಲ ಹಾಗೂ ಸಹಾಯಧನ ಹಣವನ್ನು ಮಂಜೂರಾತಿ ನೀಡಿ, ಶೇಕಡಾ 70.86% ರಷ್ಟು ಸಾಧನೆ ಮಾಡಲಾಗಿದೆ.

ಕ್ರಮ ಸಂಖ್ಯೆ	ವಿವರಗಳು	2019–20ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ	ಖರ್ಚಾದ ಅನುದಾನ	ಭೌತಿಕ ಪ್ರಗತಿ (ಫಲಾನುಭವಿಗಳು)
1	ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಕಾರ್ಯಕ್ರಮಗಳು	1100.31	800.16	1564
	ಒಟ್ಟು	**1100.31**	**800.16**	**1564**

ಕೈಮಗ್ಗ ಮತ್ತು ಜವಳಿ ಇಲಾಖೆ

ಕೈಮಗ್ಗ ಮತ್ತು ಜವಳಿ ಇಲಾಖೆಯು 1993 ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಜಿಲ್ಲೆಯಲ್ಲಿ ವಿದ್ಯುತ್ ಮಗ್ಗ ಹಾಗೂ ಕೈಮಗ್ಗಗಳ ಅಭಿವೃದ್ಧಿಗಾಗಿ ಹಾಗೂ ಕೈಮಗ್ಗ ಮತ್ತು ವಿದ್ಯುತ ಮಗ್ಗ ನೇಕಾರರ ಬೆಳವಣಿಗೆಗಾಗಿ ಜಿಲ್ಲಾವಲಯ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಜಿಲ್ಲೆಯಲ್ಲಿ 5352 ಕೈಮಗ್ಗಗಳು ಹಾಗೂ 25,882 ವಿದ್ಯುತ್ ಮಗ್ಗಗಳಿರುತ್ತವೆ. ಜಿಲ್ಲೆಯಲ್ಲಿ 144 ಕೈಮಗ್ಗ ಸಹಕಾರ ಸಂಘಗಳು ಹಾಗೂ 40 ವಿದ್ಯುತ ಮಗ್ಗ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. 2019–20ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳನ್ನು ಜಿಲ್ಲೆಯ ಸಹಕಾರ ಸಂಘಗಳ ಮೂಲಕ ಅನುಷ್ಠಾನಗೊಳಿಸಲಾಗಿದೆ.

ಜಿಲ್ಲಾ ವಲಯ ಯೋಜನೆಗಳು :

ಕ್ರಮ ಸಂಖ್ಯೆ	2019–20ನೇ ಸಾಲಿನಲ್ಲಿ ಪ್ರಸ್ತಾಪಿಸಿದ ಯೋಜನೆಗಳ ಹೆಸರು	ಯೋಜನೆಗಳ ಉದ್ದೇಶ ಮತ್ತು ಸಾದಿಲ್ವಾರದ ಪ್ರಗತಿ 2019–20ನೇ ಸಾಲಿನ ಕಾರ್ಯಕ್ರಮ ಆರ್ಥಿಕ ಮತ್ತು ಭೌತಿಕ ಗುರಿ ಸಂಕ್ಷಿಪ್ತ ಟಿಪ್ಪಣಿ
1	ಕೈಮಗ್ಗ ಉದ್ದಿಮೆಗಳಿಗೆ ಸಹಾಯ 2851–00–107–0–31–100 ಸಾಮಾನ್ಯ ಘಟಕ	ಸನ್ 2019–20ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟ ಅನ್ವಯ ರೂ. 7.00 ಲಕ್ಷಗಳನ್ನು ಸಾಮಾನ್ಯ ಘಟಕದಡಿ 14 ಸಹಕಾರ ಸಂಘಗಳಿಗೆ ತಲಾ ರೂ. 50,000/– ಗಳ ದುಡಿಮೆ ಬಂಡವಾಳ ಸಾಲ ಮಂಜೂರಿಸಲಾಗಿದೆ. ವಿವರ ಈ ಕೆಳಗಿನಂತಿದೆ. 1) ಶ್ರೀ ಕಾಳಿದಾಸ ಗ್ರಾಮೀಣ ಕೈಗಾರಿಕಾ ಸಹಕಾರಿ ಸಂಘ, ಶಿಂದೊಳ್ಳಿ, ತಾ. ಬೆಳಗಾವಿ 2) ಕುರಿ ಮತ್ತು ಉಣ್ಣೆ ಉತ್ಪಾಕರ ಸಹಕಾರ ಸಂಘ ನಿ., ಹುನ್ನೂರ್ ಆರ್.ಸಿ, ತಾ. ಹುಕ್ಕೇರಿ 3) ಶ್ರೀ ಬೀರೇಶ್ವರ ಕುರಿ ಸಂಗೋಪನ ಮತ್ತು ಉಣ್ಣೆ ಉತ್ಪಾಕರ ನೇಕಾರರ ಸಹಕಾರ ಸಂಘ ನಿ., ನೇರ್ಲಿ, ತಾ. ಹುಕ್ಕೇರಿ 4) ಶ್ರೀ ಮುರುಸಿದ್ಧೇಶ್ವರ ಕುರಿಗಳ ಸಂಗೋಪನ ಮತ್ತು ಉಣ್ಣೆ ಉತ್ಪಾಕರ ಸಹಕಾರ ಸಂಘ ನಿ., ಮುರಗುಂಡಿ, ತಾ. ಅಥಣಿ 5) ಶ್ರೀ ಮಾಳಿಂಗರಾಯ ಕುರಿ ಸಾಕಾಣಿಕೆ ಮತ್ತು ಉಣ್ಣೆ ಉತ್ಪಾಕರ ಸಹಕಾರ ಸಂಘ ನಿ., ಕುಡಚಿ, ತಾ. ರಾಯಬಾಗ 6) ಶ್ರೀ ಕ್ರಾಂತಿವೀರ ಸಂಗೋಳ್ಳಿ ರಾಯಣ್ಣ ಕುರಿ ಸಂಗೋಪನ ಮತ್ತು ಉಣ್ಣೆ ಉತ್ಪಾಕರ ಸಹಕಾರ ಸಂಘ ನಿ., ಕರೋಶಿ, ತಾ. ಚಿಕ್ಕೋಡಿ 7) ಶ್ರೀ ಕನಕದಾಸ ಕುರಿ ಸಾಕಾಣಿಕೆ ಮತ್ತು ಉಣ್ಣೆ ಉತ್ಪಾಕರ ಸಹಕಾರ ಸಂಘ ನಿ., ಕೆರೂರು, ತಾ. ಚಿಕ್ಕೋಡಿ 8) ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕುರಿ ಸಂಗೋಪನ ಮತ್ತು ಉಣ್ಣೆ ಉತ್ಪಾಕರ ಸಹಕಾರ ಸಂಘ ನಿ., ಬಡಿಗವಾಡ, ತಾ. ಗೋಕಾಕ 9) ಶ್ರೀ ಅಮೋಘ ಸಿದ್ಧೇಶ್ವರ ಕುರಿ ಸಂಗೋಪನ ಮತ್ತು ಉಣ್ಣೆ ನೇಕಾರರ ಸಹಕಾರ ಸಂಘ ನಿ., ಜೋಕಾನಟ್ಟಿ, ತಾ. ಗೋಕಾಕ

		10) ದಿ. ತರುಣ ನೇಕಾರ ಸಹಕಾರಿ ಉತ್ಪಾದಕ ಸಂಘ ನಿ., ಮನಿಹಾಳ, ತಾ. ರಾಮದುರ್ಗ 11) ಸವದತ್ತಿ ಪ್ರೈಮರಿ ಊಲ್ ವಿವರ್ಸ್ ಕೋ–ಆಪರೇಟಿವ ಪ್ರೋಡಕ್ಷನ್ ಮತ್ತು ಸೇಲ್ಸ್ ಸೊಸೈಟಿ ಲಿ., ಸವದತ್ತಿ, ತಾ. ಸವದತ್ತಿ 12) ದಿ. ಇಂಚಲ ಮತ್ತು ಹಾರುಗೊಪ್ಪ ಕುರಿ ಸಂಗೋಪನ ಮತ್ತು ಉಣ್ಣೆ ಉತ್ಪಾಕರ ಸಹಕಾರ ಸಂಘ ನಿ., ಇಂಚಲ, ತಾ. ಸವದತ್ತಿ 13) ದಿ. ಕನಕದಾಸ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಸಹಕಾರಿ ಸಂಘ ನಿ., ಬೈಲಹೊಂಗಲ, ತಾ. ಬೈಲಹೊಂಗಲ 14) ಬೈಲಹೊಂಗಲ ನೇಕಾರ ಉತ್ಪಾಕರ ಸಹಕಾರಿ ಸಂಘ ನಿ., ಬೈಲಹೊಂಗಲ, ತಾ. ಬೈಲಹೊಂಗಲ

2019–20ನೇ ಸಾಲಿನ ಜಿಲ್ಲಾ ವಲಯ ಯೋಜನೆಯಡಿ ಪ್ರಗತಿ ವರದಿ

ಕ್ರಮ ಸಂಖ್ಯೆ	ಯೋಜನೆ/ಲೆಕ್ಕ ಶೀರ್ಷಿಕೆ	ಗುರಿ		ಸಾಧನೆ		ಷರಾ
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	
1	ಕೈಮಗ್ಗ ಉದ್ದಿಮೆಗಳಿಗೆ ಸಹಾಯ 2851–00–107–0–31 100–ಧನ ಸಹಾಯ/ಪರಿಹಾರ	14	7.00	14	7.00	

ಗ್ರಾಮೀಣ ಮತ್ತು ಸಣ್ಣ ಉದ್ಯಮ ಇಲಾಖೆ

ಜಿಲ್ಲಾ ಪಂಚಾಯತ ವ್ಯವಸ್ಥೆ ಅಡಿ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯು ಗ್ರಾಮೀಣಾಭಿವೃದ್ಧಿಗೆ ಸಂಬಂಧಪಟ್ಟ ಕೆಲವೊಂದು ಯೋಜನೆಗಳನ್ನು ಜಿಲ್ಲಾ ಪಂಚಾಯತ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುತ್ತಿದೆ. ಈ ಎಲ್ಲ ಯೋಜನೆಗಳು ಗ್ರಾಮೀಣ ಭಾಗದ ಜನರಿಗೆ, ಉದ್ಯೋಗ ಒದಗಿಸಿಕೊಡುವದು ಮತ್ತು ಗ್ರಾಮೀಣ ಭಾಗದಲ್ಲಿ ಚಿಕ್ಕ ಕೈಗಾರಿಕೆ, ಗೃಹ ಕೈಗಾರಿಕೆಗಳ ಸ್ಥಾಪನೆಗೆ ಪ್ರೋತ್ಸಾಹ ನೀಡಿ ಸ್ವಂತ ಉದ್ಯೋಗಕ್ಕೆ ಅವಕಾಶ ಮಾಡಿಕೊಡುವ ಯೋಜನೆಗಳಾಗಿವೆ. ಪಾರಂಪರಿಕ ಕುಶಲಕರ್ಮಿಗಳು ತಮ್ಮ ಕುಶಲ ಕಲೆಯನ್ನು ಮುಂದುವರೆಸಿಕೊಂಡು ಹೋಗಲು ಅನುಕೂಲ ಮಾಡಿಕೊಡುವ ಕುಶಲಕರ್ಮಿಗಳ ಕರ ಕೌಶಲ್ಯ ಹೆಚ್ಚಿಸಿ ಅವರ ಉತ್ಪಾದನಾ ಮಟ್ಟವನ್ನು ಹೆಚ್ಚಿಸುವ ಯೋಜನೆಯಾಗಿವೆ. ಅಲ್ಲದೇ ಹಿಂದುಳಿದ ಮತ್ತು ಪರಿಶಿಷ್ಟ ಜಾತಿ / ಪರಿಷ್ಟ ಪಂಗಡ ಜನಾಂಗದವರಿಗೆ ಕೈಗಾರಿಕೆ ಸ್ಥಾಪಿಸಲು ನೆರವಾಗುವ ಯೋಜನೆಗಳಾಗಿವೆ. ಇಲಾಖೆಯಿಂದ ಅನುಷ್ಠಾನಗೊಳಿಸುವ ಯೋಜನೆಗಳೆಲ್ಲವು ಎಲ್ಲ ವರ್ಗದ ಜನರ ಆರ್ಥಿಕ ಅಭಿವೃದ್ಧಿಗೆ ಪೂರಕವಾದವುಗಳಾಗಿವೆ. ಈ ಯೋಜನೆಗಳ ಮಹತ್ವಗಳ ಬಗ್ಗೆ ಮತ್ತು 2019–20 ನೇ ಸಾಲಿನಲ್ಲಿ ಸಾಧಿಸಿದ ಪ್ರಗತಿಯ ಸಂಕ್ಷಿಪ್ತ ವಿವರಗಳು ಈ ಕೆಳಗಿನಂತಿವೆ.

ಕ್ರಮ ಸಂಖ್ಯೆ	2019–20ನೇ ಸಾಲಿನ ಪ್ರಸ್ತಾಪಿಸಿದ ಜಿಲ್ಲಾ ಪಂಚಾಯತ ಯೋಜನೆಗಳು	ಯೋಜನೆಗಳ ಉದ್ದೇಶ ಮತ್ತು ಸಾಧಿಸಲಾದ ಪ್ರಗತಿ 2019–20ನೇ ಸಾಲಿನಲ್ಲಿ ಆರ್ಥಿಕ ಮತ್ತು ಭೌತಿಕ ಸಾಧನೆ ಟಿಪ್ಪಣಿ
1	ಜಿಲ್ಲಾ ಕೈಗಾರಿಕಾ ಕೇಂದ್ರ ಬಂಡವಾಳ ಹೂಡಿಕೆ ಉತ್ತೇಜನ ಸಹಾಯಧನ ಗ್ರಾಮೀಣ ಕುಶಲ ಕರ್ಮಿಗಳಿಗೆ	ಗ್ರಾಮೀಣ ಪ್ರದೇಶದಲ್ಲಿ ವೃತ್ತಿಪರ ಕುಶಲಕರ್ಮಿಗಳಿಗೆ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗಲು ಅನುಕೂಲವಾಗುವಂತೆ ಯೋಜನಾ ವೆಚ್ಚದ ಮೇಲೆ ಶೇ 60 ರಷ್ಟು ಗರಿಷ್ಠ ರೂ. 10,000/– ವರೆಗೆ ಸಹಾಯಧನ ಹಾಗೂ ಉಳಿಕೆ ಯೋಜನಾ ವೆಚ್ಚವು ಬ್ಯಾಂಕಿನ ಸಾಲ ಹಾಗೂ ಕುಶಲಕರ್ಮಿಯ ವಂತಿಕೆಯಿಂದ ಪೂರೈಸುವುದು. ಯೋಜನಾ ವೆಚ್ಚ ರೂ. 30,000/– ಕ್ಕಿಂತ ಮೀರಬಾರದು. ಅದರಂತೆ 2019–20 ನೇ ಸಾಲಿಗೆ ಈ ಯೋಜನೆ ಅಡಿ ರೂ. 12.00 ಲಕ್ಷ ಅನುದಾನದಲ್ಲಿ ಒಟ್ಟು ರೂ. 6.00 ಲಕ್ಷ 60 ಜನರಿಗೆ ಸ್ವಂತ ಉದ್ಯೋಗಾವಕಾಶ ಕಲ್ಪಿಸಲಾಗಿದೆ.
2	ಗ್ರಾಮೀಣ ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತ ಉಪಕರಣ ಪೂರೈಕೆ ಯೋಜನೆ	ಗ್ರಾಮಾಂತರ ಪ್ರದೇಶದಲ್ಲಿರುವ ವಿವಿಧ ಬಡ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣಗಳನ್ನು ಕೊಳ್ಳಲು ಅನುಕೂಲ ಮಾಡಿಕೊಡಲು ಅವರು ಹಳೆಯ ಮಾದರಿಯ ಹಾಗೂ ಹೆಚ್ಚು ಉತ್ಪಾದನೆಗೆ ಸಹಾಯಕವಲ್ಲದ ಉಪಕರಣಗಳನ್ನು ಉಪಯೋಗಿಸುತ್ತಿದ್ದು, ಇದರಿಂದ ಉತ್ಪಾದಿಸಿದ ವಸ್ತುಗಳಿಗೆ ಉತ್ತಮ ಬೆಲೆ ಸಿಗದೇ ತಮ್ಮ ವೃತ್ತಿಯಿಂದ ಮುಕ್ತರಾಗಬಹುದು. ಇದನ್ನು ತಪ್ಪಿಸಲು ಇವರಿಗೆ ಸುಧಾರಿತ ಉಪಕರಣ ಪೂರೈಕೆ ಮಾಡಿ ತಮ್ಮ ವೃತ್ತಿಯಲ್ಲಿಯೇ ಮುಂದುವರೆಯುವಂತೆ ಮಾಡುವುದಲ್ಲದೇ ಹೊಸ ಮಾದರಿಯ ಉಪಕರಣಗಳನ್ನು ಒದಗಿಸಿಕೊಡುವ ಮೂಲಕ ಅವರುಗಳ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಿ ಆರ್ಥಿಕ ಸೌಲಭ್ಯಗಳನ್ನಾಗಿ ಮಾಡುವುದು. ಈ ಯೋಜನೆಯ ಉದ್ದೇಶವಾಗಿದೆ. ಈ ಯೋಜನೆ ಅಡಿ ಗ್ರಾಮೀಣ ಭಾಗದ ಪರಂಪರಾನುಗತ ಕುಶಲಕರ್ಮಿಗಳಿಗೆ ತಮ್ಮ ವೃತ್ತಿಗೆ ಸಂಬಂಧಪಟ್ಟಂತೆ ಉಚಿತ ಸುಧಾರಿತ ಉಪಕರಣ ನೀಡುವ ಕಾರ್ಯಕ್ರಮ ಇಟ್ಟುಕೊಂಡಿರುತ್ತದೆ.

		ಸನ್ 2019–20 ನೇ ಸಾಲಿಗೆ ಅವಕಾಶವಿದ್ದ ರೂ. 12.50 ಲಕ್ಷ ಅನುದಾನವನ್ನು ಜಿಲ್ಲೆಯಲ್ಲಿ ಕೋವಿಡ್–19 ರಿಂದ ಅನುದಾನ ಬಿಡುಗಡೆ ಬ್ಲಾಕ ಮಾಡಲಾಗಿದ್ದು, ಅದರಿಂದ ಸದರಿ ಯೋಜನೆಯ ಕಾರ್ಯಕ್ರಮ ಪ್ರಸ್ತುತ ವರ್ಷ ಅನುದಾನದಲ್ಲಿ ಅನುಷ್ಠಾನ ಮಾಡಲಾಗುವುದು.

ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ

- 2019–20 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ ಲಿಂಕ್ ಡಾಕ್ಯೂಮೆಂಟ್ ಅನುದಾನದಲ್ಲಿ 2327 ಅನಕ್ಷರಸ್ತರನ್ನು ಸಾಕ್ಷರನ್ನಾಗಿಸಲಾಗಿದೆ.
- 2019–20 ನೇ ಸಾಲಿನಲ್ಲಿ ರಾಜ್ಯ ಪುರಸ್ಕೃತ ವಿವಿಧ ಮೂಲ ಸಾಕ್ಷರತಾ ಕಾರ್ಯಕ್ರಮಗಳಾದ ಡಾ. ಡಿ. ಎಂ. ನಂಜುಡಪ್ಪ ವರದಿ ಅನುಸಾರ ಹಿಂದುಳಿದ ಅತೀ ಹಿಂದುಳಿದ ಮತ್ತು ಅತ್ಯಂತ ಹಿಂದುಳಿದ ತಾಲೂಕುಗಳಲ್ಲಿನ ಅನಕ್ಷರಸ್ತರ ಮೂಲ ಸಾಕ್ಷರತಾ ಕಾರ್ಯಕ್ರಮದಡಿ ನಗರ ಸ್ತ್ರೀ ಶಕ್ತಿ ಸ್ವ ಸಹಾಯ ಗುಂಪುಗಳಲ್ಲಿನ ಜನ ಅನಕ್ಷರಸ್ತರ ಸದಸ್ಯರನ್ನು ಅಕ್ಷರಸ್ತರನ್ನಾಗಿಸುವ ಸಲುವಾಗಿ ಸಮೀಕ್ಷೆ ನಡೆಸಿ ಕಲಿಕಾ ಕೇಂದ್ರಗಳನ್ನು ತೆರೆದು ಕಲಿಕಾ ಕಾರ್ಯಕ್ರಮ ಆರಂಭಿಸಿ ಮುಕ್ತಾಯದ ಹಂತದಲ್ಲಿದೆ.
- 2011 ಜಣಗನತಿಯಂತೆ ಬೆಳಗಾವಿ ಜಿಲ್ಲಾ ಸಾಕ್ಷರತಾ ಪ್ರಮಾಣ 73.94% ಇದ್ದು ಸದರಿ ಸಾಕ್ಷರತಾ ಪ್ರಮಾಣವನ್ನು ಶೇ 80 ಕ್ಕೆ ಮುಟ್ಟಿಸುವ ಮತ್ತು ಪುರುಷ ಮತ್ತು ಮಹಿಳೆಯರಲ್ಲಿನ ಲಿಂಗ ತಾರತಮ್ಯವನ್ನು 10% ರಷ್ಟು ಕಡಿಮೆಗೊಳಿಸುವ ಉದ್ದೇಶವಾಗಿದೆ.
- ಲಿಂಕ್ ಡಾಕ್ಯೂಮೆಂಟ್ ಅನುದಾನದಡಿಯಲ್ಲಿ ನಡೆಸಲಾದ ಮೂಲಕ ಸಾಕ್ಷರತಾ ಕಾರ್ಯಕ್ರಮದಡಿಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಚಿಕ್ಕೋಡಿ ಸೇರಿದಂತೆ 233 ಕಲಿಕಾ ಕೇಂದ್ರಗಳನ್ನು ತೆರೆದು ಅಷ್ಟೇ ಸಂಖ್ಯೆಯ ಬೋಧಕರ ಬೋದನಾ ಕ್ರಿಯೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.
- 2019–20 ನೇ ಸಾಲಿನಲ್ಲಿ ತೆರೆಯಲಾಗಿರುವ ರಾಜ್ಯ ಪುರಸ್ಕೃತ ವಿವಿಧ ಮೂಲ ಸಾಕ್ಷರತಾ ಕಾರ್ಯಕ್ರಮಗಳನ್ನು ಸಂಘ–ಸಂಸ್ಥೆಗಳ ಸಹಯೋಗದಲ್ಲಿ ಅನುಷ್ಠಾನಗೊಳಿಸಲಾಗಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಳಗಾವಿ

2019–20 ನೇ ಸಾಲಿನ ಇಲಾಖೆಯ ವಿವಿಧ ಯೋಜನೆಗಳ ಪ್ರಗತಿ ವರದಿ.

1) **ಸ್ತ್ರೀಶಕ್ತಿ ಯೋಜನೆ :** ಬೆಳಗಾವಿ ಜಿಲ್ಲೆಯಲ್ಲಿ 16023 ಸ್ತ್ರೀಶಕ್ತಿ ಗುಂಪುಗಳು ಕಾರ್ಯನಿವರ್ಹಿಸುತ್ತವೆ. ಇಲ್ಲಿಯವರೆಗೆ ಒಟ್ಟು ರೂ. 153.53 ಕೊಟಿ ಉಳಿತಾಯವಾಗಿದ್ದು, ರೂ 207.74 ಕೋಟಿ ಆತಂರಿಕ ಸಾಲ ವಿತರಿಸಲಾಗಿದೆ. ಇಲ್ಲಿಯವರೆಗೆ ಬ್ಯಾಂಕಿನಿಂದ ರೂ 128.61 ಕೋಟಿ ಸಾಲ ಪಡೆದಿದ್ದು, ರೂ 115.14 ಕೋಟಿ ಮರುಪಾವತಿಯಾಗಿರುತ್ತದೆ. 2019–20 ನೇ ಸಾಲಿನಲ್ಲಿ ವಿವಿಧ ಕಾರ್ಯಕ್ರಮಗಳಿಗಾಗಿ ಒಟ್ಟು ರೂ . 9.38 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಎಲ್ಲ ಗುಂಪುಗಳು ಪ್ರಯೋಜನ ಪಡೆದಿರುತ್ತದೆ.

2) **ಸಾಂತ್ವನ ಮಹಿಳಾ ಸಹಾಯವಾಣಿ :** ದೌರ್ಜನ್ಯ ಹಾಗೂ ಅತ್ಯಾಚಾರಕ್ಕೊಳಗಾದ ಮಹಿಳೆಯರಿಗೆ ಆರ್ಥಿಕ ಸಹಾಯ ಮತ್ತು ಕಾನೂನು ಸಹಾಯ ಕೌಟುಂಬಿಕ ಸಲಹೆ ಹಾಗೂ ತಕ್ಷಣದ ರಕ್ಷಣೆ ಹಾಗೂ ಆಶ್ರಯ ಮತ್ತು ಸ್ವ– ಉದ್ಯೋಗ ಮಾಡಲು ತರಬೇತಿ ನೀಡಿ ಸ್ವಾವಲಂಬಿಗಳನ್ನಾಗಿ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಕಾರ್ಯಕ್ರಮಗಳನ್ನು ಸ್ವಯಂಸೇವಾ ಸಂಸ್ಥೆಯ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದ್ದು ಸಧ್ಯದಲ್ಲಿ ಈ ಕಾರ್ಯವನ್ನು ಮಹಿಳಾ ಕಲ್ಯಾಣ ಸಂಸ್ಥೆಯ ಶಿವಬಸವನಗರ, ಬೆಳಗಾವಿ ಇವರಿಗೆ ವಹಿಸಲಾಗಿದೆ. ದೌರ್ಜನ್ಯಕ್ಕೊಳಗಾದ ಮಹಿಳೆಯರು ಮತ್ತು ಸಾರ್ವಜನಿಕರು ಮಹಿಳಾ ಸಹಾಯವಾಣಿ ದೂರವಾಣಿ ಸಂಖ್ಯೆ 181 ಕ್ಕೆ ಉಚಿತ ದೂರವಾಣಿ ಕರೆ ಮಾಡಬಹುದಾಗಿದೆ. ಜಿಲ್ಲೆಯ10 ತಾಲೂಕುಗಳಲ್ಲಿ 15 ಸಾಂತ್ವನ ಕೇಂದ್ರಗಳು ಪ್ರಾರಂಬಗೊಂಡಿವೆ. 2019–20 ನೇ ಸಾಲಿಗೆ ಈ ಕಾರ್ಯಕ್ರಮ ಅನುಷ್ಠಾನಕ್ಕಾಗಿ ರೂ. 87.50 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ಎಲ್ಲ ಅನುದಾನವು ವೆಚ್ಚವಿಗಿರುತ್ತದೆ.

3) **ಹೆಣ್ಣು ಮಕ್ಕಳ ವಸತಿ ನಿಯಲಗಳು :** ಹೆಣ್ಣುಮಕ್ಕಳ ವಿಧ್ಯಾಭ್ಯಾಸ ಪ್ರೋತ್ಸಾಹಿಸಲು ಮತ್ತು ಶಾಲೆ ಬಿಡುವುದನ್ನು ತಪ್ಪಿಸುವ ಉದ್ದೇಶದಿಂದ ಹೆಣ್ಣುಮಕ್ಕಳಿಗಾಗಿ ಬೆಳಗಾವಿ ಹಾಗೂ ಸವದತ್ತಿಯಲ್ಲಿ ಹೆಣ್ಣು ಮಕ್ಕಳ ವಸತಿ ನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಈಣ ಈ ವಸತಿ ನಿಲಯಗಳನ್ನು ಸ್ವಯಂಸೇವಾ ಸಂಸ್ಥೆಗಳ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದ್ದು, ಸಧ್ಯಕ್ಕೆ ಬೆಳಗಾವಿಯಲ್ಲಿ ಮಹಾಂತೇಶ ನಗರದ ಯುನೈಟೆಡ್ ಸೋಶೀಯಲ್ ಸಂಸ್ಥೆಯವರು ಹಾಗೂ ಶ್ರೀ ದಾನೇಶ್ವರಿ ಸೇವಾ ಸಂಘ, ಬೆಳಗಾವಿ ಇವರು ಸವದತ್ತಿಯಲ್ಲಿ ವಸತಿ ನಿಲಯಗಳನ್ನು ನಡೆಸುತ್ತಿದ್ದಾರೆ. ಪ್ರಸಕ್ತ ಸಾಲಿನಲ್ಲಿ ರೂ. 23.87 ಲಕ್ಷ ಅನುದಾನ ಬಿಡುಗಡೆಯಾಗಿದ್ದು ರೂ. 23.87 ಲಕ್ಷ ಖರ್ಚಾಗಿರುತ್ತದೆ.

4) **ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ :** ಮಹಿಳಾ ಅಭಿವೃದ್ಧಿ ಕ್ಷೇತ್ರ ಮತ್ತು ಸಾಮಾಜಿಕ ಅನಿಷ್ಠಗಳಿಂದ ಮಹಿಳೆಯರನ್ನು ರಕ್ಷಿಸುವ ಕಾರ್ಯದಲ್ಲಿ ತೊಡಗಿರುವ ಮಹಿಳೆಯರನ್ನು ಗುರುತಿಸುವ, ಪ್ರೋತ್ಸಾಹಿಸುವ ಉದ್ದೇಶದಿಂದ ಸ್ವಯಂಸೇವಾ ಸಂಸ್ಥೇ ಮತ್ತು ಮಹಿಳಾ ಸಮಾಜ ಸೇವಕರಿಗೆ ರಾಣಿ ಚನ್ನಮ್ಮ ಪ್ರಶಸ್ತಿಯನ್ನು ಪ್ರತಿ ವರ್ಷ ಮಾರ್ಚ 8 ರಂದು ಅಂತರಾಷ್ಟ್ರೀಯ ಮಹಿಳಾ ದಿನದಂದು ರಾಜ್ಯ ಸರ್ಕಾರವು ನೀಡುತ್ತಿದೆ. ಆಯ್ಕೆಯಾದ ಉತ್ತಮ ಸಂಸ್ಥೆಗೆ ಪ್ರಶಸ್ತಿಪತ್ರ ಮತ್ತು ರೂ.25,000=00 ನಗದು ಬಹುಮಾನ ನೀಡಲಾಗುತ್ತದೆ. ವ್ಯಕ್ತಿಗಳಿಗಾಗಿ ನೀಡುವ ಪ್ರಶಸ್ತಿ ಪತ್ರ ರೂ.10,000=00 ನಗದು ಬಹುಮಾನ ನೀಡಲಾಗುತ್ತದೆ. ವ್ಯಕ್ತಿಗಳಿಗಾಗಿ ನೀಡುವ ಪ್ರಶಸ್ತಿಯನ್ನು ಕಲೆ, ಸಾಹಿತ್ಯ, ಶಿಕ್ಷಣ ಮತ್ತು ಕ್ರೀಡಾ ಕ್ಷೇತ್ರಗಳಿಗೆ ವಿಸ್ತರಿಲಾಗಿದೆ. 2019–20 ರಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಮಹಿಳಾ ಅಭಿವೃದ್ಧಿ ಕ್ಷೇತ್ರದಡಿ ರೂ.25000=00 ಬಹುಮಾನವನ್ನು ಇಬ್ಬರು ಹೆಣ್ಣು ಮಕ್ಕಳು ಪ್ರಶಸ್ತಿ ಪಡೆದಿದ್ದಾರೆ.

5) **ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಸೇವಾ ಸಲ್ಲಿಸಿದವರಿಗೆ ಪ್ರಶಸ್ತಿಗಳು :** ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಗಳಿಗೆ ಮತ್ತು ಸಂಸ್ಥೆಗಳಿಗೆ ರಾಜ್ಯ ಪ್ರಶಸ್ತಿಗಾಗಿ 5 ವರ್ಷಗಳ ಕಾಲ ಅತ್ಯುತ್ತಮ ಸೇವೆ ಸಲ್ಲಿಸಿರುವಂತಹ ವ್ಯಕ್ತಿಗಳಿಗೆ ತಲಾ ರೂ. 25,000/– ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ಹಾಗೂ ಸಂಸ್ಥೆಗಳಗೆ ತಲಾ ರೂ. 1.00 ಲಕ್ಷಗಳ ನಗದು ಬಹುಮಾನ ಹಾಗು ಪ್ರಶಸ್ತಿ ಪತ್ರವನ್ನು ನೀಡಲಾಗುತ್ತದೆ.

6) **ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ :** ಈ ಯೋಜನೆಯಡಿ ತಮ್ಮ ಪ್ರಾಣದ ಹಂಗನ್ನು ತೊರೆದು ಇತರರ ರಕ್ಷಣೆಗಾಗಿ ಪ್ರದರ್ಶಿಸಿರುವ ಧೈರ್ಯ ಸಾಹಸದ ಕಾರ್ಯಗಳಾಗಿದ್ದಲ್ಲಿ ಅಚಿತಹ ಮಕ್ಕಳಗೆ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮಾ ಪ್ರಶಸ್ತಿ ಪ್ರಧಾನ ಮಾಡಲಾಗುತ್ತದೆ. ಇಚಿತಹ ಪ್ರಶಸ್ತಿ ಪಡೆದ ಮಕ್ಕಳ ವಿಧ್ಯಾಭ್ಯಾಸಕ್ಕೆ ಪ್ರತಿ ವರ್ಷ 2019–20 ರೂ.2020/ ಗಳ ಸಹಾಯಧನವನ್ನು ಶಾಲಾ ಶಿಕ್ಷಣ ಮುಗಿಯುವವರೆಗೆ ನೀಡಲಾಗುತ್ತದೆ. ಜಿಲ್ಲೆಯಲ್ಲಿ 3 ಮಕ್ಕಳು 2018–19 ರಿಂದ ಸಹಾಯಧನ ಪಡೆಯುತ್ತದ್ದಾರೆ.

7) **ದತ್ತು ಸ್ವೀಕಾರ ಘಟಕ :** ಅನಾಥ ನಿರ್ಗತಿಕ ಹಾಗೂ ತಿರಸ್ಕರಿಸಲ್ಪಟ್ಟ ಮಕ್ಕಳಿಗೆ ಒಂದು ಉತ್ತಮವಾದ ಕೌಟುಂಬಿಕ ವಾತಾವರಣ ಕಲ್ಪಿಸಿ ಅವರಿಗೆ ವಾತ್ಸಲ್ಯ ರಕ್ಷಣೆ ಒದಗಿಸುವುದೇ ದತ್ತು ಸ್ವೀಕಾರ ಯೋಜನೆಯ ಉದ್ದೇಶವಾಗಿದೆ. ನೈಜ ಸರ್ಕಾರದ ನಿಮಾವಳಿ ಮತ್ತು ಮಾರ್ಗಸೂಚಿಗಳ ಪ್ರಕಾರ ರಾಜ್ಯಮಟ್ಟದ ಸಮಿತಿ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ. ಬೆಳಗಾವಿ ಜಿಲ್ಲೆಯಲ್ಲಿ ಸ್ವಾಮಿ ವಿವೇಕಾನಂದ ಸೇವಾ ಪ್ರತಿಷ್ಠಾನ ಗಂಗಮ್ಮಾ ಚಿಕ್ಕುಂಬಿಮಠ, ಬಾಲಕಲ್ಯಾಣ ಕೇಂದ್ರ , ಬೆಳಗಾವಿ ಇವರಿಗೆ ಲೈಸನ್ಸ್ ಮೇಲೆ ದತ್ತು ಸ್ವೀಕಾರ ಕೇಂದ್ರದಡಿಯಲ್ಲಿ ಅನುಮತಿ ನೀಡಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರವರ ಕಾರ್ಯಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಳಗಾವಿ ಇವರನ್ನು ಸಂಪರ್ಕಿಸಬಹುದು.

8) **ಸ್ಥೈರ್ಯ ಯೋಜನೆ :** ಸ್ಥೈರ್ಯ ನಿಧಿ ಯೋಜನೆಯಡಿ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಆರ್ಥಿಕ ಪರಿಹಾರ ನೀಡಲಾಗುತ್ತಿದೆ. ಆಸಿಡ್ ದಾಳಗೆ ಒಳಗಾದ ಮಹಿಳೆಯರು/ಹೆಣ್ಣು ಮಕ್ಕಳಿಗೆ ಮರಣ ಪರಿಹಾರ ಯೋಜನೆಯು ದಿನಾಂಕ : 01–07–2015 ರಿಂದ ಜಾರಿಯಲ್ಲಿ ಇರುತ್ತದೆ. ದೌರ್ಜನ್ಯಕ್ಕೊಳಗಾದ (ಅತ್ಯಾಚಾರ, ಸಾಮೂಹಿಕ ಅತ್ಯಾಚಾರ ಹಾಗೂ ತೀವ್ರತರ ಅತ್ಯಾಚಾರ ದೌರ್ಜನ್ಯ ಪ್ರಕರಣಗಳಿಗೊಳಗಾದ ಮಹಿಳೆಯರಿಗೆ ತುರ್ತು ಚಿಕಿತ್ಸೆಗಾಗಿ ಅರ್ಜಿ ಸ್ವೀಕರಿಸಿದ 24 ಗಂಟೆ ಒಳಗಾಗಿ ಪರಿಹಾರವಾಗಿ ರೂ. 25,000–00 ರವರೆಗೆ ನೀಡಲಾಗುತ್ತದೆ. ಆಸಿಡ್ ದಾಳಿಗೆ ಒಳಗಾದ ಮಹಿಳೆ ಮೃತ ಪಟ್ಟ ಸಂದರ್ಭದಲ್ಲಿ ಅವರ ಅವಲಂಬಿತರಿಗೆ "ಸ್ಥೈರ್ಯ" ನಿಧಿ ಯೋಜನೆಯಡಿ ರೂ.1.00 ಲಕ್ಷ ಪರಿಹಾರ ನೀಡಲಾಗುತ್ತದೆ. ದೌರ್ಜನ್ಯಕ್ಕೊಳಗಾಗಿ ಮರಣ ಹೊಂದಿದ ಫಲಾನುಭವಿಯ ಅವಲಂಬಿತರಿಗೆ ರೂ. 1.00 ಲಕ್ಷಗಳನ್ನು ಜಿಲ್ಲಾ ಸಮಿತಿ ಅನುಮೋದನೆಯೊಂದಿಗೆ 2016–17 ನೇ ಸಾಲಿನಲ್ಲಿ ರೂ,1.00 ಲಕ್ಷ ಹಾಗೂ 2019–20 ನೇ ಸಾಲಿನಲ್ಲಿ 2 ಫಲಾನುಭವಿಗಳ ಅವಲಂಬಿತರಿಗೆ ರೂ, 1.00 ಲಕ್ಷ ದಂತೆ ರೂ,2.00 ಲಕ್ಷಗಳ ಪರಿಹಾರವನ್ನು ನೀಡಲಾಗಿದೆ. 2019–20 ನೇ ಸಾಲಿನಲ್ಲಿ ಒಟ್ಟು 69 ಪ್ರಕರಣಗಳನ್ನು ದಾಖಲಾಗಿರುತ್ತವೆ.

9) **ಗೆಳತಿ (ಮಹಿಳಾ) ವಿಶೇಷ ಚಿಕಿತ್ಸಾ ಘಟಕ :** ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಹಾಗೂ ಮಕ್ಕಳಿಗೆ ಒಂದೆ ಸೂರಿನಡಿ ಸಮಗ್ರ ಸೌಲಭ್ಯ ಅಚಿದರೆ ತುರ್ತು ವೈದ್ಯಕೀಯ ಚಿಕಿತ್ಸೆ, ಪೋಲಿಸ್ ನೆರವು, ಕಾನೂನು ನೆರವು ಮತ್ತು ಸಮಾಲೋಚನೆ ವ್ಯವಸ್ಥೆಗಳನ್ನು ಒದಗಿಸುವ ನಿಟ್ಟಿನಲ್ಲಿ ಗೆಳತಿ (ಮಹಿಳಾ) ವಿಶೇಷ ಚಿಕಿತ್ಸಾ ಘಟಕಗಳನ್ನು ಜಿಲ್ಲಾ ಆಸ್ಪತ್ರೆಯಲ್ಲಿ ಪ್ರಾರಂಭಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಒಟ್ಟು 143 ಪ್ರಕರಣಗಳು ದಾಖಲಾಗಿದ್ದು, ಈ ಯೋಜನೆಯ ಅನುಷ್ಠಾನಕ್ಕಾಗಿ ರೂ. 3.84 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ.

10) **ಭಾಗ್ಯಲಕ್ಷ್ಮೀ ಯೋಜನೆ :** ಭಾಗ್ಯಲಕ್ಷೀ ಯೋಜನೆಯನ್ನು ಕರ್ನಾಟಕದ ಘನ ಸರ್ಕಾರವು 2019–20ನೇ ಸಾಲಿನಿಂದ ಜಾರಿಗಳಿಸಿದ್ದು, ಹೆಣ್ಣುಮಗುವನ್ನು ಆರ್ಥಿಕ ನೆರವಿನ ಮೂಲಕ ಸಬಲೀಕರಣಗೊಳಿಸುವುದು ಹೆಣ್ಣು ಭ್ರೂಣಹತ್ಯೆ ನಿಷೇಧಿಸುವುದು ಯೋಜನೆಯ ಮುಖ್ಯ ಉದ್ದೇಶ. ಹೆಣ್ಣುಮಗು ಹೊರೆಯಲ್ಲ ಆಕೆಯು ಗಂಡುಮಗುವಿನ ಸಮಾನ ಎಂದು ಜನರಿಗೆ ಮನದಟ್ಟು ಮಾಡಲು ಕರ್ನಾಟಕ ಸರ್ಕಾರ 2019–20 ನೇ ಸಾಲಿನಲ್ಲಿ ಆಯವ್ಯಯದಲ್ಲಿ ಭಾಗ್ಯಲಕ್ಷ್ಮೀ ಯೋಜನೆಯ ಎಂಬ ವಿನೂತನ ಕಲ್ಯಾಣ ಯೋಜನೆಯನ್ನು ಜಾರಿಗೆ ತಂದಿದೆ. ಬಡತನ ರೇಖೆಗಿಂತ ಕೆಳಗಿನ ಅಂದರೆ ಕಡುಬಡ ಕುಟುಂಬದಲ್ಲಿ ಹೆಣ್ಣುಮಗು ಜನಿಸಿದ ಕೂಡಲೇ ಸರ್ಕಾರ ದಿ. 01–04–2006 ರಿಂದ 31–07–2008 ರವರೆಗೆ ಜನಿಸಿದ ಮಗುವಿನ ಹೆಸರಿನಲ್ಲಿ ರೂ. 10,000–00 ದಿನಾಂಕ 01–08–2008 ರಿಂದ ಜನಿಸಿದ ಮೊದಲೇ ಸೌಲಭ್ಯ ಪಡೆಯುವ ಮಗುವಿನ ಹೆಸರಿನಲ್ಲಿ ರೂ. 19,300–00 ಹಾಗೂ 2ನೇ ಸೌಲಭ್ಯ ಪಡೆಯುವ ಮಗುವಿನ ಹೆಸರಿನಲ್ಲಿ ರೂ. 18,350–00 ಠೇವಣಿ ಇರಿಸುವ ಮೂಲಕ ಆ ಮಗುವಿನ ಪಾಲಕರ ಆತಂಕವನ್ನು ಹೋಗಲಾಡಿಸುತ್ತದೆ. ಯೋಜನೆಯ ಸೌಲಭ್ಯವನ್ನು ಕುಟುಂಬದ ಇಬ್ಬರು ಹೆಣ್ಣುಮಕ್ಕಳಿಗೆ ಸೀಮಿತಗೊಳಿಸಿರುತ್ತಾರೆ.

2006–07ನೇ ಸಾಲಿನಿಂದ 2019–20 ನೇ ಸಾಲಿನವರೆಗೆ ಸದರಿ ಯೋಜನೆಯಡಿ 245700 ಫಲಾನುಭವಿಗಳು ಸೌಲಭ್ಯ ಪಡೆದಿರುತ್ತಾರೆ. ಇಲ್ಲಿಯವರೆಗೆ ಎಲ್.ಐ.ಸಿಯಿಂದ ಒಟ್ಟು 229764 ಬಾಂಡ್‌ಗಳು ಸ್ವೀಕೃತವಾಗಿರುತ್ತವೆ.

ಜಿಲ್ಲಾ ವಲಯ ಕಾರ್ಯಕ್ರಮಗಳು

1) ಸಮಗ್ರ ಶಿಶು ಅಭಿವೃದ್ಧಿ ಯೋಜನೆ :

6 ವರ್ಷದೊಳಗಿನ ಮಕ್ಕಳ ಆರೋಗ್ಯ ಮಟ್ಟ ಸುಧಾರಣೆ, ಮಗುವಿನ ಮಾನಸಿಕ, ಸಾಮಾಜಿಕ, ದೈಹಿಕ ಬೆಳವಣಿಗೆಗೆ ಭದ್ರಬುನಾದಿ ಹಾಕುವ ಮೂಲ ಉದ್ದೇಶದಿಂದ ಶಿಶು ಅಭಿವೃದ್ಧಿ ಯೋಜನೆಗಳನ್ನು ಪ್ರಾರಂಭಿಸಲಾಗಿದೆ. ಶಾಲೆ ಬಿಡುವ ಪ್ರಮಾಣ ಕಡಿಮೆ ಮಾಡುವ ಉದ್ದೇಶದಿಂದ ಈ ಸೇವೆಗಳನ್ನು ಹಮ್ಮಿಕೊಳ್ಳಲಾಗಿದೆ. ಇದರೊಂದಿಗೆ ಮಗುವಿನ ಸರ್ವಾಂಗೀಣ ಅಭಿವೃದ್ಧಿಗಾಗಿ ಅಂಗನವಾಡಿ ಕೇಂದ್ರಗಳ ಮುಖಾಂತರ ಶಾಲಾಪೂರ್ವ ಶಿಕ್ಷಣವನ್ನು ನೀಡುವ ಯೋಜನೆಯನ್ನು ಹೊಂದಲಾಗಿದೆ. ಈ ಕಾರ್ಯಕ್ರಮದ ಅಂಗನವಾಡಿ 6 ವರ್ಷದೊಳಗಿನ ಮಗುವಿಗೆ, ಗರ್ಭಿಣಿ ಬಾಣಂತಿಗೆ ಪೂರಕ ಪೌಷ್ಠಿಕ ಆಹಾರ ನೀಡಲಾಗುವುದು.

2019–20 ನೇ ಸಾಲಿನಲ್ಲಿ ಜಿಲ್ಲೆಯ 14 ಶಿಶು ಅಭಿವೈದ್ಧಿ ಯೋಜನೆಗಳ ಮುಖಾಂತರ 5326 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಒಟ್ಟು 4,88,971 ಫಲಾನುಭವಿಗಳು ಈ ಯೋಜನೆಯ ಉಪಯೋಗ ಪಡೆಯುತ್ತಾರೆ.

ಕ್ರ ಸಂ	ಶಿಶು ಅಭಿವೃದ್ಧಿ ಯೋಜನೆ ಹೆಸರು	ಪ್ರಾರಂಭವಾದ ವರ್ಷ	ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ		ಫಲಾನುಭವಿಗಳ ಸಂಖ್ಯೆ
1	ರಾಯಭಾಗ	1978–79	458	10	51556
2	ಅಥಣಿ	1982–83	302	2	31308
3	ಕಾಗವಾಡ	2012–13	250	2	25186
4	ಸವದತ್ತಿ	1983–84	328	15	38679
5	ಬೆಳಗಾವಿ (ನಗರ)	1991–92	375	0	31650
6	ಹುಕ್ಕೇರಿ	1991–93	464	8	41217
7	ಗೋಕಾಕ	1991–92	212	4	26292
8	ಅರಭಾವಿ	2012–13	406	5	43357
9	ಚಿಕ್ಕೋಡಿ	1993–94	240	0	20329
10	ನಿಪ್ಪಾಣಿ	2012–13	468	0	38870
11	ಬೆಳಗಾವಿ (ಗ್ರಾಮೀಣ)	1995–96	674	0	47738
12	ಖಾನಾಪೂರ	1995–96	362	6	22667
13	ರಾಮದುರ್ಗ	1995–96	297	3	30867
14	ಬೈಲಹೊಂಗಲ	1995–96	431	4	39255
		ಒಟ್ಟು	**5267**	**59**	**488971**

ಸಮಗ್ರ ಶಿಶು ಅಭಿವೃದ್ಧಿ ಸೇವೆಗಳಲ್ಲಿ ಅಶೀಮುಖ್ಯವಾದ ಪೂರಕ ಪೌಷ್ಠಕ ಆಹಾರ ಸೇವೆಗಳನ್ನು ಲೆಕ್ಕ ಶೀರ್ಷಿಕೆ : 2235–00–101–0–61 ರಡಿಯಲ್ಲಿ 2019–20ನೇ ಸಾಲಿನಲ್ಲಿ ರೂ. 18382.74 ಲಕ್ಷ ಬಿಡುಗಡೆಯಾಗಿದ್ದು, ರೂ. 14330.07 ಲಕ್ಷ ವೆಚ್ಚವಾಗಿದೆ. 2019–20ನೇ ಸಾಲಿನಲ್ಲಿ 4,88,971 ಫಲಾನುಭವಿಗಳು ವರ್ಷದ 300 ದಿನಗಳವರೆಗೆ ಪೌಷ್ಠಿಕ ಆಹಾರ ಪಡೆದಿರುತ್ತಾರೆ.

2) ಕ್ಷೀರಭಾಗ್ಯ ಯೋಜನೆ :

ಸದರಿ ಯೋಜನೆಯು ದಿನಾಂಕ : 01–08–2013 ರಿಂದ ಅನುಷ್ಠಾನಗೊಂಡಿದ್ದು, ಈ ಯೋಜನೆಯಡಿ 6 ತಿಂಗಳಿನಿಂದ 6 ವರ್ಷದ ಮಕ್ಕಳಿಗೆ ವಾರದಲ್ಲಿ 3 ದಿನ ಪ್ರತಿ ದಿನಕ್ಕೆ ಪ್ರತಿ ಮಗುವಿಗೆ 150 ಎಂ. ಎಲ್. ನಂತೆ ಹಾಲು ವಿತರಿಸಾಗುತ್ತಿತ್ತು. ಜುಲೈ 2017 ರಿಂದ ಅಂಗನವಾಡಿ ಎಲ್ಲಾ ಮಕ್ಕಳಿಗೆ ವಾರದಲ್ಲಿ 5 ದಿನ ಹಾಲು ನೀಡಲಾಗುತ್ತಿದೆ.

3) ಅಂಗನವಾಡಿ ಕಟ್ಟಡಗಳ ನಿರ್ಮಾಣ :

ಲೆಕ್ಕ ಶೀರ್ಷಿಕೆ : 2211–00–101–0–61 ಯೋಜನೆಯಡಿ 916 ಅಂಗನವಾಡಿ ಕಟ್ಟಡಗಳನ್ನು ಶೌಚಾಲಯ ನಿರ್ಮಾಣ ಹಾಗೂ ರಿಪೇರಿಗಾಗಿ ತೆಹೆದುಕೊಳ್ಳಲಾಗಿದೆ. ಈ ವರ್ಷ ರೂ. 150.00 ಲಕ್ಷ ಬಿಡುಗಡೆಯಾಗಿದ್ದು, ರೂ.77.95 ಲಕ್ಷ ಖರ್ಚಾಗಿರುತ್ತದೆ. 2019–20 ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ 3 ಕಟ್ಟಡಗಳಿಗೆ ರೂ. 54.00 ಲಕ್ಷ ಅನುದಾನ ಬೀಡುಗಡೆಯಾಗಿದೆ.

ಕ್ರ. ಸಂ	ಕಟ್ಟಡಗಳ ವಿವರ	ಸ್ಥಳಗಳ ಸಂಖ್ಯೆ
1	ಸ್ವಂತ ಕಟ್ಟಡಗಳು	3127
2	ಪಂಚಾಯತ ಕಟ್ಟಡಗಳು	130
3	ಸಮುದಾಯ ಕಟ್ಟಡಗಳು	210
4	ಯುವಕ ಮಂಡಳ ಕಟ್ಟಡಗಳು	7
5	ಮಹಿಳಾ ಮಂಡಳ ಕಟ್ಟಡಗಳು	6
6	ಬಾಡಿಗೆ ಕಟ್ಟಡಗಳು	1473
7	ಶಾಲಾ ಕಟ್ಟಡಗಳು	301
8	ಖಾಸಗಿ ಕಟ್ಟಡಗಳು	72
ಒಟ್ಟು		**5326**
ನಿರ್ಮಾಣ ಹಂತದ ಕಟ್ಟಡಗಳ ಸಂಖ್ಯೆ		**135**

4) ಅಪೌಷ್ಠಿಕ ಮಕ್ಕಳ ವೈದ್ಯಕೀಯ ವೆಚ್ಚ : ಅಪೌಷ್ಠಿಕ ಮಕ್ಕಳ ವೈದ್ಯಕೀಯ ವೆಚ್ಚ ಯೋಜನೆಯಡಿ ಪ್ರತಿ 2 ತಿಂಗಳಿಗೊಮ್ಮೆ ಅಂಗನವಾಡಿ ಮಕ್ಕಳ ಆರೋಗ್ಯ ತಪಾಸಣೆ ನಡೆಸಿ ಅಪೌಷ್ಠಿಕ ಮಕ್ಕಳನ್ನು ಗುರುತಿಸಿ ಆ ಮಕ್ಕಳ ಆರೋಗ್ಯ ಸುಧಾರಣೆಗೆ ವೈದ್ಯಕೀಯ ವೆಚ್ಚಕ್ಕಾಗಿ ಪ್ತಿ ಮಗುವಿಗೆ ವಾರ್ಷಿಕ ರೂ. 2000–00 ರಂತೆ ವೆಚ್ಚ ಭರಿಸಲಾಗುತ್ತದೆ.

5) ಮಾತೃಪೂರ್ಣ ಯೋಜನೆ : ಮಾತೃಪೂರ್ಣ ಯೋಜನೆಯು 2 ಅಕ್ಟೋಬರ್ 2017 ರಂದು ಅನುಷ್ಠಾನಗೊಂಡಿದ್ದು, ಸದರಿ ಯೋಜನೆಯಡಿ ಗರ್ಭಿಣಿ ಬಾಣಂತಿಯರಿಗೆ ಅಂಗನವಾಡಿ ಕೇಂದ್ರಗಳಲ್ಲಿ ಮಧ್ಯಾಹ್ನದ ಪೌಷ್ಠಿಕ ಬಿಸಿಯೂಟವನ್ನು ನೀಡಲಾಗುತ್ತದೆ. ಜಿಲ್ಲೆಯಲ್ಲಿ 81939 ಫಲಾನುಭವಿಗಳು ಈ ಯೋಜನೆಯ ಸೌಲಭ್ಯ ಪಡೆದುಕೊಳ್ಳುತ್ತಿದ್ದಾರೆ.

6) ಮಾತೃಪೂರ್ಣ ಯೋಜನೆ : ಸದರಿ ಯೋಜನೆಯ ಕೇಂದ್ರಸರ್ಕಾರದ ಯೋಜನೆಯಾಗಿದ್ದು, ದಿನಾಂಕ : 01–01–2017 ರಿಂದ ಮೊದಲ ಬಾರಿಗೆ ಗರ್ಭಿಣಿಯಾದ ಮಹಿಳೆಯರಿಗೆ ರೂ. 5,000–00 ಗಳನ್ನು 3 ಕಂತುಗಳಲ್ಲಿ ನೇರವಾಗಿ

ಆರ್.ಟಿ.ಜಿ.ಎಸ್. ಮೂಲಕ ಫಲಾನುಭವಿಗಳ ಖಾತೆಗೆ ಸಹಾಯಧನವನ್ನು ಜಮಾ ಮಾಡಲಾಗುತ್ತದೆ. ಈ ಯೋಜನೆಯಡಿ 2019–20 ನೇ ಸಾಲಿನಲ್ಲಿ ಒಟ್ಟು 28,831 ಫಲಾನುಭವಿಗಳು ಪ್ರಯೋಜನವನ್ನು ಪಡೆದಿರುತ್ತಾರೆ.

7) ಮಾತೃಶ್ರೀ ಯೋಜನೆ : ಸದರಿ ಯೋಜನೆಯ ರಾಜ್ಯ ಸರ್ಕಾರದ ಯೋಜನೆಯಾಗಿದ್ದು, ದಿನಾಂಕ : 01–11–2018 ರಿಂದ ಗರ್ಭಿಣಿಯರಿಗೆ ಪ್ರಾರಂಭವಾಗಿದೆ. ಇದು 1 ನೇ ಮತ್ತು 2ನೇ ಗರ್ಭಿಣಿಯರಿಗೆ ಅನ್ವಯಿಸುತ್ತದೆ. ಮತ್ತು ಈ ಸೌಲಭ್ಯವು ದಿ: 01–03–2018 ರಿಂದ ದಿ. 01–11–2018 ರ ನಂತರದ ಬಾಣಂತಿಯರಿಗೆ ಅನ್ವಯಿಸುತ್ತದೆ. ಈ ಯೋಜನೆಯಲ್ಲಿ 6 ಕಂತುಗಳಲ್ಲಿ ರೂ. 6000/– ನೇರ ನಗದು ವರ್ಗಾವಣೆಯ ಮೂಲಕ ಫಲಾನುಭವಿಗಳ ಆಧಾರ ಲಿಂಕ ಬ್ಯಾಂಕ ಖಾತೆಗಳಿಗೆ ಜಮೆಯಾಗುತ್ತದೆ. ಈ ಯೋಜನೆಯಡಿ ಇಲ್ಲಿಯವರೆಗೆ ಒಟ್ಟು 12,461 ಫಲಾನುಭವಿಗಳು ಪ್ರಯೋಜನ ಪಡೆದುಕೊಂಡಿರುತ್ತಾರೆ.

8) ವಿಧವೆ ಮತ್ತು ದೇವದಾಸಿಯರ ಪುನರ್ ವಿವಾಹ : ಲೆಕ್ಕ ಶೀರ್ಷಿಕೆ: 2235–02–103–0–61 ಯೋಜನೆ, ವಿಧವೆ ಮತ್ತು ದೇವದಾಸಿಯರೆಗೆ ಪುನರ್ ವಸತಿ ಕಲಿಸುವ ಉದ್ದೇಶದಿಂದ ಈ ಮಹಿಳೆಯನ್ನು ಪುನರವಿವಾಹವಾಗುವವರೆಗೆ ಪ್ರತಿ ಜೋಡಿಗೆ ರೂ. 10,000/– ಪ್ರೋತ್ಸಾಹಧನ ನೀಡಲಾಗುತ್ತದೆ. .

9) ದೇವದಾಸಿ ಪುನರ್ವಸತಿ ನಿಗಮ : ಮಾಶಾಸನ : ಜಿಲ್ಲೆಯ 3106 ಮಾಜಿ ದೇವದಾಸಿಯರಿಗೆ ಮಾಸಿಕ ತಲಾ ರೂ. 1,500–00 ರಂತೆ ಮಶಾಸನವನ್ನು ಮಹಿಳಾ ಅಭಿವೃದ್ಧಿ ನಿಗಮದಿಂದ ನೇರವಾಗಿ ಸಂದಾಯ ಮಾಡಲಾಗುತ್ತದೆ.

ಮಹಿಳಾ ಅಬಿವೃದ್ಧಿ ನಿಗಮ :

1)ಉದ್ಯೋಗಿನಿ ಯೋಜನೆ : ಸದರಿ ಯೋಜನೆಯಡಿ ಮಹಿಳಾ ಫಲಾನುಭವಿಗಳಿಗೆ ರೂ. 3.00 ಲಕ್ಷ ಗಳವರೆಗೆ ಸಾಲ ಒದಗಿಸುವುದು. ವಿಶೇಷ ವರ್ಗದ ಮಹಿಳೆಯರಿಗೆ ಶೇ. 50% ರಷ್ಟು (ಗರಿಷ್ಠ 1,50,000–00) ಹಾಗೂ ಇತರೆ ಮಹಿಳೆಯರಿಗೆ ಶೇ 30% ರಷ್ಟು (ಗರಿಷ್ಠ 90,000–00) ವರೆಗೆ ನಿಗಮದಿಂದ ಸಹಾಯಧನ ಒದಗಿಸಲಾಗುತ್ತದೆ. 2019–20 ನೇ ಸಾಲಿನ ಭೌತಿಕ ಗುರಿ 268 ಇದ್ದು, ರೂ. 302061 ಲಕ್ಷ ಅನುದಾನ ಬಿಡುಗಡೆಯಾಗುತ್ತದೆ.

2) ಕಿರುಸಾಲ ಯೋಜನೆ : ಫಲಾನುಭವಿಗಳಗೆ ಮಹಿಳ ಅಭಿವೃದ್ಧಿ ನಿಗಮದಿಂದ ನೇರವಾಗಿ ಸಣ್ಣ ವ್ಯಾಪಾರಕ್ಕಾಗಿ ರೂ. 2.00 ಲಕ್ಷಗಳವರೆಗೆ ಸಾಲ ಸೌಲಭ್ಯವಿದ್ದು, 2019–20 ನೇ ಸಾಲಿನಲ್ಲಿ 18 ಭೌತಿಕ ಗುರಿ ಇದ್ದು, ರೂ. 36.00 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ.

ಆದ್ದರಿಂದ ಮೇಲಿನ ಎಲ್ಲಾ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನಕ್ಕಾಗಿ ಇಲಾಖೆಯ ತೀವ್ರವಾಗಿ ಕ್ರಮಕೈಗೊಂಡಿದ್ದು ಸೂಕ್ತ ಪ್ರಗತಿ ಸಾಧಿಸಲಾಗಿದೆ.

ಕೃಷಿ ಇಲಾಖೆ

ಮುಂಗಾರು–2019: 2019 ಮುಂಗಾರು ಹಂಗಾಮಿನ ಆರಂಭದಲ್ಲಿ ಮಳೆ ಕೊರತೆಯಿಂದ ಬಿತ್ತನೆ ಪ್ರಾರಂಭವಾಗಲು ಸ್ವಲ್ಪ ಹಿನ್ನಡೆಯಾದರೂ, ಜೂನ್ ಮತ್ತು ಜುಲೈ ತಿಂಗಳಿನಲ್ಲಿ ಬಂದಂತಹ ಮಳೆ ರೈತರಿಗೆ ಅನಕೂಲಕರವಾಗಿತ್ತು. ಮುಂಗಾರು ಹಂಗಾಮಿನಲ್ಲಿ 718351 ಹೆ. ಗುರಿ ಪೈಕಿ 680451 ಹೆ.ಅಂದರೆ ಶೇ. 95 ರಷ್ಟು ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ. ಆದರೆ ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳಲ್ಲಿ ಆಗಿರುವ ಧಾರಾಕಾರ ಮಳೆಯಿಂದಾಗಿ, ಪ್ರಮುಖ ನದಿಗಳ ನೀರಿನ ಮಟ್ಟ ಹೆಚ್ಚಾಗಿ, ಆಣೆಕಟ್ಟಿನಿಂದ ಬಿಡುಗಡೆಯಾದ ನೀರಿನಿಂದ ಉಂಟಾಗಿರುವ ಪ್ರವಾಹದಿಂದ ಜಿಲ್ಲೆಯಲ್ಲಿ ಅತಿವೃಷ್ಟಿ/ ನೆರೆ ಪರಿಸ್ಥಿತಿ ಉದ್ಭವವಾಯ್ತು. ಬೆಳೆಗಳಲ್ಲಿ ನೀರು ನಿಂತು ಸುಮಾರು 2,16,793 ಹೆಕ್ಟರ್ ಪ್ರದೇಶ ಜಂಟಿ ಸಮೀಕ್ಷೆ ಪ್ರಕಾರ ಬಾಧಿತಕ್ಷೇತ್ರವೆಂದು ಅಂದಾಜಿಸಲಾಗಿ ರೂ. 20642.52 ಲಕ್ಷಗಳ ಬೆಳೆ ಹಾನಿ ಪರಿಹಾರ ಕೋರಿ ಸರಕಾರಕ್ಕೆ ಪ್ರಸ್ತಾವಣೆಯನ್ನು ಸಲ್ಲಿಸಲಾಗಿರುತ್ತದೆ. ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ 612 ಮಿ.ಮಿ. ಸಾಮಾನ್ಯ ಮಳೆಗೆ ಹೋಲಿಸಲಾಗಿ 906 ಮಿ.ಮಿ. ಅಂದರೆ ಪ್ರತಿಶತ 48 ರಷ್ಟು ಹೆಚ್ಚು ಮಳೆ ದಾಖಲಾಗಿರುತ್ತದೆ.

ಹಿಂಗಾರು–2019: 2019 ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ 153.00 ಮೀ.ಮೀ ಸಾಮಾನ್ಯ ಮಳೆ ಪ್ರಮಾಣಕ್ಕೆ ಹೋಲಿಸಲಾಗಿ, ಜಿಲ್ಲೆಯಲ್ಲಿ 275 ಮೀ.ಮೀ ಮಳೆ ದಾಖಲಾಗಿದ್ದು, ಜಿಲ್ಲೆಯಾದ್ಯಂತ ಸುಮಾರು 80 ಪ್ರತಿಶತ ಹೆಚ್ಚು ಮಳೆ ವರದಿಯಾಗಿರುತ್ತದೆ. ಅಕ್ಟೋಬರ್ ತಿಂಗಳಿನಲ್ಲಿ ಬಿದ್ದ ಮಳೆಯಿಂದಾಗಿ ಬಿತ್ತನೆ ಮಾಡಲು ಸಹಕಾರಿಯಾಯಿತು. ನವ್ಹೆಂಬರ್ ಹಾಗೂ ಡಿಸೇಂಬರ್ ತಿಂಗಳಿನಲ್ಲಿಸ್ವಲ್ಪ ಮಳೆ ಕೊರತೆಯಾದರೂ 3.20 ಲಕ್ಷ ಹೆಕ್ಟರ್ ಗುರಿಗೆ 101 ಪ್ರತಿಶತ ಅಂದರೆ 3.22 ಲಕ್ಷ ಹೆಕ್ಟರ್ ಪ್ರದೇಶದಲ್ಲಿ ಹಿಂಗಾರು ಬೆಳೆಗಳ ಬಿತ್ತನೆ ಪ್ರಗತಿಯಾಗಿರುತ್ತದೆ. ಒಟ್ಟಾರೆ ಹಿಂಗಾರು ಹಂಗಾಮಿನಲ್ಲಿ ಬಿತ್ತನೆಯಾದ ಜಿಲ್ಲೆಯ 9 ತಾಲೂಕುಗಳಲ್ಲಿ ಬೆಳೆಗಳು ಚೆನ್ನಾಗಿರುವುದು ಕಂಡು ಬರುತ್ತದೆ.

ಬೇಸಿಗೆ 2019–20: ಬೇಸಿಗೆ ಹಂಗಾಮಿನಲ್ಲಿ ಖಚಿತ ನೀರಾವರಿ ಕ್ಷೇತ್ರಗಳಲ್ಲಿ ಶೇ. 121 ರಷ್ಟು ಪ್ರದೇಶ ಅಂದರೆ 11425 ಹೆ. ಗುರಿಗೆ ಹೋಲಿಸಲಾಗಿ 13827 ಹೆ. ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ.

2019–20 ನೇ ಸಾಲಿನ ಬೆಳೆ ವಿಸ್ತೀರ್ಣ ಹಾಗೂ ಉತ್ಪಾದನಾ ಅಂದಾಜು

(ಕ್ಷೇತ್ರ : ಲಕ್ಷ ಹೆ. ಹಾಗೂ ಉತ್ಪಾದನೆ ಲಕ್ಷ ಮೆಟ್ರಿಕ್ ಟನ್)

ಕ್ರ. ಸಂ	ಬೆಳೆಗಳು	ವಿವರ	ಮುಂಗಾರು		ಹಿಂಗಾರು		ಬೇಸಿಗೆ		ಒಟ್ಟು	
			ಗುರಿ	ಸಾಧನೆ	ಗುರಿ	ಸಾಧನೆ	ಗುರಿ	ಸಾಧನೆ	ಗುರಿ	ಸಾಧನೆ
1	ತೃಣ ಧಾನ್ಯಗಳು	ಕ್ಷೇತ್ರ	2.24	2.15	2.11	1.98	0.04	0.08	4.39	4.21
		ಉತ್ಪಾದನೆ								
	ದ್ವಿದಳ ಧಾನ್ಯಗಳು	ಕ್ಷೇತ್ರ	0.60	0.54	0.99	1.19	0.005	0.001	1.60	1.73
		ಉತ್ಪಾದನೆ								
2	ಒಟ್ಟು ಆಹಾರ ಧಾನ್ಯಗಳು	ಕ್ಷೇತ್ರ	2.84	2.69	3.10	3.17	0.043	0.083	5.98	5.94
		ಉತ್ಪಾದನೆ								
3	ಎಣ್ಣೆಕಾಳುಗಳು	ಕ್ಷೇತ್ರ	1.31	1.10	0.10	0.04	0.07	0.055	1.48	1.20
		ಉತ್ಪಾದನೆ								
4	ವಾಣಿಜ್ಯ ಬೆಳೆ									
	ಹತ್ತಿ	ಕ್ಷೇತ್ರ	0.37	0.40	0.00	0.00	0.00	0.00	0.37	0.39
		ಉತ್ಪಾದನೆ								
	ತಂಬಾಕು	ಕ್ಷೇತ್ರ	0.12	0.07	0.00	0.00	0.00	0.00	0.12	0.07
		ಉತ್ಪಾದನೆ								
	ಕಬ್ಬು	ಕ್ಷೇತ್ರ	2.54	2.55	0.00	0.00	0.00	0.00	2.54	2.55
		ಉತ್ಪಾದನೆ								
		ಒಟ್ಟು ಕ್ಷೇತ್ರ	**7.18**	**6.81**	**3.20**	**3.21**	**011**	**0.14**	**10.49**	**10.16**

1. ಬೇಸಾಯ ಸಂಬಂದಿತ ಚಟುವಟಿಕೆಗಳು :

ಪ್ರಸ್ತುತ ಯೋಜನೆಯಡಿ ಬಿಡುಗಡೆಯಾದ ಒಟ್ಟು 38.00 ಲಕ್ಷ ಮೊತ್ತದ ಅನುದಾನದಲ್ಲಿ ರೂ. 37.03 ಲಕ್ಷ ಮೊತ್ತವನ್ನು ವ್ಯಯಿಸಲಾಗಿದೆ. ಈ ಪೈಕಿ ರೂ. 29.87 ಲಕ್ಷ ಮೊತ್ತವನ್ನು ರೈತ ಸಂಪರ್ಕ ಕೇಂದ್ರಗಳ ನಿರ್ವಹಣೆ ಹಾಗೂ ಬಾಡಿಗೆ ವೆಚ್ಚಕ್ಕಾಗಿ ಬಳಸಲಾಗಿದೆ. ಹಾಗೂ ರೂ. 7.16 ಲಕ್ಷ ಮೊತ್ತವನ್ನು ಅರಭಾವಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ವತಿಯಿಂದ ಕೈಗೊಳ್ಳಲಾದ 23 ವಿವಿಧ ತರಬೇತಿಗಳು ಹಾಗೂ ಕೇಂದ್ರದ ನಿರ್ವಹಣೆ ಪ್ರಯುಕ್ತ ಉಪಯೋಗಿಸಿಕೊಳ್ಳಲಾಗಿದೆ.

2. ಕೃಷಿ ಯಾಂತ್ರಿಕರಣ ಹಾಗೂ ಕೊಯ್ಲು ತಂತ್ರಜ್ಞಾನ :

ಪ್ರಸ್ತುತ ವರ್ಷದಲ್ಲಿ ಪಂಚಾಯತದಿಂದ ಬಿಡುಗಡೆಗೊಂಡ ರೂ. 30.00 ಲಕ್ಷ ಮೊತ್ತದ ಪೈಕಿ ರೂ. 29.91 ಮೊತ್ತವನ್ನು ಬಳಸಿ 1993 ಎತ್ತು ಚಾಲಿತ ಕೃಷಿ ಉಪಕರಣಗಳನ್ನು ಶೇ. 50 & 90 ರಿಯಾಯತಿ ದರದಲ್ಲಿ ಪೂರೈಸಲಾಗಿದೆ.

3. ಸಾವಯವ ಗೊಬ್ಬರಗಳು :

ಮಣ್ಣಿನ ಫಲವತ್ತತೆ ವೃದ್ಧಿಸಲು ಸಾವಯವ ಗೊಬ್ಬರಗಳನ್ನು ರೈತರಿಗೆ ಪೂರೈಸುವ ಈ ಯೋಜನೆಯಡಿ ಪ್ರಸ್ತುತ ಸಾಲಿನಲ್ಲಿ ರೂ 10.00 ಲಕ್ಷ ಮೊತ್ತ ಬಿಡುಗಡೆಯಾಗಿದ್ದು, ರೂ 9.97 ಲಕ್ಷ ಅನುದಾನ ವೆಚ್ಚ ಮಾಡಿ 7.2 ಟನ್ ಹಸಿರೆಲೆ ಗೊಬ್ಬರ ಬೀಜಗಳು ಹಾಗೂ 212.3 ಟನ್ ಸಿಟಿ ಕಾಂಪೊಸ್ಟ್, 108.95 ಟನ್ ವರ್ಮಿ ಕಾಂಪೊಸ್ಟ್, 91.65 ಟನ್ ಆರ್‌ಗ್ಯಾನಿಕ್ ಮೆನ್ಯೂರ್ ಪೂರೈಸಲಾಗಿದೆ.

4. ಕೃಷಿ ಕಛೇರಿ ಕಟ್ಟಡ :

ಪ್ರಸ್ತುತ ಆರ್ಥಿಕ ವರ್ಷದಲ್ಲಿ ಈ ಯೋಜನೆಯಡಿ ಬಿಡುಗಡೆಯಾದ ರೂ 25.00ಲಕ್ಷ ಅನುದಾನದಲ್ಲಿ ರೂ.25.00 ಲಕ್ಷ ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಫೇವರ್ಸ್ ಅಳವಡಿಸಲು ಬೈಲಹೊಂಗಲ ರೂ 5.00 ಲಕ್ಷ, ಬೆಳಗಾವಿ ತಾಲೂಕಿನ ರೈತ ಸಂಪರ್ಕ ಕೇಂದ್ರ ಕಾಕತಿ ಹೆಚ್ಚುವರಿ ಕಟ್ಟಡ ನಿರ್ಮಾಣ ರೂ. 5.00 ಲಕ್ಷ, ಸಹಾಯಕ ಕೃಷಿ ನಿರ್ದೇಶಕರ ಕಛೇರಿಯ ಕಟ್ಟಡ ದುರಸ್ತಿಗಾಗಿ ಖಾನಾಪೂರ ರೂ.5.00 ಲಕ್ಷ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಸವದತ್ತಿ ಹೆಚ್ಚುವರಿ ಕಟ್ಟಡ ನಿರ್ಮಾಣ ರೂ.5.00 ಲಕ್ಷ, & ಗೋಕಾಕ ತಾಲೂಕಿನ ಕೌಜಲಗಿ ರೈತ ಸಂಪರ್ಕ ಕೇಂದ್ರದ ಹೆಚ್ಚುವರಿ ಕೊಠಡಿ ನಿರ್ಮಾಣ ರೂ. 5.00 ಲಕ್ಷ ವಿನಿಯೋಗಿಸಿದೆ.

5. ಎನ್. ಎಮ್. ಓ.ಓ.ಪಿ ಎಣ್ಣೆಕಾಳು ಯೋಜನೆ:

2019–20 ನೇ ಸಾಲಿನಲ್ಲಿ ಸದರಿ ಕಾರ್ಯ ಇರುವದಿಲ್ಲ.

6. ತಾಲೂಕ ಪಂಚಾಯತ ಸಸ್ಯ ಸಂರಕ್ಷಣಾ ಯೋಜನೆ :

ರೈತರು ಬೆಳೆದು ನಿಂತ ಪೈರನ್ನು ವಿವಿಧ ಪೀಡೆಗಳಿಂದ ರಕ್ಷಿಸಲು ಚಾಲ್ತಿಯಲ್ಲಿರುವ ಈ ಯೋಜನೆ ಅಡಿ 2019–20 ನೇ ಸಾಲಿನಲ್ಲಿ ಒಟ್ಟು ರೂ 24.50 ಲಕ್ಷ ಬಿಡುಗಡೆಯಾಗಿದ್ದು, 24.46 ಲಕ್ಷ ವೆಚ್ಚ ಭರಿಸಿ ರೂ.16.13 ಲಕ್ಷ ಕೀಟ/ರೋಗನಾಶಕ ಸರಬುರಾಜು ಮಾಡಲು ಬಳಸಿಕೊಳ್ಳಲಾಗಿದೆ. ಹಾಗೂ ರೂ. 8.33 ಲಕ್ಷ ಸಸ್ಯ ಸಂರಕ್ಷಣೆ ಉಪಕರಣಗಳ ಸರಬುರಾಜು ಮಾಡಲು ಬಳಸಿಕೊಳ್ಳಲಾಗಿದೆ.

7. ತಾಲೂಕ ಪಂಚಾಯತ ಕೃಷಿ ಜಾತ್ರೇ–ವಸ್ತು ಪ್ರದರ್ಶನ ಯೋಜನೆ :

ಈ ಯೋಜನೆಯಡಿ ಬಿಡುಗಡೆಯಾದ ರೂ.1.00 ಲಕ್ಷ ಮೊತ್ತವನ್ನು ವಿವಿಧ ಸ್ಥಳಗಳಲ್ಲಿ ನೆರವೇರಿಸಿದ 10 ವಸ್ತು ಪ್ರದರ್ಶನಗಳಿಗೆ ರೂ.0.99 ಲಕ್ಷ ಮೊತ್ತ ವಿನಿಯೋಗಿಸಲಾಗಿದೆ.

ಕಾರ್ಯನಿರ್ವಾಹಕ ಅಭಿಯಂತರರು. ಪಂಚಾಯತ್ ರಾಜ್ ಇಂಜಿನಿಯರಿಂಗ್, ಬೆಳಗಾವಿ

ಬೆಳಗಾವಿ ಜಿಲ್ಲೆಯ ಬೆಳಗಾವಿ, ಖಾನಾಪೂರ, ಬೈಲಹೊಂಗಲ, ಸವದತ್ತಿ, ,ತ್ತು ರಾಮದುರ್ಗ ತಾಲೂಕುಗಳ ಈ ವಿಭಾಗದ ಆಡಳಿತ ಕಕ್ಷೆಯಲ್ಲಿ ಬರುತ್ತಿದ್ದು, ಈ ತಾಲೂಕುಗಳಲ್ಲಿ ಗ್ರಾಮೀಣ ನೀರು ಸರಬುರಾಜು ಯೋಜನೆಗಳು, ಗ್ರಾಮೀಣ ರಸ್ತೇಗಳ ನಿರ್ವಹಣೆ, ಸುಧಾರಣೆ, ಡಾಂಬರೀಕರಣ ಮತ್ತು ಈ ರಸ್ತೇಗಳಲ್ಲಿ ಬರುವ ಸಣ್ಣ ದೊಡ್ಡ ಸೇತುವೆಗಳ ನಿರ್ಮಾಣ, ನಾಲಾ ಬಂಡಿಂಗ್ 100 ಎಕರೆ ನೀರಾವರಿ ಆಗುವಂತಹ ಚಿಕ್ಕ ನೀರಾವರಿ ಕೆರೆಗಳು ನಿರ್ವಹಣೆ ಮತ್ತು ನಿರ್ಮಾಣ, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತೀತರ ಆರೋಗ್ಯ ಇಲಾಖೆಗೆ ಸಂಬಂದಿಸಿದ ಕಟ್ಟಡಗಳ ನಿರ್ವಹಣೆ ಮತ್ತು ನಿರ್ಮಾಣ ಮುಂತಾದ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಈ ವಿಭಾಗ ವತಿಯಿಂದ ಕೈಕೊಳ್ಳಲಾಗುತ್ತದೆ. ಈ ಕಾಮಗಾರಿಗಳ ಉಸ್ತುವಾರಿಗೆ ಪ್ರತಿಯೊಂದು ತಾಲೂಕಿನ ಕೇಂದ್ರ ಸ್ಥಳದಲ್ಲಿ ಒಂದೊಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರವರ ಉಪ ವಿಭಾಗ ಕಾರ್ಯಾಲಯಗಳು ಇರುವು, ಅವುಗಳಲ್ಲಿ ವಿವಿಧ ಸ್ಥಳದ ತಾಂತ್ರಿಕ ಅಧಿಕಾರಿಗಳ ಈ ಕೆಲಸವಗಳನ್ನು ನೇರವಾಗಿ ನಿರ್ವಹಿಸುವರು. ಬೆಳಗಾವಿಯಲ್ಲಿರುವ ವಿಭಾಗೀಯ ಕಾರ್ಯನಿರ್ವಾಹಕ ಅಭಿಯಂತರರು ಈ ಎಲ್ಲ ಕಾಮಗಾರಿಗಳ ನಿರೀಕ್ಷಣೆ ಮಾಡುವರು.

ಮು.ಮ.ಗ್ರಾ.ರ.ಅ.ಯೋ 3054 Lumpsum Grant (ಪಿಬಿ–1)

2019–20 ನೇ ಸಾಲಿಗೆ 268 ರಸ್ತೆ ಕಾಮಗಾರಿಗಳು ಮಂಜೂರಾಗಿದ್ದು, ಅಂದಾಜು ಪಟ್ಟಿಯ ಮೊತ್ತ ರೂ. 6522.50 ಲಕ್ಷ ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿವೆ.

3054 ಸಿ.ಎಮ್.ಜಿ.ಎಸ್.ವಾಯ್ (ಪಿಬಿ–1)

2019–20 ನೇ ಸಾಲಿಗೆ 85 ರಸ್ತೆ ಕಾಮಗಾರಿಗಳು ಮಂಜೂರಾಗಿದ್ದು 2019–20 ನೇ ಸಾಲಿಗೆ ರೂ.294.18 ಲಕ್ಷ ಬಿಡುಗಡೆಯಾಗಿದೆ.. 83 ಕಾಮಗಾರಿಗಳು ಪೂರ್ಣಗೊಂಡಿವೆ. ಖುಲೂ 196.15 ಲಕ್ಷ ಒಟ್ಟು ಖರ್ಚಾಗಿರುತ್ತದೆ.

3054 ಟಾಸ್ಕಫೋರ್ಸ (ಪಿಬಿ–1)

2019–20 ನೇ ಸಾಲಿಗೆ 70 ರಸ್ತೆ ಕಾಮಗಾರಿಗಳು ಮಂಜೂರಾಗಿದ್ದು, ಅದರಲ್ಲಿ 34 ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿದ್ದು, ಹಾಗೂ 36 ಕಾಮಗಾರಿಗಳು ಸಂಪೂರ್ಣವಾಗಿರುತ್ತವೆ.

ಲೋಕಸಭಾ ಸದಸ್ಯರ ಸ್ಥಳೀಯ ಪ್ರದೆಶಾಭಿವೃದ್ಧಿ ಯೋಜನೆ (ಪಿಬಿ–1)

ಸನ್ 2019–20 ನೇ ಸಾಲಿನಲ್ಲಿ ಒಟ್ಟು ರೂ ಅನುದಾನ 644.00 ಲಕ್ಷಗಳಿದ್ದು, ಅದರಲ್ಲಿ 119 ಕಟ್ಟಡ ಮತ್ತು ರಸ್ತೆ ಕಾಮಗಾರಿಗಳನ್ನು ಕೈಗೊಂಡಿರುತ್ತವೆ. ಇವುಗಳಲ್ಲಿ 07 ಕಾಮಗಾರಿಗಳ ವಿವಿಧ ಹಂತದಲ್ಲಿ ಪ್ರಗತಿಯಲ್ಲಿದೆ. ಬಾಕಿ ಉಳಿದ 78 ಕಾಮಗಾರಿಗಳು ಪ್ರಾರಂಭಿಸಲಾಗುವುದು.

ಕರ್ನಾಟಕ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ (ಪಿಬಿ–1)

2019–20 ನೇ ಸಾಲಿನಲ್ಲಿ ಒಟ್ಟು 2.25 ಲಕ್ಷ ಬಿಡುಗಡೆಯಾಗಿರುತ್ತದೆ. ಒಟ್ಟು 6 ಕಾಮಗಾರಿಗಳು ಇದ್ದು, 1 ಕಾಮಾಗಾರಿಗಳು ಪೂರ್ಣಗೊಂಡಿದ್ದು, 3 ಕಾಮಗಾರಿಗಳು ಪ್ರಗತಿಯಲ್ಲಿವೆ. 2 ಕಾಮಗಾರಿಗಳನ್ನು ಸದ್ಯದಲ್ಲಿ ಪ್ರಾರಂಭಿಸಲಾಗುವುದು.

ಜಿಲ್ಲಾ ಪಂಚಾಯತ ಶಾಸನಬದ್ದ (ಅಭಿವೃದ್ಧಿ) ಅನುದಾನ ಯೋಜನೆ ಅಡಿಯಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳು

2019–20 ನೇ ಸಾಲಿನಲ್ಲಿ ಒಟ್ಟು ರೂಪಾಯಿ 330.37 ಲಕ್ಷ ಬಿಡುಗಡೆಯಾಗಿರುತ್ತದೆ. ಅಂದಾಜು ಮೊತ್ತ ರೂ. 330.37 ಒಟ್ಟು ಕಟ್ಟಡ ಕೆಲಸಗಳನ್ನು ತೆಗೆದುಕೊಂಡಿದ್ದು, ಒಟ್ಟು 155 ಕಟ್ಟಡ ಕಾಮಗಾರಿ ಪೂರ್ಣಗೊಂಡಿವೆ. ರೂ 165.81 ಲಕ್ಷ ಒಟ್ಟು ಖರ್ಚಾಗಿರುತ್ತದೆ.

2019–20 ನೇ ಸಾಲಿನ 2059 ಯೋಜನೇತರ

2019–20 ನೇ ಸಾಲಿನಲ್ಲಿ ಒಟ್ಟು ರೂಪಾಯಿ 72.74 ಲಕ್ಷ ಬಿಡುಗಡೆಯಾಗಿರುತ್ತದೆ.. ಅಂದಾಜು ಮೊತ್ತವು ರೂ.72.70 ಲಕ್ಷ, ಒಟ್ಟು 45 ಕಟ್ಟಡ ಕೆಲಸಗಳನ್ನು ತೆಗೆದಕೊಂಡಿದ್ದು, ಒಟ್ಟು 45 ಕಾಮಗಾರಿ ಪೂರ್ಣಗೊಂಡಿವೆ. ರೂ 69.59 ಲಕ್ಷ ಒಟ್ಟು ಖರ್ಚಾಗಿರುತ್ತದೆ.

2019–20 ನೇ ಸಾಲಿನ 2702 ಸಣ್ಣ ನೀರಾವರಿ ಯೋಜನೇತರ

2019–20 ನೇ ಸಾಲಿನಲ್ಲಿ ಒಟ್ಟು ರೂಪಾಯಿ 43.50 ಲಕ್ಷ ಬಿಡುಗಡೆಯಾಗಿರುತ್ತದೆ.. ಅಂದಾಜು ಮೊತ್ತ ರೂ. 43.50 ಲಕ್ಷ, ಒಟ್ಟು ಕೆರೆಗಳ ಅಭಿವೃದ್ಧಿ ಹಾಗೂ ರಿಪೇರಿ ಕೆಲಸಗಳನ್ನು ತೆಗೆದುಕೊಂಡಿದ್ದು, ಒಟ್ಟು 25 ಕಾಮಗಾರಿ ಪೂರ್ಣಗೊಂಡಿವೆ.

2019–20 ನೇ ಸಾಲಿನ ಶಿಕ್ಷಣ ಇಲಾಖೆ

2019–20 ನೇ ಸಾಲಿನಲ್ಲಿ ಒಟ್ಟು ರೂಪಾಯಿ 155.975 ಲಕ್ಷ ಬಿಡುಗಡೆಯಾಗಿರುತ್ತದೆ. ಒಟ್ಟು 192 ಕೆಲಸಗಳನ್ನು ತೆಗೆದುಕೊಂಡಿದ್ದು, ಒಟ್ಟು 181 ಶಾಲಾ ಕಟ್ಟಡ ರಿಪೇರಿ ಕಾಮಗಾರಿ ಪೂರ್ಣಗೊಂಡಿವೆ. ರೂ 127.870 ಲಕ್ಷ ಒಟ್ಟು ಖರ್ಚಾಗಿರುತ್ತದೆ.

ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಕಟ್ಟಡ ಕಾಮಗಾರಿಗಳು

2019–20 ನೇ ಸಾಲಿನಲ್ಲಿ ಒಟ್ಟು ರೂಪಾಯಿ40.00 ಲಕ್ಷ ರೂಪಾಯಿ ಬಿಡುಗಡೆಯಾಗಿರುತ್ತದೆ. ಅಂದಾಜು ಮೊತ್ತ ರೂ 40.00 ಲಕ್ಷ. ಒಟ್ಟು 4 ಕಟ್ಟಡ ಹಾಗೂ ರಿಪೇರಿ ಕೆಲಸಗಳನ್ನು ತೆಗೆದಕೊಂಡಿದ್ದು, 2 ಕಾಮಗಾರಿಗಳು ಪ್ರಗತಿಯಲ್ಲಿ ರೂ.8.84 ಲಕ್ಷ ಒಟ್ಟು ಖರ್ಚಾಗಿರುತ್ತದೆ. 2 ಕಾಮಗಾರಿ ಪ್ರಾರಂಭಿಸಬೇಕು.

ನಬಾರ್ಡ –24 ಸೇತುವೆ

2019–20 ನೇ ಸಾಲಿನಲ್ಲಿ 4 ಕಾಮಗಾರಿಗಳು ಇದ್ದು, 3 ಕಾಮಗಾರಿಗಳು ಪೂರ್ಣ್ಗೊಂಡಿದ್ದು 1 ಕಾಮಗಾರಿ ಪ್ರಗತಿಯಲ್ಲಿದೆ

ಗ್ರಾಮ ವಿಕಾಸ ಯೋಜನೆ

2019–20 ನೇ ಸಾಲಿನಲ್ಲಿ ಒಟ್ಟು ರೂಪಾಯಿ 1165.94 ಲಕ್ಷ ಬಿಡುಗಡೆಯಾಗಿರುತ್ತದೆ. ಅಂದಾಜು ಮೊತ್ತು ರೂ. 1725.00 ಲಕ್ಷ, ಒಟ್ಟು 21 ರಸ್ತೆ ಮತ್ತು ಕಟ್ಟಡ ಕೆಲಸಗಳನ್ನು ತೆಗೆದುಕೊಂಡಿದ್ದು, ಒಟ್ಟು 17 ಕಾಮಗಾರಿಗಳು ಪೂರ್ಣಗೊಂಡಿವೆ ಮತ್ತು ರೂ. 997.56 ಲಕ್ಷ ಒಟ್ಟು ಖರ್ಚಾಗಿರುತ್ತದೆ.

ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆ

2019–20 ನೇ ಸಾಲಿನಲ್ಲಿ ಒಟ್ಟು 19 ರಸ್ತೆ ಮತ್ತು ಕಟ್ಟಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, 19 ಕಾಮಗಾರಿಗಳು ಪ್ರಗತಿಯಲ್ಲಿವೆ.

ಪಂಚಾಯತ ರಾಜ್ ಇಂಜಿನಿಯರಿಂಗ್ ವಿಭಾಗ ಚಿಕ್ಕೋಡಿ

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಹುಕ್ಕೇರಿ, ಅಥಣಿ, ಗೋಕಾಕ ಹಾಗೂ ರಾಯಬಾಗ ತಾಲೂಕುಗಳು ನಮ್ಮ ವಿಭಾಗದ ಆಡಳಿತ ಕಕ್ಷೆಯಲ್ಲಿ ಬರುತ್ತಿದ್ದು, ಈ ತಾಲೂಕಿನಲ್ಲಿಯ ಗ್ರಾಮೀಣ ನೀರು ಸರಬರಾಜು ಯೋಜನೆಗಳು ಗ್ರಾಮೀಣ ರಸ್ತೆಗಳು ನಿರ್ವಹಣೆ, ಸುಧಾರಣೆ ಡಾಂಬರೀಕರಣ ಮತ್ತು ಈ ರಸ್ತೆಗಳಲ್ಲಿ ಬರುವ ಸಣ್ಣ, ದೊಡ್ಡ ಸೇತುವೆಗಳ ನಿರ್ಮಾಣ, ನಾಲಬಂಡಿಂಗ್, 100 ಎಕರೆ ನೀರಾವರಿ ಅಗುವಂತಹ ಚಿಕ್ಕ ನೀರಾವರಿ ಕೆಲಸಗಳ ನಿರ್ವಹಣೆ ಮತ್ತು ನಿರ್ಮಾಣ ಮುಂತಾದ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಈ ವಿಭಾಗವು ಕೈಗೊಳ್ಳುತ್ತದೆ. ಈ ಕಾಮಗಾರಿಗಳ ಉಸ್ತುವಾರಿಗಳಿಗೆ ಪ್ರತಿಯೊಂದು ತಾಲೂಕಿನ ಕೇಂದ್ರ ಸ್ಥಳದಲ್ಲಿ ಒಂದೋಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರವರ ಉಪ ವಿಭಾಗಗಳು ಇರುವವು. ಅವುಗಳಲ್ಲಿಯ ವಿವಿಧ ಸ್ಥಳದ ತಾಂತ್ರಿಕ ಅಧಿಕಾರಿಗಳು ಈ ಕೆಲಸವನ್ನು ನೇರವಾಗಿ ನಿರ್ವಹಿಸುವರು. ಚಿಕ್ಕೋಡಿಯಲ್ಲಿರುವ ವಿಭಾಗೀಯ ಕಾರ್ಯಾಲಯದಲ್ಲಿರುವ ಕಾರ್ಯನಿರ್ವಾಹಕ ಅಭಿಯಂತರರು ಈ ಎಲ್ಲ ಕಾವಗಾರಿಗಳ ನಿರೀಕ್ಷಣೆ ಮಾಡುವದು.

ಈ ಎಲ್ಲ ಕಾಮಗಾರಿಗಳ ಬಗ್ಗೆ 2019–20ನೇ ಸಾಲಿನಲ್ಲಿ ಆದ ಅಭಿವೃದ್ಧಿ ಕಾಮಗಾರಿಗಳ ಪಕ್ಷಿ ನೋಟ ಈ ಕೆಳಗಿನಂತಿದೆ.

1) ಮುಖ್ಯಮಂತ್ರಿಗಳ ಅನುದಾನದಲ್ಲಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ

A] ಸದರಿ ಯೋಜನೆಯಡಿಯಲ್ಲಿ ಗ್ರಾಮೀಣ ರಸ್ತೆಗಳ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ. ಸನ್ 2019–20ನೇ ಸಾಲಿನಲ್ಲಿ ರೂ. 480.82 ಲಕ್ಷ ಅನುದಾನ ಹಂಚಿಕೆಯಾಗಿದ್ದು, ಹೊಸ ಒಟ್ಟು 128 ಕಾಮಗಾರಿಗಳು ಮಂಜೂರಾಗಿದ್ದು, ಇದರಲ್ಲಿ ಎಲ್ಲ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಈ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ರೂ.480.82 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ ಹಾಗೂ ರೂ. 396.931 ಲಕ್ಷ ವೆಚ್ಚವಾಗಿರುತ್ತದೆ.

B] 3054–ನಿರ್ವಹಣಾ ಅನುದಾನ:

ಸದರಿ ಯೋಜನೆಯಡಿಯಲ್ಲಿ ಗ್ರಾಮೀಣ ರಸ್ತೆಗಳ ನಿರ್ವಹಣೆ/ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ. ಸನ್ 2019–20ನೇ ಸಾಲಿನ 3054–ನಿರ್ವಹಣಾ ಅನುದಾನ (3054–80–196–1–01–300) ಯೋಜನೇತರ ಕಾಮಗಾರಿಗಳಿಗೆ ರೂ.305.53 ಲಕ್ಷಗಳ ಅನುದಾನ ನಿಗದಿಪಡಿಸಿದ್ದು, ರೂ.539.00 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ. ಒಟ್ಟು ಕಾಮಗಾರಿಗಳ ಸಂಖ್ಯೆ 109 ಇದ್ದು 107 ಕಾಮಗಾರಿಗಳು ಪೂರ್ಣಗೋಡಿರುತ್ತವೆ. ರೂ. 343.889 ಲಕ್ಷ ವೆಚ್ಚವಾಗಿರುತ್ತವೆ.

2) 2017–18ನೇ ಸಾಲಿನ ಶಾಸನಬದ್ಧ ಅನುದಾನ

ಶಾಸನಬದ್ಧ ಯೋಜನೆಯಡಿಯಲ್ಲಿ ಶಾಲಾ ಕಟ್ಟಡ/ಅಂಗನವಾಡಿ ಕಟ್ಟಡ/ಚರಂಡಿ ನಿರ್ಮಾಣ/ ಸಮುದಾಯ ಭವನ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ. ಸನ್ 2019–20 ಸಾಲಿನಲ್ಲಿ ರೂ.469.63 ಲಕ್ಷದ 168 ಕಾಮಗಾರಿಗಳಿಗೆ ಕ್ರಿಯಾ ಯೋಜನೆಯು ಅನುಮೋದನೆಗೊಂಡಿರುತ್ತದೆ. 167 ಕಾಮಗಾರಿಗಳು ಪೂರ್ತಿಗೊಂಡಿದ್ದು, ಒಟ್ಟು ರೂ. 352.00 ಲಕ್ಷ ಅನುದಾನ ಬಿಡುಗಡೆಯಾಗಿ ರೂ. 316.112 ಲಕ್ಷಗಳ ವೆಚ್ಚವಾಗಿರುತ್ತದೆ.

3) ನಬಾರ್ಡ ಆರ್.ಐ.ಡಿ.ಎಫ್–24

ನಬಾರ್ಡ ಯೋಜನೆಯಡಿ ಹೊಸ ಗ್ರಾಮೀಣ ರಸ್ತೆಗಳ ಹಾಗೂ ಬ್ರಿಜ್ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಗಾಗುತ್ತದೆ. ನಬಾರ್ಡ ಆರ್.ಐ.ಡಿ.ಎಫ್–24 ರಲ್ಲಿ ಒಟ್ಟು 7 ಕಾಮಗಾರಿಗಳು ರೂ. 810.00 ಲಕ್ಷಗಳಿಗೆ ಮಂಜೂರಾಗಿ ರೂ. 112.64 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಅದರಲ್ಲಿ ರೂ. 414.003 ಲಕ್ಷ ವೆಚ್ಚ ಭರಿಸಲಾಗಿದೆ. ಉಳಿದ ಅನುದಾನವನ್ನು ನಬಾರ್ಡ–20 & 21 ರಲ್ಲಿ ವೆಚ್ಚ ಭರಿಸಲಾಗಿದೆ. 6 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

4) ನಬಾರ್ಡ ಆರ್.ಐ.ಡಿ.ಎಫ್–25

ನಬಾರ್ಡ ಯೋಜನೆಯಡಿ ಹೊಸ ಗ್ರಾಮೀಣ ರಸ್ತೆಗಳ ಹಾಗೂ ಬ್ರಿಜ್ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಗಾಗುತ್ತದೆ. ನಬಾರ್ಡ ಆರ್.ಐ.ಡಿ.ಎಫ್–25 ರಲ್ಲಿ ಒಟ್ಟು 7 ಕಾಮಗಾರಿಗಳು ಮಂಜೂರಾಗಿದ್ದು, 7 ಅಂದಾಜು ಪತ್ರಿಕೆಗಳು ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಲಾಗಿದೆ.

5) ಗ್ರಾಮ ವಿಕಾಸ ಯೋಜನೆ

ಸದರಿ ಯೋಜನೆಯಡಿ 28 ಗ್ರಾಮಗಳು ಅಭಿವೃದ್ಧಿಗಾಗಿ ಆಯ್ಕೆಗೊಂಡಿದ್ದು, ಈ ಆಯ್ಕೆಯಾದ 28 ಗ್ರಾಮಗಳಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ, ಅಂಗನವಾಡಿ ಕಟ್ಟಡ ಮತ್ತು ಸಮುದಾಯ ಭವನ ಕಟ್ಟಡಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇವುಗಳಲ್ಲಿ 24 ಕಾಮಗಾರಿಗಳು ಪೂರ್ಣಗೊಂಡು 4 ಕಾಮಗಾರಿಗಳು ಪ್ರಗತಿಯಲ್ಲಿವೆ. ದಿ.31–3–2019 ರ ಅಂತ್ಯದವರೆಗೆ ರೂ. 2237.97 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ ರೂ. 2049.954 ವೆಚ್ಚವಾಗಿರುತ್ತದೆ.

6) ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆ

